ಅಪರಂಜಿ

ತಿಳಿನಗೆಯ ಕಾರಂಜಿ



ಬೆಳ್ಳಿ ಹಬ್ಬದ ವರ್ಷ

ಆಗಸ್ಟ್ - 2008





ಅಳಬೇಡ. ಆನೆ ತೋರಿಸ್ತೀನಿ. ಕುದುರೆ ಬೇಡದೇ ಇದ್ರೆ.....


ಲೇ, ಬೇಗ ಬಾರೆ, ಮಗು ಬಹಳ ಅಳುತ್ತೆ

ಕೊರವಂಜಿಯಿಂದ

ಬಿಡಿ ಪ್ರತಿ: ರೂ. 10.00

ಅಪರಂಜಿ

ತಿಳಿನಗೆಯ ಕಾರಂಜಿ





ಸಂಪುಟ 25
ಸಂಚಿಕೆ - 11
ಆಗಸ್ಟ್ - 2008

ಚಂದಾ ವಿವರ:
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-
ಕೆಲಸದ ವೇಳೆ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ
ಮುದ್ರಣ: ರವಿ ಗ್ರಾಫಿಕ್ಸ್
ಅಕ್ಷರ ಜೋಡಣೆ:
ಒಮೇಗಾ ಲೇಸರ್ ಟೆಕ್

ಈ ಸಂಚಿಕೆಯಲ್ಲಿ.....

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com website: aparanjimag.com

ಸಂಪರ್ಕ ವಿಳಾಸ: ಶ್ರೀ ಬೇಲೂರು ರಾಮಮೂರ್ತಿ, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 808-26688488. email: brmurthy@dataone.in



○ ಪ್ರಕಾಶ್

ಮುಖ್ಯಮಂತ್ರಿ, ಸಚಿವ ಸಹೋದ್ಯೋಗಿಗಳ ವಾಸ್ತು ವ್ಯಾಮೋಹ – ಪತ್ರಿಕೆ

● ವಸ್ತು ವ್ಯಾಮೋಹ ಇಲ್ಲದಿದ್ದರೆ ಸಾಕು!!

★★★

ಹೈಕೋರ್ಟ್‌ನಲ್ಲಿ 70 ನಿಮಿಷದಲ್ಲಿ 56 ಪ್ರಕರಣಗಳ ಇತ್ಯರ್ಥ – ಸುದ್ದಿ

● ಒಂದು ದಿನದ ಕ್ರಿಕೆಟ್ ಪ್ರಭಾವ !!

★★★

ಹಣ ದುರುಪಯೋಗ; ಸಮಾಜ ಕಲ್ಯಾಣಾಧಿಕಾರಿ ಅಮಾನತು – ಪತ್ರಿಕೆ

● ಪಾಪ! ಅವರೂ ಸಮಾಜದ ಅಂಗವೇ ತಾನೆ !!

★★★

ಚಿಕನ್‌ಗುನ್ಯ ತಡೆಗಟ್ಟಲು ಆಗ್ರಹ – ಸುದ್ದಿ

● ಸೊಳ್ಳೆಗಳೆಲ್ಲ ನಸುನಕ್ಕವಂತೆ !!

★★★

ಪೆಟ್ರೋಲ್ ಕೊರತೆಯಿಲ್ಲ; ಶ್ರೀ ಹಾಲಪ್ಪ – ಪತ್ರಿಕೆ

● ಮದರ್ ಡೈರಿ ವಾಹನಗಳಿಗೆ ಒಳ್ಳೆ ಸುದ್ದಿ!

★★★

ಯಡಿಯೂರಪ್ಪ ನಕಲಿ ಮುಖ್ಯಮಂತ್ರಿ – ಶ್ರೀ ಬಂಗಾರಪ್ಪ

● ಜಟ್ಟಿ ಬಿದ್ದರೂ.... !!

★★★

ಹಣ – ಬಲದ ಪ್ರಭಾವ; ಎಚ್.ಡಿ.ಕೆ. ಟೀಕೆ – ಪತ್ರಿಕೆ

● ಅನುಭವದ ಮಾತು !!

★★★

"ವೈದ್ಯಕೀಯ ಕೃತಿಗಳು ಕನಿಷ್ಠ ಶಿಕ್ಷಣ ಪಡೆದವರನ್ನೂ ತಲುಪಬೇಕು" – ಹೇಳಿಕೆ

● ಅಂಗಂದ್ರೇನ್ ಸಾ !??

★★★

ಬುಷ್‌ಗಿಂತ ಆಡ್ವಾನಿ ಅಪಾಯಕರ – ಹೇಳಿಕೆ

● ಯಾರಿಗೆ ??

★★★

ನಮ್ಮ ನಮ್ಮಲ್ಲಿ

ಹುಟ್ಟೂರಿನ ಮೋಹ ಅಂದರೆ ಹೇಗಿರುತ್ತೆ ಎಂಬುದು ನನಗೆ ಚೆನ್ನಾಗಿ ಮನವರಿಕೆಯಾದದ್ದು. ಈ ಬಾರಿ ಶಿವಮೊಗ್ಗೆಗೆ ಹೋದಾಗ. ಅಪರಂಜಿಯ ಬೆಳ್ಳಿಯ ಹಬ್ಬದ ಸಮಾರಂಭದ ಪೂರ್ವಭಾವಿ ಸಿದ್ಧತೆಗಳಿಗಾಗಿ ಭಾನುವಾರದ ಸಮಾರಂಭಕ್ಕೆ ಶುಕ್ರವಾರವೇ ಶಿವಮೊಗ್ಗೆ ತಲುಪಬೇಕಾಯಿತು. ನನ್ನ ಜೊತೆ ಸ್ಥಳವಂದಿಗರಾದ ಶ್ರೀಹರಿ ಮತ್ತು ಶೇಷಗಿರಿ ಇದ್ದರು. ಸ್ಟೇಷನ್ನಿನಿಂದ ಹೋಟೆಲಿಗೆ ಹೋಗುವ ದಾರಿಯಲ್ಲೇ ಶುರುವಾಯಿತು ನೋಡಿ ರನ್ನಿಂಗ್ ಕಾಮೆಂಟರಿ. ''ಅಗೋ ಅಲ್ಲೋಂದು ಮುರುಕು ಗೋಡೆ ಕಾಣುತ್ತಲ್ಲಾ ಅಲ್ಲೇ ಪುಲಿಕೇಶಿ ವ್ಯಾಯಾಮ ಶಾಲೆ ಇದ್ದದ್ದು'' ಅಂತ ಶ್ರೀಹರಿ ಹೇಳಿದರೆ, ''ಅಲ್ಲಿ ನೋಡು ಆ ಬೇಲಿ. ನಮ್ಮ ಮೇಷ್ಟರು ಅಟ್ಟಿಸಿಕೊಂಡು ಬಂದಾಗ ಆ ಬೇಲಿ ಹಾರಿಯೇ ನಾನು ಮನೆ ಸೇರಿದ್ದು'' ಅಂತ ಹೇಳುತ್ತಿದ್ದ ಶೇಷಗಿರಿ. ''ಬೇಲಿ ಎಲ್ಲಿದೆ ಶೇಷಗಿರಿ? ನೀನು ತೋರಿಸಿದ ಕಡೆ ಯಾವುದೋ ಕಮರ್ಷಿಯಲ್ ಕಾಂಪ್ಲೆಕ್ಸ್ ಕಾಣುತ್ತಲ್ಲಾ'' ಅಂತ ನಾನು ಹೇಳಿದ್ದಕ್ಕೆ ''ನಾವೆಲ್ಲಾ ಹುಡುಗರಾಗಿದ್ದಾಗ ಬೇಲಿ ಇತ್ತು ಈಗ ಅದೆಲ್ಲಾ ಮಾಯವಾಗಿದೆ. ಆದರೂ ಆ ಜಾಗ ನೋಡಿದರೆ ನನಗೆ ಮೊದಲು ಕಾಣೋದು ಬೇಲೀನೇ'' ಎಂದ ಶೇಷಗಿರಿ. ಶೇಷಗಿರಿಗೆ ಮೂರು ಹೆಸರುಗಳು. ಅವನ ಅಫಿಷಿಯಲ್ ನಾಮಧೇಯ ಆರ್..ಶೇಷಗಿರಿ ರಾವ್. ನಮಗೆಲ್ಲಾ ಅವನು ಶೇಷಗಿರಿ. ಶಿವಮೊಗ್ಗೆಯ ಅವನ ಬಾಲ್ಯದ ಒಡನಾಡಿಗಳಿಗೆ ಶೇಷ. ಎಂಭತ್ತರ ದಶಕದ ಪ್ರಾರಂಭದಲ್ಲಿ ಅರಾಸೇ ಅವರ ಸ್ನೇಹಕ್ಕೆ ಮಣಿದು ಅಪರಂಜಿ ಪತ್ರಿಕೆಯನ್ನ ಚಿತ್ರದುರ್ಗದಲ್ಲಿ ಪ್ರಾರಂಭಿಸಿ ಅದರ ಪ್ರಥಮ ಸಂಪಾದಕರಾಗಿದ್ದ ಶೇಷಗಿರಿರಾಯರನ್ನ ಭಾನುವಾರದಂದು ಶಿವಮೊಗ್ಗೆಯ ಕುವೆಂಪು ರಂಗಮಂದಿರದಲ್ಲಿ ನಡೆದ ಅಪರಂಜಿ ಬೆಳ್ಳಿ ನಗೆ ಹಬ್ಬದಲ್ಲಿ ಸನ್ಮಾನಿಸಿದೆವು. ಮಾನ್ಯ ಶ್ರೀ ಶಂಕರ ಮೂರ್ತಿಯವರು ಶೇಷಗಿರಿಯವರನ್ನು



ಸನ್ಮಾನಿಸುತ್ತಾ "ನನ್ನ ಶೇಷನಿಗೆ ಗೌರವ ಸಲ್ಲಿಸೋದಕ್ಕೆ ಅಂತಾಲೇ ಬೆಂಗಳೂರಿನಿಂದ ದೌಡಾಯಿಸಿಕೊಂಡು ಬಂದೆ" ಎನ್ನುತ್ತಾ ಬಹು ಆತ್ಮೀಯವಾಗಿ ತಮ್ಮ ಬಾಲ್ಯದ ನೆನಪುಗಳನ್ನು ಹಂಚಿಕೊಂಡರು. ಅಂದಿನ ಸಮಾರಂಭದಲ್ಲಿ ಶೇಷಗಿರಿಯ ಬಾಲ್ಯದ ಒಡನಾಡಿಗಳ ಒಂದು ದೊಡ್ಡ ಗುಂಪೇ ನೆರೆದಿತ್ತು.

ನಮ್ಮ ಸಮಾರಂಭದ ಯಶಸ್ಸಿಗೆ ಮುಖ್ಯ ಕಾರಣರೆಂದರೆ ಮಾನಸ ಟ್ರಸ್ಟ್‌ನ ಡಾ|| ಅಶೋಕ್ ಪೈ ಅವರು. ಚೈತನ್ಯವೇ ಮೂರ್ತಸ್ವಾರೂಪ ವಾಗಿರುವಂತಹ ಈ ಉತ್ಸಾಹೀ ವೈದ್ಯರಿಗೆ ಬಿಡುವೆಂಬುದೇ ಇಲ್ಲದಿದ್ದರೂ ನೀವು ಏನು ಕೇಳಿದರೂ ಅದನ್ನು ವ್ಯವಸ್ಥೆಗೊಳಿಸಬಲ್ಲ ಸಮರ್ಥರು ಇವರು. ನಮ್ಮ ಮೊದಲ ಭೇಟಿಯಿಂದಲೇ ಪತ್ರಿಕಾಗೋಷ್ಠಿಯಿಂದ ಮೊದಲುಗೊಂಡು ಎಲ್ಲ ಕೆಲಸಗಳನ್ನೂ ಅಚ್ಚುಕಟ್ಟಾಗಿ ಮಾಡಿಕೊಟ್ಟ ಈ ವಿಶಾಲ ಹೃದಯಿಗೆ ಅಪರಂಜಿಯ ತುಂಬು ಹೃದಯದ ನಮನ.

ಸಮಾರಂಭದ ಹೈಲೈಟ್ ಎಂದರೆ ನಮ್ಮವರೇ ಆದ ಶ್ರೀನಿವಾಸ ವೈದ್ಯರ ಚಿಂತನಾಪೂರ್ಣವಾಗಿದ್ದ ಉಲ್ಲಾಸಭರಿತ ಭಾಷಣ. ಸಾಮಾನ್ಯ ನಗೆ ಭಾಷಣಕ್ಕೂ , ಪ್ರೌಢ ಚಿಂತನೆಗೂ ಇದ್ದ ಸೂಕ್ಷ್ಮ ವ್ಯತ್ಯಾಸಗಳನ್ನು ಇವರ ಭಾಷಣದಲ್ಲಿ ಕಾಣಬಹುದಾಗಿದ್ದಿತು. ಇಂದಿನ ಉದಯೋನ್ಮುಖ ನಗೆಕಾರರು ಇಂತಹ ಭಾಷಣಗಳಿಂದ ಬಹಳಷ್ಟು ಕಲಿಯಬಹುದೆಂದು ನನ್ನ ಅನಿಸಿಕೆ. ನಮ್ಮ ಸಮಾರಂಭಕ್ಕೆಂದೇ ಉಡುಪಿಯಿಂದ ಬಂದ ಶ್ರೀಮತಿ ಸಂಧ್ಯಾ ಶೆಣೈ ರವರ ನಗೆಮಾತುಗಳು ನಿಜಕ್ಕೂ ಚೇತೋಹಾರಿಯಾಗಿದ್ದವು. ತಮ್ಮ ಅನುಭವಗಳನ್ನೇ ನಗೆಯ ಲೇಪಕೊಟ್ಟು ಹೇಳಿದ ಇವರ ಮಾತಿನ ಶೈಲಿಯೇ ಒಂದು ವಿಶಿಷ್ಟ ರೀತಿಯದು. ಯಾವುದೇ ಭಿಢೆಯಲ್ಲದೇ ತುಂಬಾ ರಿಲ್ಯಾಕ್ಸ್‌ಡ್ ಆಗಿ ಹೇಳುವ ಸಂಧ್ಯಾ ಅವರಿಗೆ ನಗೆ ಲೋಕದಲ್ಲಿ ಉತ್ತಮ ಭವಿಷ್ಯವಿದೆ ಅನ್ನಿಸುತ್ತದೆ. ಶಿವಮೊಗ್ಗೆಯ ನಗೆ ರಸಿಕರು ಸುರಿಯುತ್ತಿದ್ದ ಮಳೆಯನ್ನೂ ಲೆಕ್ಕಿಸದೇ ಹೆಚ್ಚಿನ ಸಂಖ್ಯೆಯಲ್ಲಿ ನಮ್ಮ ಸಮಾರಂಭದಲ್ಲಿ ಭಾಗವಹಿಸಿ ನಮ್ಮ ಉತ್ಸಾಹವನ್ನು ದ್ವಿಗುಣಗೊಳಿಸಿದರು.

ಗುರುಗುಹ ಸಂಗೀತ ಮಹಾವಿದ್ಯಾಲಯದ ವಿದ್ಯಾರ್ಥಿನಿಯರು ಬೇಂದ್ರೆಯವರ "ಉಲ್ಲಾಸದ ಗೀತೆ"ಗಳನ್ನು ಬಹು ಸುಶ್ರಾವ್ಯವಾಗಿ ಹಾಡಿದರು. ಈ ಗುಂಪನ್ನು ನಮಗೆ ಪರಿಚಯಿಸಿಕೊಟ್ಟ ಶಿವಮೊಗ್ಗೆಯ ಶ್ರೀಮತಿ ರಮಾಪ್ರಸಾದ್‌ರವರಿಗೆ ಅಪರಂಜಿ ಆಭಾರಿ. ನಮ್ಮವರೇ ಆದ ಆನಂದ ನಡೆಸಿಕೊಟ್ಟ "ನೀವು ಕೇಳಿದಿರಿ" ಕ್ವಿಜ್ ಕಾರ್ಯಕ್ರಮ ಉತ್ತಮ ಪ್ರಶ್ನೆಗಳ ಅಭಾವವಿದ್ದರೂ ಸ್ವಾರಸ್ಯವಾಗಿ ಮೂಡಿಬಂತು. ನಮ್ಮ ರಾಮನಾಥರ ಆಶು ಕವನಗಳು ಇದಕ್ಕೆ ಮುಖ್ಯ ಕಾರಣ.

ಶಿವಮೊಗ್ಗ ನಗು ಕೂಟದ ಶ್ರೀಮತಿ ಪ್ರತಿಭಾ , ಕೊರವಂಜಿಯ ವೇಷದಲ್ಲಿ ಬಂದು ಪ್ರೇಕ್ಷಕರನ್ನು ರಂಜಿಸಿದರು. ಶಿವಮೊಗ್ಗೆಯ ರೋಟರಿ ಕ್ಲಬ್ ನಮ್ಮ ಪ್ರಯತ್ನಕ್ಕೆ ಸಹಯೋಗ ನೀಡಿದ್ದು ನಿಜಕ್ಕೂ ಸಂತಸದ ಸಂಗತಿ. ಒಟ್ಟಿನಲ್ಲಿ ಅಪರಂಜಿಯ ಬೆಳ್ಳಿಯ ಹಬ್ಬದ ಅಂಗವಾಗಿ 2007ರ ಅಕ್ಟೋಬರ್ ಎರಡರಂದು ಬೆಂಗಳೂರಿನ ಭಾರತೀಯ ವಿದ್ಯಾಭವನದಲ್ಲಿ ಶುರುವಾದ ನಮ್ಮ ಸಮಾರಂಭಗಳ ಸರಣಿ, ಉಡುಪಿ, ಮೈಸೂರು, ಶಿವಮೊಗ್ಗೆಗಳನ್ನು ಸುತ್ತಿ ಮುಂದಿನ ಅಕ್ಟೋಬರ್ ಎರಡರಂದು ಭಾರತೀಯ. ವಿದ್ಯಾಭವನದಲ್ಲಿ ನಡೆಯುವ

ಸಮಾರೋಪ ಸಮಾರಂಭದೊಂದಿಗೆ ಮುಕ್ತಾಯ ಗೊಳ್ಳಲಿದೆ. ಎಲ್ಲ ಅಭಿಮಾನಿಗಳಿಗೂ ಈ ಸಮಾರಂಭಕ್ಕೆ ಸುಸ್ವಾಗತ. ಕಾರ್ಯಕ್ರಮ ವಿವರಗಳನ್ನು ಮುಂದಿನ ಸಂಚಿಕೆಯಲ್ಲಿ ನೀಡಲಾಗುವುದು.

ಇನ್ನು ಈ ಸಂಚಿಕೆಯ ವಿಷಯ. ನುರಿತ ಬರಹಗಾರರಾದ ಶ್ರೀಮತಿ ನಂದಿನಿಯವರು ಸಣ್ಣ ಪ್ರಮಾಣದ ಅರ್ಥವ್ಯವಸ್ಥೆಯ ಒಂದು ವಿಹಂಗಮ ನೋಟವನ್ನು ತಮ್ಮ ಲೇಖನದಲ್ಲಿ ನೀಡಿದ್ದಾರೆ. ಪೋಲೀಸ್ ಲೋಕದ ಸ್ವಾರಸ್ಯಗಳನ್ನು ಅಲ್ಲಿನ ಅನುಭವಿಗಳಲ್ಲದೇ ಇನ್ನಾರಿಗೆ ಅಷ್ಟು ರೋಚಕವಾಗಿ ತಿಳಿಸಲು ಸಾಧ್ಯ?. ಮಾನ್ಯ ಗುರುಪ್ರಸಾದರು ಈ ಕಾರ್ಯವನ್ನ ಚೆನ್ನಾಗಿ ನೆರವೇರಿಸಿದ್ದಾರೆ. ವತ್ಸನ ಎಂದಿನಂತೆ ತನ್ನ ವರದಿಸರಣಿಯನ್ನು ಮುಂದುವರಿಸಿದ್ದಾನೆ. ಆ ತಿಂಗಳ ಒಂದು ಹೊಸ ಫ್ರೆಂಡ್ ಎಂದರೆ ಕೇಎಸ್ವೀ ಎಂಬ ಲೇಖಕಿಯದ್ದು. ಇವರ ಪ್ರಾರ್ಥನೆ ಎಂಬ ಸ್ವಾನುಭವದ ಬರಹ ಅಪರಂಜಿಗೆ ಒಗ್ಗುತ್ತದೋ ಇಲ್ಲವೋ ಓದುಗರೇ ನಿರ್ಧರಿಸಬೇಕು. ನನಗಂತೂ ಇದು ತುಂಬ ಸಂತಸ ನೀಡಿತು. ಕಾಫಿ ಹೌಸ್ ಹೇಗೆ ಬರುತ್ತಿದೆ ತಿಳಿಸಿ. ಅಂದಹಾಗೆ ಮೊಮ್ಮಗಳನ್ನು ನೋಡಲು ನಾನು ಮಿಲ್ಟನ್ ಕೀನ್ಸ್‌ಗೆ ಹೊರಟಿದ್ದೇನೆ, ಈ ಶ್ರೀರಂಗದ ಒನಕೆಯನ್ನು ಬೇಲೂರರ ಸಮರ್ಥ ಕೈಗಳಿಗೆ ವರ್ಗಾಯಿಸಿ. ಹಾಗಾಗಿ ಬೇಲೂರರ ಭಾಷೆಯಲ್ಲಿ, ಸಯೋನರಾ.

- ಶಿವಕುಮಾರ್



ಏನೇನ ಇಡೋ ಇಲ್ಲಿ, ಸಾನಿಳೀಬೇಕು.
ಇಡ್ತೀಯೋ, ಇಳ್ಬಂದ್ ಇದೀಲೋ....?

ಕೊರವಂಜಿಯಿಂದ

ಪ್ರಾರ್ಥನೆ

- ಕೇಎಸ್ವೀ

ಆ ದಿನ ಬೆಳಗ್ಗೆ ನಾನು ಕ್ಲಾಸಿಗೆ ಹೋದಾಗ ನೆರೆದಿದ್ದ ವಿದ್ಯಾರ್ಥಿ, ವಿದ್ಯಾರ್ಥಿನಿಯರೆಲ್ಲಾ ನನ್ನನ್ನು ಬಹುದಿನಗಳ ನಂತರ ತವರಿಗೆ ಬಂದ ಮನೆ ಮಗಳಂತೆ ಆದರದಿಂದ ಬರಮಾಡಿಕೊಂಡರು. ನನ್ನ ಮಕ್ಕಳೇ ಮದುವೆ ಮಾಡಿಕೊಂಡು ಸುಖವಾಗಿ ಜಗಳ ಆಡಿಕೊಂಡು ಇರುವಾಗ ನನ್ನನ್ನೇ ಮನೆ ಮಗಳಂತೆ ಕಾಣಬೇಕಾದರೆ ನನ್ನ ಶಿಷ್ಯವರ್ಗದ ಸರಾಸರಿ ವಯಸ್ಸನ್ನು ನೀವು ಆಗಾಗಲೇ ಊಹಿಸಿರಬಹುದಲ್ಲವೇ. ಹೌದು, ಷಷ್ಠಿ ಪೂರ್ತಿಯಿಂದ ಸಹಸ್ರ ಚಂದ್ರ ದರ್ಶನದವರೆಗೂ ಹರಹನ್ನು ಕಾಣಬಹುದಾಗಿದ್ದ ಆ ಹಿರಿಯ ಪ್ರಜೆಗಳಿಗೆ ನಾನು ಮ್ಯೂಸಿಕ್ ಅಪ್ರೀಸಿಯೇಷನ್ ತರಗತಿಗಳನ್ನು ನಡೆಸುತ್ತಿದ್ದೆ. ಯಾವುದೋ ಕಾರಣಗಳಿಂದಾಗಿ ನನ್ನ ಪಾಠ ಹಲವು ತಿಂಗಳುಗಳಿಂದ ನಿಂತುಹೋಗಿತ್ತು. ಈಗ ಮತ್ತೆ ತರಗತಿ ಶುರುವಾಗಿತ್ತು.

"ಹೇಗಿದ್ದರೂ ಇದೊಂದು ಹೊಸ ಪ್ರಾರಂಭ. ನಾವು ಏಕೆ ಸಮಾರಂಭಗಳ ಪ್ರಾರಂಭದಲ್ಲಿ ಹಾಡುವ ಪ್ರಾರ್ಥನೆ ವಿಚಾರವನ್ನೇ ಇಂದಿನ ಕಲಿಕೆಗೆ ಆರಿಸಿಕೊಳ್ಳಬಾರದು?" ಎಂದು ಪೀಠಿಕೆ ಹಾಕಿದೆ. ಶಿಷ್ಯಕೋಟಿ ಬಹು ಸಡಗರದಿಂದ ನನ್ನ ಸಲಹೆಯನ್ನು ಒಪ್ಪಿತು.

"ಭಾರತೀಯ ಶಾಸ್ತ್ರೀಯ ಸಂಗೀತದಲ್ಲಿ ಭಕ್ತಿಗೆ ಅತಿ ಶ್ರೇಷ್ಠ ಸಾಧನ. ನಮ್ಮಲ್ಲಿ ಯಾವುದೇ ಸಭೈ ಎಂಥದೇ ಕಾರ್ಯಕ್ರಮವಾಗಲೀ, ಅದು ಸುಗಮವಾಗಿ ನಡೆಯಲೆಂದು ಭಗವಂತನಲ್ಲಿ ಅಹವಾಲು ಸಲ್ಲಿಸಿದ ನಂತರವೇ ಮುಖ್ಯ ಅತಿಥಿಗಳನ್ನು ಬರಮಾಡಿಕೊಳ್ಳುವ ಸ್ವಾಗತ ಗೀತೆ ಇರುತ್ತೆ. ಈಚೆಗೆ ಈ ಸ್ವಾಗತ ಗೀತೆಯ ಜಾಗದಲ್ಲಿ ಸ್ವಾಗತ ಭಾಷಣ ಇರುತ್ತೆ ಅಂತಿಟ್ಕೊಳ್ಳಿ." ಅಂತ ಶುರುಮಾಡಿದೆ.

"ಹೌದ್ಹೌದು, ಸಾವಿರದ ಒಂಬೈನೂರ ಮೂವತ್ತೋಳರಲ್ಲಿ ನಮ್ಮ ಸ್ಕೂಲಿಗೆ ಡಿ.ಡಿ.ಪಿ.ಐ. ಬಂದಿದ್ದಾಗ "ಸುಖಾಗಮನವಾಗಲಿ ಶ್ರೀಮಂತರೇ, ಮಹಾ ಧೀಮಂತರೇ" ಅಂತ ನಮ್ಮನ್ನೆಲ್ಲಾ ಸಾಲಾಗಿ ನಿಲ್ಲಿಸಿ ಹಾಡಿಸಿದ್ದು ಇವತ್ತಿಗೂ ಕಣ್ಣಿಗೆ ಕಟ್ಟಿದ ಹಾಗಿದೆ" ಅಂದರು ನಾಸ್ಟಾಲ್ಜಿಯಾ ನರಸಿಂಹ ಮೂರ್ತಿ. ಇವರಂದ ಮಾತು ಮಿಕ್ಕವರ ನೆನಪಿನ ಮಹಾಪೂರಕ್ಕೆ ನಾಂದಿಯಾಯಿತು. ಅವರೆಲ್ಲರ ಮಾತುಕತೆಗೆ ಕಡಿವಾಣ ಹಾಕಿ ಮತ್ತೆ ಪ್ರಾರ್ಥನೆಯ ವಿಷಯ ಪ್ರಾರಂಭಿಸಿದೆ. ಸಾಮಾನ್ಯವಾಗಿ ಬಳಕೆಯಲ್ಲಿಲ್ಲದ ಪ್ರಾರ್ಥನಾ ಗೀತೆಗಳನ್ನ ಸಭೆಗೆ ಪರಿಚಯಿಸುವುದು ನನ್ನ ಉದ್ದೇಶವಾಗಿತ್ತು.

"ಪುರಂದರ ದಾಸರ "ಸತತ ಗಣನಾಥ ಸಿದ್ಧಿಯನೀವ ಕಾರ್ಯದಲಿ" ಎಂದು ಪ್ರಾರಂಭವಾಗುವ ಈ ದೇವರ ನಾಮ ನನ್ನ ದೃಷ್ಟಿಯಲ್ಲಿ ಅತಿ ವಿಶಿಷ್ಟವಾದದ್ದು. ಸಾಧಾರಣವಾಗಿ ವಾತಾಪಿಯಲ್ಲಿರುವ (ಈಗಿನ ಬಾದಾಮಿ) ಗಣಪನನ್ನೋ, ಅಥವಾ ಶೃಂಗೇರಿಯಲ್ಲಿರುವ ಶಾರದೆಯನ್ನೋ, ಸಭೆಗೆ ಆಹ್ವಾನಿಸುವುದು ವಾಡಿಕೆ. ಆದರೆ ಈ

ಹಾಡಿನ ಸ್ವಾರಸ್ಯ ನೋಡಿ. ಈ ಒಂದೇ ಕೃತಿಯಲ್ಲಿ ಬಹುತೇಕ ನಮ್ಮ ಎಲ್ಲಾ ದೇವರುಗಳ ಸ್ತುತಿಯೂ ಅಡಕವಾಗಿದೆ' ಅಂತ ಹೇಳಿ ಆ ದೇವರನಾಮವನ್ನ ಹಾಡಲು ಪ್ರಾರಂಭಿಸಿದೆ. ಮೋಹನ ರಾಗದ ಈ ಹಾಡಿನ ಸಾಹಿತ್ಯ ಕೇಳಿ ತಮ್ಮ ಪರಿಪಾಠದಂತೆ ತಲೆದೂಗಲು ಶುರುಮಾಡಿದರು ಎಲ್ಲರೂ.

ಒಮ್ಮೆಲೇ ನನ್ನ ದನಿಯ ಜೊತೆಗೂಡಿ ಇನ್ನೊಂದು ಕ್ಷೀಣವಾದ ದನಿ ಸೇರಿದಂತೆ ಅನ್ನಿಸಿ ಕಣ್ಣು ತೆರೆದು ನೋಡಿದೆ. ನನ್ನ ಬಲ ಮಗ್ಗುಲಿಂದ ಸರಾಗವಾಗಿ ಹರಿಯುತ್ತಿದ್ದ ಆ ದನಿಯಲ್ಲಿ ಮರಾಠಿ ಅಭಂಗ್ ಒಂದು ಕೇಳಿಸುತ್ತಿತ್ತು. ಮೂಕವಿಸ್ಮಿತರಂತೆ ಉಳಿದವರೆಲ್ಲರ ದೃಷ್ಟಿಯೂ ಆ ಹಾಡುಗಾರ್ತಿಯ ಮೇಲೆ ನೆಲೆಸಿತ್ತು.

ಆಕೆಯ ನಾದಲಹರಿಯನ್ನು ಭಂಗಪಡಿಸಲಿಚ್ಛಿಸದೇ ದೇವರ ನಾಮದ ನಂತರ ನಾನು ಟ್ಯಾಗೋರರ ಗೀತಾಂಜಲಿಯ ಕನ್ನಡ ಅನುವಾದ "ವಿಕಸಿತ ಮಾಡೆನ್ನಾಂತರ್ಯವನು" ಎಂಬ ಗೀತೆಯನ್ನು ಹಾಡಲು ಶುರುಮಾಡಿದೆ. ಅದು ಅರ್ಧದಷ್ಟು ಪೂರೈಸಿದಾಗ, ಮತ್ತೆ ಅದೇ ಮೃದು ಮಧುರ ದನಿ ನನ್ನದರ ಜೊತೆ! ಈ ಬಾರಿ "ದರುಶನ ದೋ ಘನಶ್ಯಾಮ್" ಅತ್ಯಂತ ಸ್ಪಷ್ಟವಾಗಿ ಭಾವಪೂರ್ಣವಾಗಿ ಹರಿದುಬರುತ್ತಿತ್ತು.

ಹೆದರಿದ ಗುಬ್ಬಚ್ಚಿಯಂತೆ ಕುರ್ಚಿಯಂಚಿನಲ್ಲಿ ಮುದುರಿ ಕುಳಿತಿದ್ದ ಆಕೆಗೆ ಇಂದು ತನ್ನ ಸುತ್ತಮುತ್ತಲ ಪರಿಸರದ ಪರಿವೆಯೇ ಇದ್ದಂತೆ ಕಾಣಲಿಲ್ಲ. ಈ ಅಪರ ವಯಸ್ಸಿನಲ್ಲೂ ಹೊಳೆಯುತ್ತಿದ್ದ ಬಟ್ಟಲುಗಣ್ಣುಗಳು. ಮಾಟವಾದ ಪುಟ್ಟ ಬೊಚ್ಚು ಬಾಯಿಂದ ನಿರರ್ಗಳವಾಗಿ ಹೊರಹೊಮ್ಮುತ್ತಿದ್ದ ಕೇದಾರ್ ರಾಗ! ಸುತ್ತ ತನ್ಮಯರಾಗಿ ಕೇಳುತ್ತಿದ್ದ ಶ್ರೋತೃವರ್ಗ!

ಇದ್ದಕ್ಕಿದ್ದಂತೆ ತರಗತಿಯಲ್ಲಿ ಜೀವಸಂಚಾರವಾದಂತಾಯಿತು. ಎಲ್ಲರೂ ಎದ್ದು ನಿಂತು ಚಪ್ಪಾಳೆಯ ಮಳೆಗರೆದರು. ಹಲವರ ಕಣ್ಣಂಚ್ನಲ್ಲಿ ಹನಿ ಇಣುಕುತ್ತಿದ್ದರೆ ಇನ್ನು ಹಲವರು ಆಕೆಯನ್ನು ಪ್ರೀತಿಯಿಂದ ಘೇರಾವ್ ಮಾಡಿದ್ದರು. ಎಲ್ಲರಿಗಿಂತ ಮಿಗಿಲಾಗಿ ಹರ್ಷದಿಂದ ಬೆರಗಾದವಳೆಂದರೆ ನಾನೇ.

ನಂತರ ತಿಳಿದುಬಂದ ಸಂಗತಿ. ಸದಾ ದುಃಖಿತಳಂತೆ ತೋರುತ್ತಿದ್ದ ಆಕೆ ಒಬ್ಬ ಇಂಟ್ರೋವರ್ಟ್. "ಡಿಮೆನ್ಷಿಯಾ" ದ ಆಸುಪಾಸಿನಲ್ಲಿ ಸುಳಿದಾಡುತ್ತಿದ್ದ ಏಕಾಂಗಿ. ಆರೆಂಟು ತಿಂಗಳಿಗೂ ಮೀರಿ ಇತರ ವಾಚಾಳಿ ಸದಸ್ಯರ ಸತತ ಪ್ರಯತ್ನಗಳಿಗೆ ಸೊಪ್ಪು ಹಾಕಿರದಿದ್ದ ಅತಿ ಮೌನಿ.

ಯಾರೊಂದಿಗೂ ಬೆರೆಯದಿದ್ದ ಆಕೆಯಿಂದ ಇಂದು ಪ್ರವಾಹದಂತೆ ಹರಿದಿದ್ದ ಸಂಗೀತಧಾರೆ. ನಿರ್ಮಲ ಮನಸ್ಸಿನಿಂದ ಮಾಡಿದ ಹೃದಯಾಂತರಾಳದ ಪ್ರಾರ್ಥನೆಗೆ ಒಂದು ಅಗೋಚರ ಶಕ್ತಿ ಇರಬಹುದೇನೋ ಅನ್ನಿಸಿತು ಅಂದು ನನಗೆ.

ಅಂತೂ ಎಲ್ಲರೂ ಬಹುದಿನಗಳಿಂದ ನಿರೀಕ್ಷಿಸುತ್ತಿದ್ದ ಪ್ರಾರಂಭೋತ್ಸವ ಅಂದು ನೆರವೇರಿತ್ತು.

ಆಸ್ಪತ್ರೆಯಲ್ಲಿ

- ಓಂ ಪ್ರಕಾಶ್

ಆತನಿಗೆ ಪಾಪ, ಬ್ಲಡ್ ಪ್ರೆಷರ ಹೆಚ್ಚಾಗಿತ್ತು. ಪರೀಕ್ಷೆ ಮಾಡಿ, E.C.G ಎಲ್ಲ ನಡೆಸಿ, ಮಾತ್ರೆಗಳು, ಪಥ್ಯ ಎಲ್ಲ ಹೇಳಿ ಕಳಿಸಿದ್ದಾಯಿತು. ಹದಿನೈದು ದಿನ ಆದಮೇಲೆ ಬಂದರು, ಪತಿ, ಪತ್ನಿಯರು. ಬಿ.ಪಿ. ಸರಿಯಾಗಿದೆ, ಮಾತ್ರೆ ತಗೋತಾ ಇದೀನಿ ಅಂದ ಆತ. ಆ ಕ್ಷಣವೇ ಆಕೆ, "ದಿನಾ ಇಲ್ಲ ಡಾಕ್ಟ್ರೆ, ನಾನು ಹೇಳಿದರೆ ತಗೊಳೋದು, ಉಪ್ಪು ಹಾಕು ಅಂತ ಗಲಾಟೆ ಮಾಡ್ತಾರೆ, ಹೇಳಿ, ಹೇಳಿ ನನಗೆ ಸಾಕಾಗಿ ಹೋಗುತ್ತೆ" ಅಂತ ವಾಗ್ದಾಳಿಯನ್ನೇ ಆರಂಭಿಸಿದಳು, ಆತ ಮೂಕ ಪ್ರೇಕ್ಷಕನಂತೆ ಕೂತಿದ್ದ. ನನಗೆ gap ಸಿಕ್ಕಿದಾಗ ಕೇಳಿದೆ, "ಏನ್ರೀ? ಏನಾದರೂ ಸೈಡ್ ಎಫೆಕ್ಟ್ ಇದೆಯೇ?" ಅಂತ. ಅವನು ಆಕೆಯ ಕಡೆ ತಿರುಗಿ, ನಸುನಗುತ್ತ "ಇದೆಯಲ್ಲ ಡಾಕ್ಟ್ರೆ, side effect ಇಲ್ಲೇ!" ನಾನು ಚಕಿತನಾದೆ!!

★★★

ಆಕೆಗೆ ಏನೋ ಭಯ, ಆತಂಕ, ಕೈ ನಡುಕ ಇವೆಲ್ಲ ಇತ್ತು. ತೂಕ ಬೇರೆ ಕಡಿಮೆ ಆಗ್ತಾ ಇದೆ. ಅವರನ್ನ ನೋಡಿದ ಡಾಕ್ಟರು, ರಕ್ತ ಪರೀಕ್ಷೆಗೆ form ಬರೆದುಕೊಟ್ಟರು. ಮರುದಿನ, ಅವಳು ಔಟ್‌ಪೇಶೆಂಟ್ ವಿಭಾಗಕ್ಕೆ ಪುನಃ ಬಂದಳು. "ಡಾಕ್ಟ್ರೆ, ರಕ್ತ ಪರೀಕ್ಷೆಗೆ form ಕೊಟ್ಟಿದ್ದರು, ಬಸ್ಸಿನಲ್ಲಿ ಪಿಕೆ ಪಾಕೆಟ್ ಆಗಿಹೋಯ್ತು! ತಿರುಗಿ ಅದನ್ನೇ ಬರೆದುಕೊಡಿ"

"ನಿನ್ನೆ ನೋಡಿದ ಡಾಕ್ಟ್ರು ಯಾವ ಕಾಯಿಲೆಗೆ ಅಂತ ಕೊಟ್ಟಿದ್ದರಮ್ಮ?" ಅಂದರು ವೈದ್ಯರು. ಆಕೆ, ಪಾಪ, "ಸರಿಯಾಗಿ ಗೊತ್ತಿಲ್ಲ ಡಾಕ್ಟ್ರೆ ಆದರೆ ಏನೋ 'ತೈರೊಡೆ' ಅಂತ ಹೇಳಿದ್ದು ನೆನಪಿದೆ!" ಅಂದರು. ಡಾಕ್ಟರು ನಗುತ್ತ, Thyroid tests ಬರೆದು ಕಳಿಸಿದರು!!

★★★

Eಕಾದಶಿ

E mail, E learning, E commerce ಎಂದರೆಲ್ಲ ಗೊತ್ತು. ಆದರೆ Eಕಾದಶಿ ಎಂದರೆ?

ಅಂದರೆ, ಅಂದು ನಿಮಗೆ ಯಾವುದೇ email ಬಂದಿಲ್ಲದ ದಿನ.

(ಓದುಗರೇ, ಇಂತಹ ಪದಗಳನ್ನು ನೀವು ಸೃಷ್ಟಿಸಿ ನಮಗೆ ಬರೆದು ಕಳಿಸಿ. ಚುರುಕಾಗಿರುವುದನ್ನು ಪ್ರಕಟಿಸುತ್ತೇವೆ. -ಸಂ)

ವಿದ್ಯಮಾನಗಳು

- ಕು.ಕ.

ಮನಮೋಹನ ಸಿಂಗ್ ಸಾಹೇಬರು ತಮ್ಮ ಪಕ್ಷಕ್ಕೆ, ಪಕ್ಷದ ಮಹಾನಾಯಕಿಗೆ ಒಟ್ಟು ಯುಪಿಎಗೆ ಮಹಾವಿಜಯವನ್ನು ತಂದು ಕೊಟ್ಟಿದ್ದಾರೆ. ದೇಶವೆಲ್ಲಾ ನಮ್ಮ ಪಾರ್ಲಿಮೆಂಟರಿ ಡೆಮಾಕ್ರಸಿಯ ಇಂದಿನವರೆಗಿನ ಅತ್ಯಂತ ಭಾರೀ ವಿಜಯವನ್ನು ಕೊಂಡಾಡುತ್ತಿದೆ. ನಾವೂ ಮಮೋಸಿಂ ಅವರಿಗೆ ತ್ರೀ ಚೀರ್ಸ್ ಎಂದು ಹೇಳೋಣ. ಆದರೂ ಈ ಮಹಾವಿಜಯದಿಂದ ನಮ್ಮ ದೇಶಕ್ಕೆ ಆಗಬಹುದಾದ ಲಾಭವೇನು? ನಮ್ಮಂತಹ ಅಲ್ಪಮತಿಗಳಿಗೆ ಇನ್ನೂ ಅರ್ಥವಾಗಿಲ್ಲ. ನಾನು ಹೈಸ್ಕೂಲಿನಲ್ಲಿ ಓದುತ್ತಿದ್ದಾಗ ಇಂಗ್ಲೀಷ್ ಪಠ್ಯಪುಸ್ತಕದಲ್ಲಿ ಬ್ಯಾಟಲ್ ಆಫ್ ಬ್ಲೆನ್‌ಹಿಮ್ ಎನ್ನುವ ಒಂದು ಪದ್ಯವಿತ್ತು. ಆ ಪದ್ಯದಲ್ಲಿ ಮುದುಕನೊಬ್ಬ ತನ್ನ ಮನೆಯ ಮುಂದೆ ಕುಳಿತು ತನ್ನ ಮೊಮ್ಮಗನಿಗೆ ತನ್ನ ದೇಶ ಹಿಂದೆ ಯಾವುದೋ ಯುದ್ಧದಲ್ಲಿ ಸಾಧಿಸಿದ್ದ ಭಾರೀ ವಿಜಯವನ್ನು ಇಟ್ ವಾಸ್ ಎ ಗ್ರೇಟ್ ವಿಕ್ಟರಿ ಎಂದು ಮತ್ತೆ ಮತ್ತೆ ವರ್ಣಿಸುತ್ತಿದ್ದಾನೆ. ಮೊಮ್ಮಗ ಆ ಯುದ್ಧ ಯಾವಾಗ ಆಯಿತು? ಏಕೆ ಆಯಿತು? ಯಾರ ನಡುವೆ ಆಯಿತು? ಆ ವಿಜಯದಿಂದ ನಮ್ಮ ದೇಶಕ್ಕೆ ಆದ ಏನು ಪ್ರಯೋಜನವಾಯಿತು? ಎಂದು ಮುಂತಾಗಿ ಕೇಳುತ್ತಿದ್ದ ಯಾವ ಪ್ರಶ್ನೆಗೂ ತಾತನ ಬಳಿ ಉತ್ತರವಿರಲಿಲ್ಲ. ಇಂತಹ ಪ್ರಶ್ನೆಗಳಿಗೆಲ್ಲಾ ಗೊತ್ತಿಲ್ಲ ಮಗು ಬಟ್ ಇಟ್ ವಾಸ್ ಎ ಗ್ರೇಟ್ ವಿಕ್ಟರಿ! ಎಂದು ಹೇಳುತ್ತಿರುತ್ತಾನೆ. ನಮ್ಮ ದೇಶದಲ್ಲಿಯೂ, ಇನ್ನು ಇಪ್ಪತ್ತು ವರ್ಷಗಳ ನಂತರ ಮಮೋಸಿಂ (ಅಥವಾ ಸೋನಿಯಾ ಅವರ) ಮರಿಮಗ ನೀವು ಅಮೆರಿಕಾದೊಂದಿಗೆ ಅಂದು ಮಾಡಿಕೊಂಡ ಒಪ್ಪಂದವಾದ ಈ ಇಪ್ಪತ್ತು ವರ್ಷಗಳಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಅಣುವಿದ್ಯುತ್ ಉತ್ಪಾದನೆಯಾಗಿದೆ ಹೇಳುತ್ತೀರಾ ಎಂದು ಕೇಳಿದರೆ ಆ ಪದ್ಯದ ಮುದುಕನ ಉತ್ತರವೇ ಇಲ್ಲೂ ಬರಬಹುದು ಅಲ್ಲವೇ?

★★★★★

ನಮ್ಮ ದೇಶದ ಡೆಮಾಕ್ರಸಿಯ ಬಗ್ಗೆ ನಮಗೆಲ್ಲರಿಗೂ ತುಂಬಾ ಹೆಮ್ಮೆಯಿದೆ. ಹೆಚ್ಚುಕಡಿಮೆ ನಮ್ಮ ಜೊತೆಗೆ ಸ್ವಾತಂತ್ರ್ಯಪಡೆದ ನಮ್ಮ ಅಕ್ಕಪಕ್ಕದ ಎಲ್ಲಾ ದೇಶಗಳಲ್ಲಿಯೂ ಒಂದಲ್ಲ ಒಂದು ಬಾರಿ, ಒಂದಲ್ಲ ಒಂದು ರೀತಿಯಲ್ಲಿ ಪ್ರಜಾಪ್ರಭುತ್ವ ವಿಫಲವಾಗಿದೆ. ಆ ದೇಶಗಳು ಅರಾಜಕತೆ, ಕ್ಷಿಪ್ರಕ್ರಾಂತಿ ಮಿಲಿಟರಿ ಪ್ರಭುತ್ವಗಳನ್ನು ಕಂಡಿವೆ. ಆದರೆ ನಮ್ಮಲ್ಲಿ ಮಾತ್ರ ಡೆಮಾಕ್ರಸಿ ಸ್ವಾತಂತ್ರ್ಯ ಬಂದಾಗಿನಿಂದ ಅವಿಚ್ಛನ್ನವಾಗಿ ಉಳಿದುಕೊಂಡು ಬಂದಿದೆ. ನಮ್ಮ ಅತ್ಯಂತ ಶಕ್ತಿಶಾಲಿಗಳಾಗಿದ್ದ ನಾಯಕರಿಗೂ ನಮ್ಮ ಜನ ಗೆಟ್ ಔಟ್ ಎಂದು ಹೇಳಿದ್ದಾರೆ. ಬಹಳ ಜನರಿಂದ ಸಾಕ್ಷಾತ್ ದುರ್ಗಮಾತೆ ಎಂದು ಕರೆಸಿಕೊಂಡಿದ್ದ ಇಂದಿರಾಗಾಂಧಿ ಚುನಾವಣೆಯಲ್ಲಿ ಹೀನಾಯವಾಗಿ ಸೋತಿದ್ದಾರೆ. ಭಾರತವನ್ನು ಥಳಥಳ ಹೊಳೆಯುವಂತೆ ಬೆಳಗಿದ್ದೇನೆ ಎಂದು ನಂಬಿದ್ದ ವಾಜಪೇಯಿಯವರಿಗೆ ನಮ್ಮ ಜನ ಸಾಕು ಮನೆಗೆ ಹೋಗಿ ವಿಶ್ರಾಂತಿ ಪಡೆಯಿರಿ ಎಂದು ಆಜ್ಞಾಪಿಸಿದ್ದಾರೆ. ಆದರೆ ಮೊನ್ನಿನ ಪ್ರಧಾನಿಯವರ ವಿಶ್ವಾಸ ಮತ ಯಾಚನೆ ಸಮಯದಲ್ಲಿ ನಡೆದ ಖುಲ್ಲಂಖುಲ್ಲಂ ಹರಾಜು ಮೊದಲ ಬಾರಿಗೆ ನಾವು

ನಿಜವಾಗಿಯೂ ಒಂದು ಡೆಮಾಕ್ರಸಿಯೇ ಎಂದು ಅನುಮಾನ ಹುಟ್ಟಿಸುತ್ತಿದೆ. ಲೋಕಸಭೆಯ ಸದಸ್ಯರೇ ಮಾರಾಟದ ವಸ್ತುವಾದಾಗ ಒಂದರಿಂದ ನಲ್ವತ್ತರವರೆಗೂ ಎಂಪಿಗಳ ಮೇಲೆ ಹಿಡಿತವಿರುವ ಮುಲ್ಯಾಂ ಸಿಂಗ್-ಅಮರ್ ಸಿಂಗ್ ಜೋಡಿ, ಶಿಬು ಸೊರೇನ್, ಅಜಿತ್ ಸಿಂಗ್, ಚಂದ್ರಶೇಖರ ರಾವ್, ನಮ್ಮ ಒನ್ ಅಂಡ್ ಓನ್ಲಿ ಒನ್ ದೇವೇಗೌಡ, ಎಲ್ಲರಿಗೂ ಡಿಮ್ಯಾಂಡಪ್ಪ ಡಿಮ್ಯಾಂಡು. ಇವರುಗಳಲ್ಲಿ ಒಬ್ಬೊಬ್ಬರೂ ಕೇಳುತ್ತಿದ್ದ ಬೆಲೆಗಳೂ ಚಿತ್ರವಿಚಿತ್ರ. ತಲೆಗೆ ಇಪ್ಪತ್ತೈದು ಕೋಟಿ ಹಾರ್ಡ್ ಕ್ಯಾಷ್ ಅಥವ/ಮತ್ತು ಬಳ್ಳಾರಿ ಗಣಿಗಳನ್ನು ರಾಷ್ಟ್ರೀಕರಣ ಮಾಡಿ, ಅಣ್ಣನಿಗೆ ತೆರಿಗೆ ಹೆಚ್ಚುಮಾಡಿ, ತಮ್ಮನಿಗೆ ಕಡಿಮೆ ಮಾಡಿ, ನನಗೆ ಒಂದು ಮಂತ್ರಿ ಪದವಿ- ನನ್ನ ಮಗನಿಗೆ ಒಂದು ಡಿಸಿಎಂ ಹುದ್ದೆ ನಮಗೂ ಒಂದು ರಾಜ್ಯ ಕೊಡಿ, ನಮ್ಮೂರು ಏರ್‌ಪೋರ್ಟ್‌ಗೆ ನನ್ನಪ್ಪನ ಹೆಸರಿಡಿ ಇತ್ಯಾದಿ ಇತ್ಯಾದಿ. ನಮ್ಮ ಪಿಎಂ ಏನೋ ಗೆದ್ದಿದ್ದಾರೆ. ಆದರೆ ಅವರು ಕೊಟ್ಟಿರುವ ಬೆಲೆ ತುಂಬಾ ಭಾರಿಯಾಯಿತಲ್ಲವೇ?

★★★★★

ಲೋಕಸಭೆಯ ಸ್ಪೀಕರ್ ತಾವು ಸ್ಪೀಕ್ ಮಾಡಬಾರದು ಸದನದ ಇತರ ಸದಸ್ಯರು ಮುಕ್ತವಾಗಿ ಮಾತನಾಡಲು ಅವಕಾಶ ಒದಗಿಸಬೇಕು ಎನ್ನುವುದು ಅಲಿಖಿತ ನಿಯಮ. ಸಿಪಿಐ(ಎಂ)ನ ಸೋಮನಾಥ್ ಚಟರ್ಜಿ, ಉತ್ತಮ ಸಂಸದ್ ಪಟು. ಆದರೆ ಈ ಆಂಗ್ರಿ ಒಲ್ಡ್ ಮ್ಯಾನ್‌ಗೆ ಬಾಯಿ ಚಪಲ ಚೂರು ಜಾಸ್ತಿ. ಸ್ಪೀಕರ್ ಅವರನ್ನು ಯಾರೂ ಯಾವುದೇ ವಿವಾದದಲ್ಲಿ ಸಿಲುಕಿಸಬಾರದು ಎಂದು ಎಲ್ಲರಿಗೂ ಉಪದೇಶ ಹೇಳುತ್ತಿದ್ದ ಈ ಸ್ಪೀಕರ್ ತಾವೇ ತಮ್ಮ ಪಕ್ಷದೊಂದಿಗೆ ದೊಡ್ಡ ವಿವಾದಲ್ಲಿ ಸಿಕ್ಕಿಕೊಂಡಿರುವುದರಲ್ಲಿ ಒಂದು ರೀತಿಯ ವಿಪರ್ಯಾಸವಿದೆ. ಕಮ್ಯೂನಿಷ್ಟ್ ಪಕ್ಷದ ಆದರ ನಾಯಕರ ವರ್ತನೆ ಬಗ್ಗೆ ಕೋಪ ಇರುವವರೆಲ್ಲಾ (ಅಂದರೆ ದೇಶದ ಜನತೆಯಲ್ಲಿ ಶೇಕಡ 80 ಭಾಗ) ಸೋಮನಾಥ್‌ಜೀ ಮಾಡಿದ್ದು ಸರಿ ಅದು ಅವರ ಸಿದ್ಧಾಂತಕ್ಕೆ ಬದ್ಧತೆಯನ್ನು ತೋರಿಸುತ್ತದೆ ಎಂದು ಹೊಗಳಿದ್ದಾರೆ. ಆದರೆ ಇನ್ನು ಕೆಲವರು ನಮ್ಮ ಪಾರ್ಲಿಮೆಂಟರಿ ಡೆಮಾಕ್ರಸಿ ನಿಂತಿರುವುದೇ ರಾಜಕೀಯ ಪಕ್ಷಗಳ ಆಧಾರದ ಮೇಲೆ: ಸೋಮನಾಥ್‌ಜೀ ಈ ಆಧಾರಕ್ಕೇ ಕೊಡಲಿ ಹಾಕಿದ್ದಾರೆ ಎಂದು ಹೇಳುತ್ತಿದ್ದಾರೆ.

ಯಾರ ಮೇಲೆ?

ಬೆಂಗಳೂರಿನಲ್ಲಿ ನೀವು ಕಲ್ಲು ಎಸೆದರೆ ಅದು ಮೊಬೈಲ್ ಹಿಡಿದು ಮಾತನಾಡುತ್ತಿರುವವನೊಬ್ಬನ ಮೇಲೆ ಬೀಳುವುದು ಖಂಡಿತ.

– ಡಿ.ಎ.ಸೇಠ್

ಮೂಡಲ ಪಯಣ

ವಿನಯವಂತರ ನಡುವೆ

- ಬೇಲೂರು ರಾಮಮೂರ್ತಿ

ನಾನು ಜಪಾನಿಗೆ ಹೋಗುತ್ತೇನೆ ಅಂದಾಗ ನನಗೆ ಕೆಲವರು ಎಚ್ಚರಿಸಿದ್ದು ಎರಡು ವಿಚಾರವಾಗಿ: ಒಂದು ಅಲ್ಲಿನ ಭಾಷೆ ಸಮಸ್ಯೆ ಬಗ್ಗೆ ಇನ್ನೊಂದು ಅಲ್ಲಿನ ಕಾಸ್ಟ್ ಆಫ್ ಲಿವಿಂಗ್ ಬಗೆಗೆ. ಹೌದು ನಮ್ಮ ವಾಸದ ಅವಧಿಯ ಪ್ರತಿಯೊಂದು ಕ್ಷಣವೂ ನಮ್ಮನ್ನು ಕಾಡಿದ್ದು ಭಾಷೆಯ ಸಮಸ್ಯೆಯೇ. ಹೇಗೂ ನನ್ನ ಮಗ ನಮ್ಮ ಜೊತೆ ಇರುತ್ತಿದ್ದ, ಸಮಸ್ಯೆ ನಿವಾರಣೆಯಾಗುತ್ತಿತ್ತು. ಆದರೆ ಕೆಲವೊಂದು ಸಮಯಗಳಲ್ಲಿ ನಾನು ನನ್ನ ಹೆಂಡತಿ ಇಬ್ಬರೇ ಸುತ್ತಲು ಹೋಗುತ್ತಿದ್ದಾಗ ಸಮಸ್ಯೆಗಳು ಇದಿರಾದದ್ದಂತೂ ನಿಜ. ಒಂದು ಕಾಫಿ ಕುಡಿಯಬೇಕಾದರೆ, ಅದು ಯಾವ ಕಾಫಿ, ಅದಕ್ಕೆ ಹಾಲು ಹಾಕಿರುತ್ತಾರೆಯೇ ಇಲ್ಲವೇ, ಎಂಬುದೇ ತಿಳಿಯುತ್ತಿರಲಿಲ್ಲ. ಆದರೆ ಪ್ರತಿಯೊಂದು ಕೆಫೆಯ ಮುಂದೂ ಒಂದು ಬೋರ್ಡ್ ಇರುತ್ತಿತ್ತು. ಅದರಲ್ಲಿ ಕಾಫಿಯ ಚಿತ್ರ ಅದಕ್ಕೆ ತಗುಲುವ ದುಡ್ಡು (ಜಾಪನೀಸ್ ಯೆನ್) ಇಂತಿಷ್ಟು ಅಂತ ಹಾಕಿರುತ್ತಿದ್ದರು. ನಾವು ಅದನ್ನು ತೋರಿಸಿ ಎರಡು ಕಪ್ ಅಂತ ಎರಡು ಬೆರಳು ತೋರಿಸಿ ಕೇಳಿದರೆ ಮುಗಿಯಿತು. ಇದು ಇಲ್ಲಿಗೇ ಮುಗಿಯುವುದಿಲ್ಲ, ಬಹಳಷ್ಟು ದೊಡ್ಡ ದೊಡ್ಡ ರೆಸ್ಟೋರೆಂಟುಗಳಲ್ಲಿ ಕೂಡಾ ಹೊರಗೆ ಒಂದು ಷೋಕೇಸ್‌ನಲ್ಲಿ ಅಲ್ಲಿ ಮಾರುವ ತಿಂಡಿಗಳ ಚಿತ್ರ ಇರುತ್ತದೆ ಜೊತೆಗೆ ಅದಕ್ಕೆ ತಗುಲುವ ವೆಚ್ಚ ಕೂಡಾ. ಅಂದರೆ ನೀವು ರೆಸ್ಟೋರೆಂಟ್ ಒಳಕ್ಕೆ ಹೋಗುವಾಗ ಏನು ತಿನ್ನಬೇಕೆಂದು (ವೈಟರ್ ತಲೆ ತಿನ್ನುವುದನ್ನು ಬಿಟ್ಟು) ಮೊದಲೇ ನಿರ್ಧಾರ ಮಾಡಿಕೊಂಡು ಹೋಗಿರಬಹುದು.

ನಾವು ಜಪಾನಿನಲ್ಲಿ ಟೋಕಿಯೋ ಸುತ್ತಮುತ್ತ ಇರುವ ಅನೇಕ ಪ್ರದೇಶಗಳನ್ನು ನೋಡುವುದರ ಜೊತೆಗೆ ಕ್ಯೋತೋ, ನಾರಾ, ಒಸಾಕಾ (ಪ್ರಪಂಚದ ಅತಿ ದೊಡ್ಡ ಹ್ಯಾಂಗಿಂಗ್ ಬ್ರಿಜ್ ಇರುವ ಊರು) ಹಿರೋಶಿಮಾ, (ಹಿರೋಶಿಮಾ ಬಗೆಗೆ ಮುಂದಿನ ಸಂಚಿಕೆಯಲ್ಲಿ ಬರೆಯುತ್ತೇನೆ) ಹೊಗೋನೇ (ಫುಜಿ ಪರ್ವತ ಕಾಣುವ ಪ್ರದೇಶ) ಮುಂತಾದ ಕಡೆಗಳಿಗೆ ಭೇಟಿ ಕೊಟ್ಟಿದ್ದೆವು. ಜೊತೆಗೆ, ಅಲ್ಲಿನ ಪಾರ್ಲಿಮೆಂಟ್ ಭವನ (ಡಯಟ್ ಬಿಲ್ಡಿಂಗ್) ಅಲ್ಲಿನ ರಾಜರ ಅರಮನೆ, ಮುಂತಾದ ಕಡೆಗಳಿಗೂ ಭೇಟಿ ನೀಡಿದೆವು. ಡಯಟ್ ಬಿಲ್ಡಿಂಗ್ ನೋಡುವಾಗಿನ ಅನುಭವ ಅಚ್ಚರಿ. ಅಲ್ಲಿನ ಡಯಟ್ ಬಿಲ್ಡಿಂಗ್ ನೋಡಲು ಯಾರು ಬೇಕಾದರೂ ಹೋಗಬಹುದು. ಆದರೆ ಸಮಯ ಪಾಲನೆ ಮುಖ್ಯ. ಬೆಳಗ್ಗೆ ಹತ್ತು ಗಂಟೆಯಿಂದ ಮಧ್ಯಾಹ್ನ ಮೂರರವರೆಗೂ ಪ್ರವೇಶ ಇದೆ (ಉಚಿತ ಪ್ರವೇಶ) ಸದನ ಇರುವಾಗ ಪ್ರವೇಶ ಇಲ್ಲ. ಯಾರ ಶಿಫಾರಸೂ ಬೇಕಿಲ್ಲ. ಹೀಗೆ ಒಂದು ದಿನ ನಾನೂ ನನ್ನ ಹೆಂಡತಿ ಡಯಟ್ ಬಿಲ್ಡಿಂಗ್ ನೋಡಲು ಹೋದೆವು. ಗೇಟ್‌ನಲ್ಲಿ ವಿಚಾರಿಸಲಾಗಿ (ಅಲ್ಲಿನವರಿಗೆ ಸುಮಾರಾಗಿ ಇಂಗ್ಲಿಷ್ ಬರುತ್ತದೆ ಮತ್ತು ಮಾತಾಡುತ್ತಾರೆ) ಅಲ್ಲಿನ ಸ್ಟಾಫ್

ನಮ್ಮನ್ನು ಒಂದು ಕೋಣೆಗೆ ಕರೆದುಕೊಂಡು ಹೋಗಿ ಒಂದು ಫಾರಂ ಕೊಟ್ಟರು ಅದನ್ನು ನಾವು ಭರ್ತಿ ಮಾಡಿ ಅವರ ಕೈಗೇ ಕೊಟ್ಟ ಮೇಲೆ ನಮ್ಮನ್ನು ಒಂದು ಸ್ವಾಗತ ಕೋಣೆಯಲ್ಲಿ ಕೂರಿಸಿ, ನಾವು ಕರೆಯುವವರೆಗೂ ನೀವು ಇಲ್ಲೇ ಕೂತಿರಿ ಅಂತ ತಿಳಿಸಿದರು. ಆಗ ಅಲ್ಲಿ ದೊಡ್ಡ ಪರದೆಯ ಮೇಲೆ ಸದನದ ಪ್ರಥಮ ದಿನ ಅಲ್ಲಿನ ಮಹಾರಾಜರು ನಡೆಸಿಕೊಡುವ ಕಾರ್ಯಕ್ರಮ, ಜೊತೆಗೆ ಡಯಟ್ ಬಿಲ್ಡಿಂಗ್‌ನ ಪೂರ್ಣ ಪರಿಚಯ ಮಾಡಿಕೊಡುವ ಚಿತ್ರ ಪ್ರಸಾರವಾಗುತ್ತಿತ್ತು. ಅಲ್ಲಿನ ಸ್ಟಾಫ್ ಎಷ್ಟು ಬುದ್ಧಿವಂತೆ ಮತ್ತು ಸಹೃದಯಿ ಅಂದರೆ ನಮ್ಮನ್ನು ಕಂಡಕೂಡಲೇ ಇವರು ಜಪಾನಿನವರಲ್ಲ ಇವರಿಗೆ ಜಪಾನಿ ಬರುವುದಿಲ್ಲ ಅಂತ ಅರ್ಥ ಮಾಡಿಕೊಂಡು ನಮ್ಮ ಹತ್ತಿರ ಬಂದು ಇಂಗ್ಲಿಷಿನಲ್ಲಿ ಈ ಚಿತ್ರದಲ್ಲಿ ಜಪಾನೀ ಕಾಮೆಂಟರಿ ಬರುತ್ತಿದೆ ನಿಮಗೆ ಜಪಾನಿ ಬರುವುದಿಲ್ಲ ಅಂತ ಕಾಣುತ್ತೆ, ಆದ್ದರಿಂದ ಇಂಗ್ಲಿಷ್ ಭಾಷೆಯ ಕಾಮೆಂಟರಿ ಇರುವ ಚಿತ್ರ ಹಾಕಲೇ ಅಂತ ಕೇಳಿದರು ನಾವು ಆಗಲಿ ಅಂದ ತಕ್ಷಣ ಇಂಗ್ಲಿಷ್ ಕಾಮೆಂಟರಿ ಬರುವ ಚಿತ್ರ ಹಾಕಿದಳು. ಜೊತೆಗೆ ಒಂದು ಇಂಗ್ಲಿಷಿನ ಪಾಂಪ್ಲೆಟ್ ಕೊಟ್ಟು ಇದನ್ನು ನೋಡುತ್ತಿರಿ ನಮ್ಮ ಸ್ಟಾಫ್ ಬಂದ ತಕ್ಷಣ ನಿಮಗೆ ಒಂದೊಂದು copy ಕೊಡಿಸುತ್ತೇನೆ ಅಂದಳು. ಸ್ವಲ್ಪ ಸಮಯದ ನಂತರ ಅಲ್ಲಿನ ಸ್ಟಾಫ್ ಬಂದು ನಮಗೆ ಡಯಟ್ ಬಿಲ್ಡಿಂಗಿನ ಪರಿಚಯ ಮಾಡಿಕೊಟ್ಟರು. ಸುಮಾರು ಇಪ್ಪತ್ತು ಮೂವತ್ತು ಜನರಿಗೆ ಒಂದು ಬ್ಯಾಚ್ ಅಂತ ಮಾಡಿ ಕಳುಹಿಸಿಕೊಡುತ್ತಾರೆ. ನಾವು ಹೋದ ದಿನ ಇಂಗ್ಲಿಷ್ ಗೈಡ್ ಇಲ್ಲವಾದ್ದರಿಂದ ನಮಗೆ ಆ ಮೊದಲೇ ಚಿತ್ರ ನೋಡಿದ್ದು ಜೊತೆಗೆ ಪಾಂಪ್ಲೆಟ್ ನೋಡಿದ್ದರಿಂದ ಡಯಟ್ ಬಿಲ್ಡಿಂಗಿನ ಸಂಪೂರ್ಣ ಪರಿಚಯವಾಯಿತು. ಇವೆಲ್ಲವೂ ಸೌಜನ್ಯತೆಯ ಉತ್ತುಂಗದಲ್ಲಿ ನಡೆಯಿತು ಅಂದರೆ ಅಚ್ಚರಿಯಾಗಬಹುದು. ನಮ್ಮ ಗುಂಪಿನಲ್ಲಿ ಇಂಗ್ಲೆಂಡಿನಿಂದ ಬಂದಿದ್ದ ಒಂದು ಅಮ್ಮ ಮಗಳ ಜೋಡಿ ಇದ್ದು ಅವರೂ ಕೂಡ ನಮಗೆ ಇಂಗ್ಲಿಷ್ ಕಾಮೆಂಟರಿ ಒದಗಿಸುತ್ತಿದ್ದರು.

ಜಪಾನಿಯರ ಬಗೆಗೆ ಕೆಲವು ಮಾತುಗಳನ್ನು ಬರೆಯಲೇ ಬೇಕು ಎಂದಾದರೆ ಅವರ ಸಹೃದಯತೆಯ ಬಗೆಗೆ ಬರೆಯಬೇಕು, ಸ್ನೇಹದ ಬಗೆಗೆ ಬರೆಯಬೇಕು. ಇವೆರಡರ ಜೊತೆಗೆ ಅವರು ಇಂಗ್ಲಿಷ್ ಭಾಷೆಯನ್ನೂ ಸರಾಗವಾಗಿ ಮಾತಾಡುವವರಾಗಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು. ಅವರು ಇನ್ನೊಬ್ಬರ ತಂಟೆಗೆ ಹೋಗೋರಲ್ಲ. ದಾರಿಯಲ್ಲಿ ಹೋಗುತ್ತಿರಲಿ, ರೈಲಿನಲ್ಲಿ ಪ್ರಯಾಣ ಮಾಡುತ್ತಿರಲಿ, ಕೆಫೆಯಲ್ಲಿ ಕಾಫಿ ಕುಡಿಯುತ್ತಿರಲಿ ಅವರಾಯಿತು ಅವರ ಕೆಲಸವಾಯಿತು. ಹುಡುಗರಾಗಲೀ, ಹುಡುಗಿಯರಾಗಲೀ, ವಯಸ್ಸಾದವರಾಗಲೀ ಅವರ ಹವ್ಯಾಸ ಅಂದರೆ ಮೊಬೈಲ್ ನಲ್ಲಿ ಆಟವಾಡುವುದು, ಇಲ್ಲ ಪುಸ್ತಕ ಓದುವುದು. ರೈಲಿನಲ್ಲಿ ಹತ್ತಿದರು ಅಂದರೆ ಜಾಗ ಸಿಗಲಿ ಬಿಡಲಿ ಮೊಬೈಲ್ ಅಥವಾ ಪುಸ್ತಕ ತೆಗೆದರು ಅಂತಲೇ ಅರ್ಥ.

ನಾನು ವಾಸವಾಗಿದ್ದುದು ಟೋಕಿಯೋ ನಗರದಿಂದ ಸುಮಾರು 60 ಕಿಲೋಮೀಟರು ದೂರವಿರುವ ಹಿಗಶಿಮಟ್ಸುಯಾಮಾ ಅನ್ನುವ ಪಟ್ಟಣದಲ್ಲಿ. ಅದು ನಮ್ಮ ಚಾಮರಾಜಪೇಟೆ ಬಡಾವಣೆಯ ಸುಮಾರು ನಾಲ್ಕರಷ್ಟಿದೆ. ಎಂತಹ ಸೈಲೆಂಟ್ ಪ್ರದೇಶ ಅನ್ನುತ್ತೀರಾ. ಒಂದು

ಕಾಲದಲ್ಲಿ ಬೆಂಗಳೂರೂ ಹಾಗೇ ಇತ್ತು ಅನ್ನಿ. ಅಲ್ಲಿ ಇರೋದು ಒಂದೇ ಪೋಲೀಸ್ ಸ್ಟೇಷನ್ನು (ಅಂದರೆ ನಂಬುತ್ತೀರಾ) ನಾನು ಇರುವಷ್ಟು ದಿನ ಒಬ್ಬ ಪೋಲೀಸಿನವನನ್ನೂ ನಾನು ನೋಡಲಿಲ್ಲ. (ಇನ್ನಿತರ ನಗರಗಳಲ್ಲೂ ನಾನು ಅಷ್ಟಾಗಿ ಪೋಲೀಸರನ್ನು ಕಂಡಿಲ್ಲ) ಅಲ್ಲಿ ನಾಲ್ಕು ರಸ್ತೆ ಕೂಡುವ ಸ್ಥಳಗಳಲ್ಲೆಲ್ಲಾ ಸಿಗ್ನಲ್ ದೀಪಗಳಿವೆ. ಆದರೆ ಯಾವ ಕಡೆಯೂ ಒಬ್ಬ ಪೋಲೀಸೂ ಇರಲ್ಲ. ಅಲ್ಲಿನ ನಾಗರೀಕರೇ ಶಿಸ್ತಿನ ಸಿಪಾಯಿಗಳ ಹಾಗೆ ಸಿಗ್ನಲ್ ದೀಪಗಳನ್ನು ಫಾಲೋ ಮಾಡುತ್ತಾರೆ. ಹಸಿರು ನಿಶಾನೆ ಸಿಗದೇ ಅವರು ಚಲಿಸುವುದೇ ಇಲ್ಲ. ಹಾಗೂ ಮಾರ್ಕ್ ಮಾಡಿರುವ ಗೆರೆಯಿಂದ ತುಸು ಹಿಂದೆಯೇ ಇರುತ್ತಾರೆ. ಯಾರಾದರೂ ಹಾರ್ನ್ ಮಾಡುವುದಿಲ್ಲ. ಅಷ್ಟೊಂದು ವಾಹನಗಳು ಓಡಾಡಿದರೂ ಹಾರ್ನಿನ ಶಬ್ದ ಇಲ್ಲ. ಒಬ್ಬರು ಹೋಗಿಯಾದ ಮೇಲೆ ಇನ್ನೊಬ್ಬರು ಹೋಗುತ್ತಾರೆ.. ಯಾರೂ ಯಾರನ್ನೂ ಧಾವಂತಪಡಿಸುವುದಿಲ್ಲ. ಬೆಳಗ್ಗೆ 5 ಗಂಟೆಗೆ ಸಿಗ್ನಲ್ ದೀಪಗಳು ಹತ್ತಿಕೊಂಡರೆ ರಾತ್ರಿ ಹನ್ನೆರಡರವರೆಗೂ ಇರುತ್ತದೆ. ಇನ್ನು ಪಾದಚಾರಿಗಳು ರಸ್ತೆ ದಾಟುವುದು ಅಂದರೆ ಝೀಬ್ರಾ ಕ್ರಾಸಿಂಗುಗಳಲ್ಲಿ ಮಾತ್ರ. ಇಲ್ಲೇನೂ ವಾಹನಗಳು ಬರುವುದಿಲ್ಲ ಅಂತ ಬೇಕಾಬಿಟ್ಟಿ ರಸ್ತೆ ದಾಟುವುದೇ ಇಲ್ಲ. ಇಷ್ಟೊಂದು ಶಿಸ್ತು ಕಂಡು ನನಗೆ ನಿಜವಾಗಿ ನನಗೆ ರೋಮಾಂಚನವಾಯಿತು. ನನ್ನ ಮಗನ ಊರು ಟೋಕಿಯೋದಿಂದ 60 ಕಿಲೋಮೀಟರು ಅಂತ ಹೇಳಿದ್ದೆನಲ್ಲ. ಅವನಿಗೆ ಬೇಕಾಗುವ ಪದಾರ್ಥಗಳನ್ನು ಟೋಕಿಯೋದಲ್ಲಿರುವ ಇಂಡಿಯನ್ ಸ್ಟೋರ್ಸ್‌ನಿಂದ ಈಮೈಲ್ ಆರ್ಡರ್ ಮಾಡಿ ತರಿಸಿಕೊಳ್ಳಬೇಕು. ಹಾಗೊಂದು ದಿನ ನಾನೂ ನನ್ನ ಹೆಂಡತಿಯೂ ಸುತ್ತಾಡಿಕೊಂಡು ಮನೆಗೆ ಬರುತ್ತಿರುವಾಗ ಒಂದು ವ್ಯಾನು ಬರುತ್ತಿತ್ತು. ರಸ್ತೆಯಲ್ಲಿ ಹೋಗುತ್ತಿದ್ದ ಇನ್ನೊಬ್ಬರೂ, ನಾನೂ, ನನ್ನ ಹೆಂಡತಿಯೂ ವ್ಯಾನ್ ಹೋಗಲು ಜಾಗಮಾಡಿಕೊಟ್ಟು ಫುಟ್ ಪಾತ್‌ಗೆ ಸರಿದುಕೊಂಡೆವು. ಆಗ ಆ ವ್ಯಾನ್ ಡ್ರೈವರು ನಮಗೂ ಇನ್ನೊಬ್ಬರಿಗೂ ಪ್ರತ್ಯೇಕವಾಗಿ ಕೂತಲ್ಲಿಂದಲೇ ನಡುಬಾಗಿಸಿ ವಂದಿಸಿ ಹೋದ. ಅವನು ಎಲ್ಲಿ ಹೋದ ಎಂದರೆ ನಮ್ಮ ಮನೆಗೆ ರೇಶನ್ ತಂದು ನಮಗಾಗಿ ಕಾಯುತ್ತಿದ್ದ. ನಾನು ಅವನ ಬಳಿ ಸಲುಗೆಯಿಂದ ಒಂದೆರಡು ಇಂಗ್ಲಿಷಿನಲ್ಲಿ ಮಾತಾಡಿದರೆ ಅದು ಅವನಿಗೂ ಅರ್ಥವಾಗಲಿಲ್ಲ. ಅವನು ಏನೋ ಅಂದ ಅದು ನನಗೂ ಅರ್ಥವಾಗಲಿಲ್ಲ. ಒಟ್ಟಿನಲ್ಲಿ ಇಬ್ಬರ ಮುಖದಲ್ಲೂ ನಗು ಇತ್ತು. ಅಷ್ಟು ಸಾಕು ಅನಿಸಿತು ಇನ್ನು ಅವರ ಮ್ಯಾನರ್ಸ್ ಬಗೆಗೆ ಹೇಳೋದಾದರೆ ಅದರದೇ ಒಂದು ಅಧ್ಯಾಯ ಬರೆಯಬೇಕಾಗುತ್ತದೆ. ಹೊಸಬರಾದರೂ ಸರಿ ಎದುರಿಗೆ ಕಂಡರೆ ಶರೀರವನ್ನು ಅರ್ಧ ಬಾಗಿಸಿ ವಂದಿಸುತ್ತಾರೆ. ರಸ್ತೆಯಲ್ಲಿ ನೀವು ಅವರಿಗೆ ಹೋಗಲು ದಾರಿಮಾಡಿಕೊಟ್ಟರೆ ಅವರು ಶರೀರ ಬಾಗಿಸಿ ವಂದಿಸಿಯೇ ಹೋಗುತ್ತಾರೆ. ಇನ್ನು ರೈಲಿನಲ್ಲಿ ಜಾಗಬಿಟ್ಟುಕೊಟ್ಟರೆ (ಅಂದರೆ ಅವರು ಬಂದು ಕೂರುತ್ತಾರೆ ಅಂದಾಗ ನೀವು ಸ್ವಲ್ಪ ಸರಿದು ಕೂತುಕೊಂಡರೆ) ಅವರು ಶಿರಬಾಗಿಸಿ ವಂದಿಸಿಯೇ ಕೂತುಕೊಳ್ಳುವುದು) ನಂತರ ಅವರು ನಿಮ್ಮನ್ನು ಮಾತಾಡಿಸುತ್ತಾರೆ ಅಂದುಕೊಂಡರೆ ಅದು ನಿಮ್ಮ ಭ್ರಮೆ. ಕೂತ ತಕ್ಷಣ ಅವರು ಮೊಬೈಲ್‌ಗ ಅಥವಾ ಪುಸ್ತಕಕ್ಕೆ ಮೊರೆಹೋಗುತ್ತಾರೆ. ಅಲ್ಲಿ ಎಲ್ಲರೂ ಪೇಪರ್ ಓದುತ್ತಾರೆ. ಮ್ಯಾಗಸಿನ್ ಓದುತ್ತಾರೆ.

ಅಲ್ಲಿನ ಬಹುಪಾಲು ಡಿಪಾರ್ಟ್‌ಮೆಂಟ್ ಸ್ಟೋರ್‌ಗಳನ್ನು ಮ್ಯಾನೇಜ್ ಮಾಡ್ತೋದು ಹುಡುಗಿಯರೇ. ಸದಾ ಕಾಲ ನಗುನಗುತ್ತಾ ಒಬ್ಬೊಬ್ಬ ಕಸ್ಟಮರ್‌ಗಳನ್ನೂ ವಿಶೇಷವಾಗಿ ವಿಚಾರಿಸಿಕೊಳ್ಳುತ್ತಾ ಇರುತ್ತಾರೆ. ನಿಮ್ಮನ್ನು ಕಂಡೊಡನೆ ಇರಶಾಯಿಮಸೇ (ವೆಲ್ ಕಂ) ಅಂತ ರಾಗವಾಗಿ ಸ್ವಾಗತಿಸುತ್ತಾರೆ. ನೀವು ಯಾವ ಪದಾರ್ಥ ಎಷ್ಟು ಅಂತ ಯಾರನ್ನೂ ಕೇಳಬೇಕಾಗಿಲ್ಲ. ಎಲ್ಲದರ ಮೇಲೂ ಅದರ ತೂಕ, ಅದರ ದರ, ಅದು ಯಾವ ತಾರೀಖಿನೊಳಗೆ ಉಪಯೋಗವಾಗಬೇಕು ಅನ್ನುವುದನ್ನು ಹಾಕಿರುತ್ತಾರೆ. ಅದರ ಪ್ರಕಾರ ನೀವು ನಿಮಗೆ ಯಾವುದು ಬೇಕೋ ಅದನ್ನು ತೆಗೆದುಕೊಂಡು ಕೌಂಟರ್‌ಗೆ ಬಂದರೆ ಮತ್ತೊಮ್ಮೆ ಅವರು ಇರಶಾಯಿಮಸೇ ಅಂದು ನೀವು ತಗೊಂಡ ಪದಾರ್ಥಗಳ ಹೆಸರನ್ನು ಹೇಳುತ್ತಾ ದರಗಳ ಪಟ್ಟಿ ಮೇಲೆ ಸ್ಕ್ಯಾನರ್ ಆಡಿಸಿ ಒಟ್ಟು ಎಷ್ಟು ಆಯಿತು ಅಂತ ಕಂಪ್ಯೂಟರ್‌ನಲ್ಲಿ ನಿಮಗೆ ತೋರಿಸಿ ನಿಮ್ಮಿಂದ ದುಡ್ಡು ಪಡೆದು ಚಿಲ್ಲರೆಯನ್ನು ಅವರ ಎರಡೂ ಕೈಗಳಿಂದ ನಿಮ್ಮ ಕೈಗೇ ಕೊಟ್ಟು ಎಲ್ಲ ಪದಾರ್ಥಗಳನ್ನೂ ಬ್ಯಾಗಿಗೆ ಹಾಕಿ ಬ್ಯಾಗನ್ನು ನಿಮ್ಮ ಕೈಗೆ ಕೊಟ್ಟು ಅರಿಗತೋ ಗುಸಾಯಿಮಸ್ತಾ (ಧನ್ಯವಾದಗಳು - ಇಂಗ್ಲಿಷಿನಲ್ಲಿ ತರ್ಜುಮೆ ಮಾಡಿದರೆ ಥ್ಯಾಂಕ್ಯೂ ವೆರಿಮಚ್ -) ಅಂತ ರಾಗವಾಗಿ ಹೇಳಿ ನಡುಬಗ್ಗಿಸಿ ಇನ್ನೊಬ್ಬ ಕಸ್ಟಮರ್ ಕಡೆ ಗಮನ ಹರಿಸುತ್ತಾರೆ. ಈ ನಡುವೆ ಅವರು ಏನೇ ಕೆಲಸ ಮಾಡುತ್ತಿದ್ದರೂ ಕಸ್ಟಮರ್ಸ್ ಬಂದಾಗ ಇರಶಾಯಿಮಸೇ ಅನ್ನೋದನ್ನು ಮರೆಯೋದಿಲ್ಲ. ಹೀಗೆ ಅವರ ಬಾಯಲ್ಲಿ ಸದಾಕಾಲ ಒಂದು ಸಾರಿ ಇರಶಾಯಿಮಸೇ ಇನ್ನೊಂದು ಸಾರಿ ಅರಿಗತೋ ಗುಸಾಯಿಮಸ್ತಾ ಜಪ ಸಾಗುತ್ತಲೇ ಇರುತ್ತದೆ. ಆದರೆ ನೀವು ಏನಾದರೂ ಸಮಜಾಯಿಸಿ ಕೇಳಿದರೋ ಸತ್ತಿ ಯಾಕೆಂದರೆ ಅವರಿಗೆ ಜಪಾನಿ ಬಿಟ್ಟರೆ ಪ್ರಪಂಚದ ಬೇರೆ ಯಾವ ಭಾಷೆಯೂ ಬರೋದಿಲ್ಲ ನಿಮಗೆ ಜಪಾನಿ ಬರೋದಿಲ್ಲ. ಹೀಗೆ ನಾನು ಭಾಷೆ ಬರದೇ ತೊಡಕಿನಲ್ಲಿ ಸಿಕ್ಕಿಕೊಂಡ ಪ್ರಸಂಗಗಳು ಎಷ್ಟೋ ಇವೆ.

ನಮಗೆ ಒಂದು ದಿನ ಬೆಳಗ್ಗೆ 4 ಗಂಟೆಗೇ ಟ್ಯಾಕ್ಸಿ ಬೇಕಾಗಿತ್ತು. ನಾನು ನನ್ನ ಮಗನಿಗೆ ಹೇಳಿದೆ ನಾನು ಸಂಜೆ ರೈಲ್ವೇ ಸ್ಟೇಷನ್ ಕಡೆ ವಾಕಿಂಗ್ ಹೋಗ್ತೀನಿ ಅಲ್ಲಿ ಬೇಕಾದಷ್ಟು ಟ್ಯಾಕ್ಸಿಗಳಿರುತ್ತವೆ. ನಾನು ವಿಚಾರಿಸಲೇ ಅಂದೆ. ಅವನು ವಿಚಾರಿಸು ಅಂದ ನಗುತ್ತಾ (ಅವನ ನಗುವಿನ ಅರ್ಥ ಆಮೇಲೆ ನನಗಾಯಿತು ಅನ್ನಿ) ಸರಿ ಸಂಜೆ ರೈಲ್ವೇ ಸ್ಟೇಷನ್ನಿನಲ್ಲಿ ಸುಮಾರು ಹತ್ತಾರು ಟ್ಯಾಕ್ಸಿಗಳಿದ್ದವು. ನಾನು ಒಬ್ಬ ಡ್ರೈವರ್ ಹತ್ತಿರ ಹೋಗಿ ಕೆನ್ ಯು ಸ್ಪೀಕ್ ಇಂಗ್ಲಿಷ್ ಅಂದೆ. ಅವನು ನನ್ನ ಮುಖ ನೋಡಿದ. ನಾನು ಅದೇ ಪ್ರಶ್ನೆ ಮತ್ತೆ ಕೇಳಿದೆ. ಅವನು ಬೇರೆ ಕಡೆ ಹೊರಟೇ ಹೋದ. ಸರಿ ಇನ್ನೊಬ್ಬನನ್ನು ಕೇಳಿದೆ. ಅವನು ನನ್ನಕಡೆ ನಗು ಮುಖ ಮಾಡಿದ. ನಾನು ಇಂಗ್ಲಿಷ್ ಇಂಗ್ಲಿಷ್ ಅಂದೆ. ಅವನು ಬಹಳ ಹೊತ್ತು ನನ್ನನ್ನೇ ನೋಡುತ್ತಾ ಕಡೆಗೆ ಕೋಬನ್ ಅಂದುಬಿಟ್ಟ. ಅಲ್ಲಿನ ಪೋಲೀಸ್ ಸ್ಟೇಷನ್‌ಗಳಿಗೆ ಕೋಬನ್ ಅನ್ನುತ್ತಾರೆ. ಅಂದರೆ ನಿನಗೆ ಸಹಾಯ ಬೇಕಾದರೆ ಪೋಲೀಸ್ ಸ್ಟೇಷನ್ನಿಗೆ ಹೋಗು ಅಂತ. ಹೀಗೆ ಅಲ್ಲಿ ಸಾರ್ವಜನಿಕ ಜೀವನದಲ್ಲಿ ಜಪಾನೀ ಭಾಷೆ ಬರದಿದ್ದರೆ ಬದುಕೋದು ಬಹಳ ಕಷ್ಟ ಹೊರಗಡೆ ಹೋಟೆಲುಗಳ ಮುಂದೆ ಎಲ್ಲ ತಿಂಡಿಗಳ ವ್ಯಾಕ್ಸ್ ಮಾಡೆಲ್‌ಗಳು ಇರುತ್ತವೆ.

ಅದಕ್ಕೊಂದು ಹೆಸರೂ ಇರುತ್ತದೆ. ನೋಡಲು ಅವು ಸುಂದರವಾಗಿ ಕಂಡಂತಾಗಿ ನೀವು ಅದು ವೆಜ್ಜೋ ನಾನ್ ವೆಜ್ಜೋ ಅಂತ ಕೇಳಿದರೂ ಕೂಡ ಅದಕ್ಕೆ ಸಮರ್ಪಕ ಉತ್ತರ ಸಿಗೋದಿಲ್ಲ. ಆದರೆ ನನಗೆ ತಿಳಿದಂತೆ ಅವರ ಬಹುಪಾಲು ಅಡಿಗೆಗಳಲ್ಲಿ ಒಂದು ಮೀನು, ಇನ್ನೊಂದು ಚಿಕ್ಕನ್ನು, ಮತ್ತೊಂದು ಮಟನ್ನು ಇಲ್ಲ ಬೀಫ್ ಇದ್ದೇ ಇರುತ್ತದಂತೆ. ಹೀಗಾಗಿ ಅಲ್ಲಿ ಹೋದ ಸಸ್ಯಾಹಾರಿಗಳಿಗೆ ಬ್ರೆಡ್ಡೇ ಗತಿ.

ನಾವಂತೂ ಎಲ್ಲಿಗೆ ಹೋಗಬೇಕಾದರೂ ಏನಾದರೂ ಮಾಡಿಕೊಂಡು ಡಬ್ಬಿಯಲ್ಲಿ ಹಾಕಿಕೊಂಡು ಅಲ್ಲಿ ಪಾರ್ಕೋ ಇಲ್ಲಾ ಹೋಟೆಲುಗಳಲ್ಲೋ ತಿಂದುಬಿಡುತ್ತಿದ್ದೆವು. ಹೀಗಾಗಿ ನಮಗೆ ಸಮಸ್ಯೆ ಅನಿಸಲಿಲ್ಲ.

ಬೇಡ ಬೇಡ ಅಂದರೂ ನಮ್ಮ ಕರೆನ್ಸಿಗೆ ಅಲ್ಲಿನ ಕರೆನ್ಸಿಯನ್ನು ತರ್ಜುಮೆ ಮಾಡಿ ಹೊಟ್ಟೆ ಉರಿದುಕೊಳ್ಳುವುದು ಇದ್ದೇ ಇರುತ್ತದೆ. ನೋಡಿ ಒಂದು ಹಾಗಲಕಾಯಿಗೆ 48 ಯೆನ್ನು ಅಂದರೆ ಹೆಚ್ಚೂ ಕಡಿಮೆ ಹದಿನಾರು ರೂಪಾಯಿ. ಹತ್ತು ಹುರುಳಿಕಾಯಿಯ ಒಂದು ಕಟ್ಟಿಗೆ 58 ಯೆನ್ನು, ಐದು ದೊಣ್ಣೆ ಮೆಣಸಿನಕಾಯಿಯ ಪ್ಯಾಕೆಟ್ಟಿಗೆ 98 ಯೆನ್ನು, ಐದು ಬಾಳೆಹಣ್ಣಿನ ಒಂದು ಪ್ಯಾಕೆಟ್ಟಿಗೆ 298 ಯೆನ್ನು. (ಸಧ್ಯಕ್ಕೆ ಅಲ್ಲಿನ 2.62 ಯೆನ್ನಿಗೆ ನಮ್ಮ ಒಂದು ರೂಪಾಯಿ.) ಹೀಗಾಗಿ ಏನಪ್ಪಾ ಈ ಊರು ಇಷ್ಟೊಂದು ಕಾಸ್ಟ್ಲೀ ಅನಿಸಿಬಿಡುತ್ತದೆ. ಆದರೆ ಅಲ್ಲಿನವರಿಗೆ ಲಕ್ಷ ಲಕ್ಷಗಟ್ಟಲೆ ಯೆನ್ನು ಸಂಬಳ ಬರುತ್ತದೆ. ಅವರಿಗೆ ಅದು ಕಾಸ್ಟ್ಲೀ ಅನಿಸುವುದೇ ಇಲ್ಲವೇನೋ. ಜಪಾನಿನಲ್ಲಿ ತರಕಾರಿಗಳು ಬೆಳೆಯದೇ ಎಲ್ಲವುಗಳನ್ನೂ ಆಮದು ಮಾಡಿಕೊಳ್ಳುವುದರಿಂದ ಈಪಾಟಿ ರೇಟುಗಳಾಗಿರಬಹುದು.

ಅಲ್ಲಿನ ರೈಲ್ವೇ ಸ್ಟೇಷನ್ನಿನ ಟಾಯ್ಲೆಟ್ಟುಗಳ ಚೊಕ್ಕತನದ ಬಗೆಗೆ ಒಂದು ಅಧ್ಯಾಯವನ್ನೇ ಬರೆಯಬಹುದು ಸ್ಟೇಷನ್ನಿನ ಅಧಿಕಾರಿಗಳು, ಸಾರ್ವಜನಿಕ ಸಂಪರ್ಕ ಅಧಿಕಾರಿಗಳು, ಟ್ಯಾಕ್ಸಿ ಡ್ರೈವರುಗಳು ಇವರುಗಳೆಲ್ಲರ ಡ್ರೆಸ್ ಕೋಡ್ ಅದ್ಭುತ. ಟ್ಯಾಕ್ಸಿ ಓಡಿಸುತ್ತಿರುವವನು ಸದಾ ಟ್ರಿಮ್ಮಾಗಿರುತ್ತಾರೆ. ಬರ್ತೀನಿ ಬರಲ್ಲ ಅನ್ನೋ ಮಾತೇ ಇಲ್ಲ. ಟ್ಯಾಕ್ಸಿಗೆ ನೀವು ಸಿಗ್ನಲ್ ಮಾಡಿದರೆ, ಅವರು ನಿಮ್ಮ ಬಳಿ ಬಂದು ಕೂತಲ್ಲಿಂದನೇ ಗುಂಡಿ ಅದುಮಿದರೆ ಹಿಂದುಗಡೆ ಬಾಗಿಲು ಆಟೋಮ್ಯಾಟಿಕ್ ಆಗಿ ತೆಗೆದುಕೊಳ್ಳುತ್ತದೆ. ನೀವು ಹೋಗಬೇಕಾದ ಜಾಗ ತಿಳಿಸಿದರೆ ಅಲ್ಲಿಗೆ ಮುಟ್ಟಿಸುತ್ತಾರೆ. ಮೀಟರು ತೋರಿಸಿದಷ್ಟು ಹಣ ಕೊಟ್ಟರೆ ಆಯಿತು. ಅವರೂ ನಿಮಗೆ ಶಿರಬಾಗಿ ವಂದಿಸಿ ಹೊರಡುತ್ತಾರೆ. ಬಾಗಿ ನಮಸ್ಕರಿಸುವುದು ಅಲ್ಲಿನ ಒಂದು ಸಂಪ್ರದಾಯ. ಅದನ್ನು ಎಲ್ಲರೂ ಪಾಲಿಸುತ್ತಾರೆ. ಕಛೇರಿಯ ಕಾರ್ಯದರ್ಶಿಗಳು ಯಾವ ಲೆವೆಲ್‌ಗೆ ಬೆನ್ನು ಬಾಗಿಸಿ ನಮಸ್ಕರಿಸಬೇಕು ಅನ್ನುವುದಕ್ಕೆ ಒಂದು ತರಪೇತಿ ಶಿಬಿರವೇ ಇದೆ. ಪರಸ್ಪರರು ವಂದಿಸಿಕೊಳ್ಳುವಾಗಂತೂ ಇಬ್ಬರೂ ಬಗ್ಗುತ್ತಲೇ ಇರುತ್ತಾರೆ. ನಾನು ಕೊನೆಗೆ ಅವರಿಗೆ ಧನ್ಯವಾದ ಹೇಳಬೇಕು ಅನ್ನುವ ಪೈಪೋಟಿ ಇಬ್ಬರಲ್ಲೂ ಇರುವುದರಿಂದ ಈ ಬಗ್ಗುವಿಕೆ ನಡೆದೇ ಇರುತ್ತದೆ. ನಾನು ಒಂದು ರೈಲ್ವೇ ಸ್ಟೇಷನ್ನಿನಲ್ಲಿ ಇಬ್ಬರು ಸ್ನೇಹಿತೆಯರು ಮಾತಾಡುತ್ತಾ ಹೀಗೆ ಬಗ್ಗುತ್ತಲೇ ಇದ್ದುದನ್ನು ಕಂಡು ಯಾರು ಕೊನೆಗೆ ಬಗ್ಗುವುದನ್ನು

ನಿಲ್ಲಿಸುತ್ತಾರೆ ಅನ್ನುವುದನ್ನು ಗಮನಿಸುತ್ತಲೇ ಇದ್ದೆ. ಅವರ ಬಗ್ಗುವಿಕೆ ಮುಂದುವರೆದೇ ಇದ್ದುದರಿಂದ ನನಗೂ ಬೇಜಾರಾಗಿ ಪ್ರೋಗ್ರಾಮ್ಮು ಅತ್ಲಾಗೆ ಅಂದುಕೊಂಡು ಬಂದೆ ಅನ್ನಿ.

ಜಪಾನು ದೇಶ ಸುಂದರ, ಜನ ಸುಂದರ, ಭಾಷೆಯ ತೊಡಕು ಇಲ್ಲದಿದ್ದರೆ, ನಮ್ಮ ರೂಪಾಯಿಗೆ ಇನ್ನೊಂದಿಷ್ಟು ಹೆಚ್ಚಿಗೆ ಯೆನ್ನು ಸಿಗೋ ಹಾಗಿದ್ದರೆ ಸಖತ್ತಾಗಿ ಮಜಾ ಮಾಡಬಹುದು. ಅದಕ್ಕೆ ನಾನೊಂದೆರಡು ಚುಟುಕ ಬರೆದೆ.

ನೋಡಬೇಕೆಂದರೆ ಜಪಾನು
ನೀನು ಏನೇ ಅನ್ನು
ಇರಬೇಕು ಕೈಯಲ್ಲಿ, ಜೋಬಲ್ಲಿ
ಸಾಕಷ್ಟು ಯೆನ್ನು

ಸುಂದರ ದೇಶ ಜಪಾನು
ಅದನ್ನು ಹೆಸರಿನಲ್ಲೇ ಇಟ್ಟುಕೊಂಡಿದ್ದರೂ
ಎಲ್ಲಿ ಹುಡುಕಿದರೂ
ಸಿಗಲಿಲ್ಲ ಒಂದೇ ಒಂದು ಪಾನು



'ಎಷ್ಟೊತ್ತ್ತೋ ತಲೆ ಬಾಚೋದು, ಎಷ್ಟೊತ್ತೋ ತಲೆ ಬಾಚೋದೂಂತ ಅವನ್ಯಾಕೆ ಗೋಳಾಡಿಸ್ತೀರ? ನಿಮ್ಗೇನು ಹೊಟ್ಟೆಕಿಚ್ಚು ಅವನು ತಲೆ ಬಾಚ್ಕೊಂಡ್ರೆ?'

ಕೊರವಂಜಿಯಿಂದ

ಕಾಫಿ ಹೌಸ್

ಅಬ್ಬಬ್ಬ ಅಂದರೂ ಅಷ್ಟೆ ಅಮ್ಮಮ್ಮ ಅಂದರೂ ಅಷ್ಟೆ ಅಯ್ಯಯ್ಯ ಅಂದರೂ ಅಷ್ಟೆ, ಬೆಂಗಳೂರಿನ ಟ್ರಾಫಿಕ್ಕಂತೂ ವಿವರಿಸೋಕ್ಕೇ ಅಸಾಧ್ಯ ಅನ್ನೋ ಮಾತಂತೂ ನಿಜ. ಆದರೆ ಏನು ಮಾಡೋದು ಅನುಭವಿಸಲೇ ಬೇಕಲ್ಲ, ನಾನಂತೂ ತುಂಬಾ ದೂರ ದೂರದ ಬಡಾವಣೆಗಳಿಗೆ ಹೋಗಬೇಕೆಂದರೆ ಬಸ್ಸು ಹತ್ತಿ ಮೂವತ್ತು ರೂಪಾಯಿ ಪಾಸ್ ತಗೊಂಡು ಹಾಯಾಗಿ ನಿದ್ದೆ ಮಾಡಿಕೊಂಡು ಹೋಗುತ್ತೇನೆ. ಇನ್ನು ನನ್ನ ಬೈಕು ಮತ್ತು ಕಾರು ಭಾನುವಾರಗಳಂದು ಮಾತ್ರ. ಒಂದಂತೂ ನಿಜ, ಒಂದು ಕಡೆ ಟ್ರಾಫಿಕ್ ಸಮಸ್ಯೆ ಇನ್ನೊಂದು ಕಡೆ ಏರುತ್ತಿರುವ ಇಂಧನ ಬೆಲೆ ಇವೆರಡೂ ಸೇರಿ ಬೆಂಗಳೂರಿಗರನ್ನು ಬಹಳ ಚಾಣಾಕ್ಷರನ್ನಾಗಿ ಮಾಡುತ್ತಿದೆ. ಯಾಕೆಂದರೆ ನಾನು ಎಲ್ಲಿಗಾದರೂ ಚಕ್ಕರ್ ಹೊಡೆಯಬೇಕಾದಂಥ ಸಂದರ್ಭಗಳಲ್ಲಿ ದೂರೋದು (ಅನಿಷ್ಟಕ್ಕೆಲ್ಲಾ ಶನೀಶ್ವರ ಹೊಣೆ ಅಂದ ಹಾಗೆ) ಟ್ರಾಫಿಕ್ಕನ್ನೇ. ಹೌದು ಅದು ಎಷ್ಟೋ ಸಲ ನನ್ನ ಮರ್ಯಾದೆಯನ್ನೂ ಕಾಪಾಡಿದೆ ಅಂದರೆ ಅತಿಶಯೋಕ್ತಿಯಲ್ಲ, ಏನಂತೀರ?

- ಬೇಲೂರು ರಾಮಮೂರ್ತಿ

ಹಿಂದೆಲ್ಲ ಸಮಾರಂಭಕ್ಕೆ ಹೋಗುವುದು ತಡವಾದಾಗ ಒಂದು ಒಳ್ಳೆಯ ಸಬೂಬು ಅಥವಾ ನಂಬಬಹುದಾದಂತಹ ಕಾರಣ ಹುಡುಕಲು ತಡಕಾಡಬೇಕಾಗುತ್ತಿತ್ತು. ಆದರೆ ಥಿಂಗ್ಸ್ ಆರ್ ಮೇಡ್ ಈಸಿ. ಟ್ರಾಫಿಕ್ ಜಾಮ್ ಎಂಬ ಯೂನಿವರ್ಸಲ್ ಎಕ್ಸ್ಕ್ಯೂಸ್ ಈಗ ಬೆಂಗಳೂರಿನಲ್ಲಿ ಲಭ್ಯ. ಇದನ್ನು ಸಲೀಸಾಗಿ ನೀಡಿ ಬಚಾವಾಗಬಹುದು. ಆದುದರಿಂದ 9ಕ್ಕೆ ಫಂಕ್ಷನ್ ಇದ್ದರೆ ಅವಸರ ಮಾಡಬೇಕಿಲ್ಲ. ಮನೇನ ನಿಧಾನವಾಗಿ 10ಕ್ಕೆ ಬಿಟ್ಟು, ಜಾಗ ತಲುಪಿ, ಉಸ್ಸಪ್ಪ ಎಂದು ಹೇಳಿ ಏನು ಟ್ರಾಫಿಕ್ ಅಂತ. ನಾನು ಬೇಗಲೇ ಮನೆ ಬಿಟ್ಟಿದ್ದರೂ ಸೇರೋ ಹೊತ್ತಿಗೆ ಇಷ್ಟು ಹೊತ್ತಾಯಿತು ನೋಡಿ ಎಂದು ವಿವರಣೆ ನೀಡಿ ಸಿಂಪತಿ ಗಿಟ್ಟಿಸಿಕೊಳ್ಳಬಹುದು. ಸತ್ಯನಾರಾಯಣ ಪೂಜೆಗೆ ಕರೆದಿದ್ದರೆ ಕತೆ ಕೇಳೋದನ್ನ ತಪ್ಪಿಸಿಕೊಳ್ಳೋದಕ್ಕೆ ಇದು ತುಂಬಾ ಉಪಯೋಗಕರ. ಸೀದಾ ಊಟದ ಹೊತ್ತಿಗೆ ತಲುಪಿದರಾಯಿತು. ಪ್ರಸಾದ ಹೇಗೂ ಎಲೇಗೆ ಹಾಕ್ತಾರೆ. ಅದೂ ಮಿಸ್ ಆಗೊಲ್ಲ. ಅಂದ ಹಾಗೆ ಈ ಟ್ರಾಫಿಕ್ ಜಾಮ್‌ನಿಂದ ಇನ್ನೊಂದು ಉಪಯೋಗ ಸಹ ಇದೆ - ಉಚಿತ ಪಾರ್ಕಿಂಗ್ ಸೌಲಭ್ಯ! ಅಲ್ವೇ? ಮಾಮೂಲಿ ಸಮಯಲ್ಲಿ ಜೆಸಿ ರೋಡ್‌ನಲ್ಲಿ ಪಾರ್ಕ್ ಮಾಡಿ ನೋಡೋಣ. ಆದರೆ ಜಾಮ್ ಇದ್ದರೆ ರಾಜಾರೋಷವಾಗಿ ರಸ್ತೆ ಮಧ್ಯದಲ್ಲೇ ಗಾಡಿ ನಿಲ್ಲಿಸಬಹುದು. ಯಾರೂ ದುಡ್ಡು ಕೇಳೋಲ್ಲ. ಆ ಸಮಯದಲ್ಲಿ ಸ್ಟೀರಿಂಗ್ ಮೇಲೆ ತಲೆ ಇಟ್ಟು ತಾಳ್ಮೆ ಕಳೆದುಕೊಳ್ಳದೆ ದೇಶವನ್ನು ಮುನ್ನಡೆಸುವುದು ಹೇಗೆ ಎಂದು ನಿರಾತಂಕವಾಗಿ ಯೋಚಿಸಬಹುದು. ಮುಂದಿನ ಸಲ ಜಾಮ್ ನಲ್ಲಿ ಸಿಕ್ಕಿಕೊಂಡಾಗ ಪರಿತಪಿಸದಿರಿ. ದೇಶದ ಬಗ್ಗೆ ಚಿಂತಿಸಿ.

- ಆನಂದ

ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮುಗಳ ವಿಷಯ ಬಂದಕೂಡಲೇ ನನ್ನ ಮನಸ್ಸು ಇಪ್ಪತ್ತೈದು ವರ್ಷದ ಹಿಂದಿನ ಯಾವುದೇ ಜಾಮುಗಳಿಲ್ಲದಿದ್ದ ನಗರವನ್ನು ನೆನೆಯುತ್ತದೆ. ಆ

ಕಾಲವಲ್ಲಿ ಇನ್ನೂ ರಸ್ತೆಯೇ ಆಗಿರದಿದ್ದ ಬಡಾವಣೆಯಲ್ಲಿ ನನ್ನ ಫ್ಲ್ಯಾಟ್ಸಿಗೆ ನಾಲ್ಕೈದು ಕಿಲೋಮೀಟರು ದೂರದಲ್ಲಿ ನಾನು ಮನೆಕಟ್ಟಿಕೊಂಡು ವಾಸಕ್ಕೆ ಬಂದೆ. ರಸ್ತೆಗಳೇ ಇಲ್ಲದ್ದರಿಂದ ಟ್ರಾಫಿಕ್ ಜಾಂ ಅನ್ನುವ ಹೆಸರು ನನಗೆ ಅನುಭವಕ್ಕೇ ಬಂದಿರಲಿಲ್ಲ! ನಗರ ಬೆಳೆಯಿತು,ಬರೀ ಎರಡೋ ಮೂರೋ ಅಕ್ಕ ಪಕ್ಕದ ರಾಜ್ಯಗಳಿಗೆ ಮಾತ್ರಾ ತೆಗೆದುಕೊಂಡಿದ್ದ ಬೆಂಗಳೂರು ಇಡೀ ಪ್ರಪಂಚಕ್ಕೆ ಬಾಗಿಲು ಮೈ ಮನಸ್ಸು ತೆರೆದು ಕೊಂಡಿತು. ಎಂ.ಎನ್.ಸಿ ಗಳು, ಬಿ.ಪಿ.ಓ ಗಳು ಬಂದವು, ಕೆಲವು ಲಕ್ಷ ಉದ್ಯೋಗ ಸೃಷ್ಟಿಯಾಯಿತು. ಸಹಜವಾಗಿಯೇ ಜನ ಅನ್ನ ಹುಡುಕಿಕೊಂಡು ಪ್ರಪಂಚದ ಎಲ್ಲೆಡೆಯಿಂದ ಇಲ್ಲಿಗೆ ಓಡಿ ಬಂದರು. ಐಷಾರಾಮಿ ಜೀವನದ ಹೆಬ್ಬಾಗಿಲು ತೆರೆದದ್ದು ಈಗ ಇತಿಹಾಸ. ಇಡೀ ನಗರ ನಾಗರಿಕ ಸಮಸ್ಯೆಗಳಿಂದ ಬಸವಳಿಪಡುವಂತೆ ಆಗಿರುವುದು ಈ ದಶಕದ ಅತಿ ದೊಡ್ಡ ಚೋದ್ಯ ಎಂದು ಮೂಲ ನಗರವಾಸಿಗಳ ಅನಿಸಿಕೆ ಇದಕ್ಕೇನು ಪರಿಹಾರ?

ಹತ್ತಿರ ಹತ್ತಿರದ ದೂರಕ್ಕೆ ಆದಷ್ಟೂ ಕಾಲು ನಡಿಗೆ ಇರಲಿ; ಬೈಸಿಕಲ್ಲುಗಳನ್ನು ಓಡಿಸಲು ಜನರಿಗೆ ಪ್ರೇರೇಪಿಸುವುದು-ಕಾರುಗಳು ಪ್ರತಿಷ್ಠೆಯ ಸಂಕೇತವಾಗಿರುವ ಹಾಗೆ ಬೈಸಿಕಲ್ಲುಗಳೂ ಪ್ರತಿಷ್ಠೆಯ ಸಂಕೇತದಂತೆ ಮೈಂಡ್ ಸೆಟ್ ಬದಲಾಯಿಸುವುದು. ಎಲ್ಲಕ್ಕಿಂತಲೂ ಮುಖ್ಯವೆಂದರೆ ನೈಸರ್ಗಿಕ ವಿಧಾನ - ಅಂದರೆ - ನಮ್ಮ ಸ್ವಂತ ಕಾಲುಗಳು- ಇವುಗಳ ಮೂಲಕ ಚಲನೆಯಿದ್ದಲ್ಲಿ ಯಾವುದೇ ಜಾಮೂ ಇರದು!

ವಲಸೆ ನಿಯಂತ್ರಣ ಮೊದಲಾದ ಮಾತುಗಳು ಕೇಳಿಬರುತ್ತಿದ್ದರೂ ಅದು ಸಾಧ್ಯವಾಗುವ ಸಂಗತಿಗಳೇ ಎಂದು ಚಿಂತಿಸಬೇಕಿದೆ.

- ಎಚ್.ಗೋಪಾಲಕೃಷ್ಣ

ಟ್ರಾಫಿಕ್ಕು ಟೆರಿಫಿಕ್ಕಾಗಿರೋ ಟಾಪಿಕ್ಕೇ ಟ್ರೂಲೀ ಟ್ಯಾಕ್ಲಿಂಗೂಂತ ಟಾಪ್ ಟೆನರ್‌ನಲ್ಲಿ ಟ್ರಂಪೆಟಿಸೋದು ಟೇಸ್ಟ್‌ಫುಲ್ ಟ್ರೈಟ್ ಅಲ್ಲ ಬಿಡಿ. ಅದು ಹಾಗಿರೋದೇ ಚಂದ. ಟ್ರಾಫಿಕ್ ಕಡಿಮೆ ಇದ್ದಾಗ ಜನ ಭರೋಂತ ಬಂದು ಧಡಾರಂತ ಢಿಕ್ಕಿ ಹೊಡೆಯೋರು. ಈಗ? ಕೂರ್ಮಗಳು ಕದಲೋ ಹಾಗೆ ನಿಧಾನವಾಗಿ ಸಾಗುವಾಗ ಅಬ್ಬಬ್ಬಾಂದ್ರೆ ಒಂದು ಗೀರಿನಷ್ಟು ಗಾಯವಾಗ್ಬಹುದಷ್ಟೆ ಪ್ರಾಣವಂತೂ ಬಿಲ್‌ಕುಲ್ ಹೋಗಲಾರ್ದು ಈ ಸ್ಲೀಪೀ ಸ್ನೈಲ್‌ಗಳು ಸ್ಲೈಡಾಗೋ ಸ್ಪೀಡ್ಗೆ. ಇನ್ನು ಕಾರಲ್ ಹೋಗೋರ್ಗಂತೂ ಕುತ್ಜಾಗ್ದಲ್ಲೇ ಬೆವರಿನ್ ಷವರ್ರು ಗ್ಯಾರಂಟಿ ಆದ್ರಿಂದ ಪೌಡ್ರು, ಸೆಂಟು ಮ್ಯಾನುಫ್ಯಾಕ್ಚರಿಸೋರ್ಗೆ ಸುಗ್ಗಿಯೋ ಸುಗ್ಗಿ. ವಾಹನಗ್ಳು ಸ್ಲೋವಾಗಿ ಹೋಗ್ತಾನೋ ಅಥವಾ ಇದ್ದಲ್ಲೇ ಝೂಂಡಾನೋ ಆಗೋದ್ರಿಂದ ತಿಂಡಿ, ಕಾಫಿ, ಜ್ಯೂಸ್ ವಗೈರೆ ಮಾರೋವ್ರ್ಗೂ ಅನ್ಕೂಲ್ವೇ.

ವಿಡಂಬ್ನೆ ಬಾಬ್ತು ಹಾಗಿರ್ಲಿ. ಟ್ರಾಫಿಕ್ಕು ಹೀಗೆ ಸಿಕ್ಕಿಸ್ಕಾಗಕ್ಕೆ ನಾವೇ ಕಾರ್ಣ. ಇತ್ತೀಚ್ಗೆ ನಾನು ಮಸ್ಕಾಟ್ಗೋಗಿದ್ದಾಗ ಅಲ್ಲಿನ ಪೋಲೀಸ್ರು ಸಿಗ್ನಲ್ದಾಟಿದ್ಮಂದೀನ ಎರಡ್ದಿನ ಜೈಲ್ಗಾಕಿದ್ರ ಬಗ್ಗೆ ತಿಳಿದೆ. ನಮ್ಮಲ್ಲೂ ರಾಜ್ಕೀಯದ್ಕೈವಾಡ್ವಿಲ್ದೇ, ದೊಡ್ಮನುಷ್ಯರ್ವರಾತ ಇಲ್ದಾಗಾಗಿ, ಕಾನೂನು ಬಿಗಿಯಾದ್ರೆ, ಅಲ್ಲಿನ ರೀತಿ ಕಾರ್‌ಪೂಲ್ ಸಿಸ್ಟಮ್ ನಮ್ಮಲ್ಲೂ ಬಂದ್ರೆ, ಮೆಟ್ರೊ ಶುರುವಾದ್ರೆ ಈ ಟೆರಿಫಿಕ್ ಸಿನಾರಿಯೋ ಗಾಯಬ್ ಆಗೋದು ಖಂಡಿತ. ಅಲ್ಲೀವರ್ಗೂ ಲೆಟಸ್ ಎಂಜಾಯ್ ಅವರ್ ಮಿಸರಿ ಮ್ಯಾನ್‌ಫುಲಿ!

- ಎನ್. ರಾಮನಾಥ್

ಹುರುಳಿ ಕಟ್ಟು.....

ನಿಮಗಾಗಿಯೇ......!

- ಎಚ್.ಗೋಪಾಲಕೃಷ್ಣ

ಫುಟ್ ಬಾಲ್ ಆಟದ ಒಂದು ತುಂಬಾ ಆರ್ದ್ರ ಕಥೆಯೊಂದನ್ನು ನನ್ನ ಫುಟ್ ಬಾಲ್ ಆಟಗಾರ ಗೆಳೆಯರೊಬ್ಬರು ಮೊನ್ನೆ ಹೇಳಿದರು. ಫುಟ್ ಬಾಲ್ ಆಟ ಎಂದರೆ ಹೇಳೀ ಕೇಳೀ ತುಂಬಾ ಒರಟಾದ ಆಟ, ಅದೂ ಅಲ್ಲದೇ ಇಲ್ಲಿ ನಮ್ಮ ದೇಶದಲ್ಲಿ ಈ ಕ್ರೀಡೆಗೆ ಹೊರದೇಶಗಳಲ್ಲಿ ಇರುವ ಪ್ರಾಮುಖ್ಯತೆ ಇಲ್ಲವೇ ಇಲ್ಲ ಅಂತಲೇ ಹೇಳಬಹುದು-ಕ್ರಿಕೆಟ್ ಕ್ರೀಡೆಗೆ ಹೋಲಿಸಿದರೆ. ಹೊರದೇಶಗಳಲ್ಲಿ ದೇಶಕ್ಕೆ ಫುಟ್‌ಬಾಲ್ ಆಟವನ್ನು ಪ್ರತಿನಿಧಿಸಿದವನು ಒಂದು ರೀತಿಯಲ್ಲಿ ಆರಾಧ್ಯ ದೈವವೇ ಆಗಿಬಿಡುತ್ತಾನೆ. ನಮ್ಮಲ್ಲಿ ಫುಟ್‌ಬಾಲ್ ಬರೀ ಬಡವರ ಆಟವಾಗಿಯೇ ಉಳಿದುಕೊಂಡಿದೆ ಮತ್ತು ಕೆಲವು ಕ್ಷೇತ್ರಗಳಲ್ಲಿ ಬಿಟ್ಟರೆ ಇದು ತುಂಬಾ ಸೊರಗುತ್ತಿರುವ ಕ್ರೀಡೆ-ನಮ್ಮಲ್ಲಿ.


ನನ್ನ ಗೆಳೆಯರು ಹೇಳಿದ ಪ್ರಸಂಗ ಅವರು ಫುಟ್‌ಬಾಲ್ ಆಟಗಾರರಾಗಿದ್ದಾಗ ನಡೆದದ್ದು-ಸುಮಾರು ಇಪ್ಪತ್ತು ವರ್ಷದ ಹಿಂದೆ. ಒಂದು ಪ್ರಖ್ಯಾತ ಟೂರ್ನಮೆಂಟಿನಲ್ಲಿ ಇವರೂ ಇವರ ಗೆಳೆಯರೂ ಭಾಗವಹಿಸಿದ್ದರು. ಪ್ರತೀ ಪಂದ್ಯದಲ್ಲಿಯೂ ಯಶಸ್ವಿಯಾಗಿ ಫಾರ್ ವರ್ಡ್ ಆಟ ಆಡಿದ್ದವರು ಇವರಿಗೆ ಸಾಥಿಯಂತೆ. ಫಾರ್‌ವರ್ಡ್ ಅನ್ನುವುದು ಫುಟ್‌ಬಾಲ್ ಆಟದಲ್ಲಿ ಒಂದು ಪ್ರಮುಖ ಸ್ಥಾನ, ಗೋಲು ಗಳಿಸಲು, ಎದುರು ಆಟಗಾರರ ಆಕ್ರಮಣವನ್ನು ನಿಯಂತ್ರಿಸಲು ಈ ಫಾರ್ ವರ್ಡ್ ಆಟಗಾರ ಬಹು ಮುಖ್ಯವಾದವನು. ಫಾರ್‌ವರ್ಡ್ ಆಡುತ್ತಿದ್ದ ಮತ್ತೊಬ್ಬ ಆಟಗಾರನಿಗೆ ಯಾವುದೋ ಕಾರ್ಖಾನೆಯಲ್ಲಿ ಕೆಲಸದ ಆಹ್ವಾನ ಬಂದಿತ್ತು-ಅದೂ ಕ್ರೀಡಾಪಟುವಾಗಿ ಆಯ್ಕೆಯಾಗಲು-ಒಂದು ಷರತ್ತನ್ನ ವಿಧಿಸಿದ್ದರಂತೆ- ಆ ವರ್ಷದ ಟೂರ್ನಮೆಂಟಿನಲ್ಲಿ ಆತ ಅಧಿಕ ಗೋಲು ಗಳಿಸಿರಬೇಕು ಎಂದು. ಈವರೆಗೆ ಗಳಿಸಿರುವ ಗೋಲುಗಳಲ್ಲಿ ಈ ಆಟಗಾರ ಒಂದೆರೆಡು ಗೋಲುಗಳನ್ನ ಮತ್ತೊಬ್ಬರಿಗಿಂತ ಕಡಿಮೆಗಳಿಸಿದ್ದ. ತಮಾಷೆ ಎಂದರೆ ಇವನಿಗಿಂತಲೂ ಹೆಚ್ಚು ಗೋಲು ಗಳಿಸಿದ್ದವನು ಇವನದ್ದೇ ಟೀಮಿನಲ್ಲಿ ಆಡುತ್ತಿದ್ದು ಅವನಿಗೂ ಕೆಲಸದ ಅಗತ್ಯ ಇವನಿಗಿಂತಲೂ ಹೆಚ್ಚಿತ್ತು.

ಇಂಥ ಸಮಯದಲ್ಲಿ ಕೆಲವರ ಮನಸ್ಸು ಹೇಗೆ ಓಡುತ್ತೆ ನೋಡೀ. ಇಬ್ಬರೂ ಹಾಫ್ ಟೈಮಿನಲ್ಲಿ ಪಕ್ಕಪಕ್ಕವೇ ಕೂತರು. ಜ್ಯಾಸ್ತಿ ಗೋಲು ಗಳಿಸಿದ್ದವನು ಇವನ ಅವಶ್ಯಕತೆ ಬಗ್ಗೆ ಕೇಳಿದ ಅವನ ಅಗತ್ಯವನ್ನೂ ವಿವರಿಸಿದ. ಇವತ್ತು ಗೋಲು ಹೊಡೀದೇ ಇದ್ದರೂ ನನಗಿಂತ ಆವರೇಜಿನಲ್ಲಿ ನೀನೇ ಹೆಚ್ಚಿರುತ್ತಿ-ನಿನಗೇ ಕೆಲಸ ಗ್ಯಾರಂಟಿ ಅಂತ ಇವನ ಕೈ ಕುಲುಕಿ ಅವನೂ ಶುಭ ಹಾರೈಸಿದ.

ಎರಡನೇ ಹಾಫಿನ ಆಟ ಶುರುವಾಯಿತು. ಎರಡೂ ಫಾರ್ ವರ್ಡ್ ಗಳು ಬಿರುಸುನಿಂದ ಚೆಂಡನ್ನ ಎದುಗೋಲಿಗೆ ಒಯ್ದರು. ಹೆಚ್ಚು ಗೋಲು ಗಳಿಸಿರುವನಿಗೆ ಸುಲಭವಾಗಿ ಗೋಲು ಹೊಡೆಯುವ ಅವಕಾಶವಿದ್ದರೂ ಚೆಂಡನ್ನ ಇವನ ಬಳಿ ಪಾಸ್ ಮಾಡಿದ. ಚೆಂಡು ಗೋಲಿನೊಳಗೆ ನುಸುಳಿತು. ಎರಡನೇ ಗೋಲನ್ನೂ ಇದೇ ರೀತಿ ಮಾಡಿ ಅವನೇ ಹೊಡೆಯುವಂತೆ ಮಾಡಿದನಂತೆ. ಆಟ ಮುಗಿಯಲು ಮೂರು ನಿಮಿಷವಿದ್ದಾಗ ಮತ್ತೊಮ್ಮೆ ಈ ಆಟ ಪುನರಾವರ್ತನೆಯಾಗಿ ಮೂರನೇ ಗೋಲನ್ನೂ ಅವನು ಗಳಿಸಿದ. ಕೆಲಸ ಖಾತ್ರಿಯಾದಂತಾಯಿತು.

ಮ್ಯಾಚು ಮುಗಿದ ನಂತ್ರ ಇವನಿಗೆ ಗೋಲು ಹೊಡೆಯಲು ಅವಕಾಶ ಮಾಡಿಕೊಟ್ಟಿದ್ದವರು ಹೇಳಿದರಂತೆ- ಪಾಪ ಹಳ್ಳಿಯಿಂದ ಬಂದಿದ್ದ ಇಲ್ಲಿ ಅವನಿಗೆ ಯಾರೂ ಇಲ್ಲ ನನಗಾದರೆ ನಮ್ಮ ಅಪ್ಪ ಅಮ್ಮ ನೋಡ್ಕೋತರೆ-ಇನ್ನೂ ಐದಾರು ವರ್ಷ ನನ್ನ ಸಾಕ್ತಾರೆ. ಅವನಿಗೆ ಕೆಲಸ ಸಿಕ್ಕಲ್ಲ ಅಂದರೆ ಅವನು ಆಟವನ್ನೇ ಬಿಟ್ಟು ಹೋಗಿಬಿಡ್ತಾನೆ..... ....

ಗೆಳೆಯರು ಈ ಪ್ರಸಂಗ ಹೇಳಬೇಕಾದರೆ ಅವರ ಮುಖದಲ್ಲಿ ಎಂಥಹಾ ಬೆಳಕು ಇತ್ತೂ ಅಂತೀರೀ...



ನೋಡ್ರೀ.... ಆಕೆ ತೌರೂರಿಗೆ ಹೋದಾಗಿಂದ ಆತ ಎಷ್ಟು ಚೆನ್ನಾಗಿ ಆಗಿದ್ದಾರೆ!!

ಕೊರವಂಜಿಯಿಂದ

ತುಂತುರು

- ಮಕ್ಕಳಿಗೆ ಮಾತು ಬಂದರೆ ಶಾಲೆಗೆ ಸೇರಿಸುತ್ತೇವೆ. ವಯಸ್ಸಿಗೆ ಬಂದರೆ ಮದುವೆ ಮಾಡ್ತೀವಿ. ಹಾಗೇ ಅಪ್ಪ ಅಮ್ಮನಿಗೆ ವಯಸ್ಸಾದರೆ ವೃದ್ಧಾಶ್ರಮಕ್ಕೆ ಸೇರಿಸುವುದು ಧರ್ಮ.
- Death is hereditary.
- ಮದುವೆ ಆಗುವುದರಿಂದ ಸಿಗುವ ಲಾಭ ಅಂದರೆ ನಮ್ಮ ಕಷ್ಟಕ್ಕೆ ಕಾರಣವನ್ನು ನಮ್ಮ ಮನೆಯಲ್ಲೇ ಒಬ್ಬರ ಮೇಲೆ ಹಾಕುವ ಅನುಕೂಲ ಒದಗಿ ಬರುವುದು.
- Afternoon: That part of the day we spend worrying about how we wasted the morning.
- ಈ ಚಿತ್ರದ ಸಂಗೀತಕ್ಕೆ 59 ನಂಬರ್ ಕೊಡಬಹುದು - 100ಕ್ಕಲ್ಲ 1000ಕ್ಕೆ.
- ನಿಮ್ಮ ಮಕ್ಕಳೊಂದಿಗೆ ಸರಿಯಾಗಿರಿ. ಏಕೆಂದರೆ ನೀವು ಯಾವ ನರ್ಸಿಂಗ್ ಹೋಂಗೆ ಸೇರಬೇಕೆಂದು ನಿರ್ಧರಿಸುವುದು ಅವರೇ.
- When you are sinking become a submarine.
- ಮೊದಲು ಸ್ನೇಹಿತನಾಗಿರಬೇಕು. ನಂತರವಷ್ಟೇ ಶತ್ರುವಾಗಲು ಸಾಧ್ಯ.
- What is the difference between ignorance and indifference? I don't know and I don't care.
- ಅಡಿಗೆ ಮಾಡುವ ರೋಬಾಟ್‌ನನ್ನು ರೋಭಟ್ಟ ಎಂದು ಕರೆಯಬಹುದೆ?
- There will be a never better time to do the best thing than today.
- ನಾನು ಮಹಾತ್ಮ ಗಾಂಧಿ ಆಗಬೇಕು. ಇಂದಿರಾ ಗಾಂಧಿ ಆಗಬೇಕು. ರಾಜೀವ್ ಗಾಂಧಿ ಆಗಬೇಕು. ಆದರೆ ನಾನು ಬದುಕಿರಬೇಕು.
- Magic is anything that is not understood.
- ಭೂಮಿಯ ಮೇಲೆ ಮನುಷ್ಯರೇ ಇಲ್ಲದಿದ್ದರೆ ದೇವರೇನು ಮಾಡುತ್ತಿದ್ದ?
- Even the red carpet is just a rug.
- New equation - $E=Mc^2$, Election = Manipulation, Corruption two times over.
- Karma is a non biodegradable load.
- ಕಾಮನಬಿಲ್ಲು ಬೇಕೆಂದರೆ ಮಳೆಯನ್ನು ಸಹಿಸಿಕೊಳ್ಳಬೇಕು.

- **ದಂನಅ**

ಲಂಚ: ಮಾಯವಾದ ಸತ್-ಸಂಪ್ರದಾಯ

- ಡಿ.ವಿ. ಗುರುಪ್ರಸಾದ್

ಈ ಹಿಂದೆ ನಮ್ಮ ದೇಶದಲ್ಲಿ ಒಂದು ಸಂಪ್ರದಾಯ ಜಾರಿಯಲ್ಲಿತ್ತು. ಒಬ್ಬ ವ್ಯಕ್ತಿ ತನ್ನದೇ ಕಸುಬು ಮಾಡುವ ಇನ್ನೊಬ್ಬನಿಂದ ತಾನು ಮಾಡಿದ ಸೇವೆಗಾಗಿ ಯಾವುದೇ ರೀತಿಯ ಫಲವನ್ನೂ ಪಡೆಯದೇ ಇರುವುದೇ ಆ ಸಂಪ್ರದಾಯ. ಉದಾಹರಣೆಗೆ, ಒಬ್ಬ ಕ್ಷೌರಿಕ ಇನ್ನೊಬ್ಬ ಕ್ಷೌರಿಕನ ಬಳಿ ಕ್ಷೌರಕ್ಕೆ ಹೋದರೆ ಕ್ಷೌರ ಮಾಡುವವನು ತನ್ನ ಕೆಲಸಕ್ಕೆ ಹಣವನ್ನು ಪಡೆಯುತ್ತಿರಲಿಲ್ಲ. ಒಬ್ಬ ಉಪಹಾರ ಗೃಹದ ಮಾಲೀಕ ಬೇರೊಂದು ಉಪಹಾರ ಗೃಹಕ್ಕೆ ಹೋಗಿ ಟಿಫಿನ್ ಮಾಡಿದರೆ ಆ ಕಸುಬಿನ ಬಾಂಧವ ಖಂಡಿತ ಅವನಿಂದ ಹಣವನ್ನು ಪಡೆಯುತ್ತಿರಲಿಲ್ಲ. ಈಗೀಗ ಈ ಸತ್ಸಂಪ್ರದಾಯ ಮುಗಿಯುತ್ತಾ ಬಂದಿದೆ ಅನಿಸುತ್ತದೆ. ಪೊಲೀಸ್ ಇಲಾಖೆಯಲ್ಲಂತೂ ಇಂತಹ ಉತ್ತಮ ಸಂಪ್ರದಾಯಗಳು ಮುಗಿದೇ ಹೋಗಿವೆ ಎನ್ನುವುದು ನನ್ನ ಅನುಭವದ ಮಾತು.

ಈ ಘಟನೆ ನಡೆದದ್ದು ಸುಮಾರು 3 ದಶಕಗಳ ಹಿಂದೆ. ಕೇಂದ್ರೀಯ ಅರೆ ಸೈನ್ಯ ಪಡೆಯೊಂದರಲ್ಲಿ ನಾನು ದೆಹಲಿಯಲ್ಲಿ ಕೆಲಸ ಮಾಡುತ್ತಿದ್ದೆ. ಕರ್ನಾಟಕದ ದೊಡ್ಡ ಜಿಲ್ಲೆಯೊಂದರಲ್ಲಿ ಎಸ್‌ಪಿಯಾಗಿ ಮೂರು ವರ್ಷ ಅಧಿಕಾರ ನಡೆಸಿ ಕೇಂದ್ರ ಸರ್ಕಾರದ ಎರವಲು ಸೇವೆಯ ಮೇರೆಗೆ ಕಾರ್ಯನಿರ್ವಹಿಸುತ್ತಿದ್ದೆ. ಒಂದು ದಿನ ದೆಹಲಿಯಲ್ಲಿ ಇದ್ದ ನನ್ನ ಸಂಬಂಧಿಕರೊಬ್ಬರು ನನಗೆ ಫೋನ್ ಮಾಡಿದರು. ಅವರ ಧ್ವನಿಯಲ್ಲಿ ದುಗುಡ ತುಂಬಿತ್ತು. ಏನಾಯಿತು? ಎಂದು ಕೇಳಿದೆ. ಸೌತ್ ಎಕ್ಸ್‌ಟೆನ್ಷನ್ ಬಳಿ ನಾನು ಸ್ಕೂಟರ್‌ನಲ್ಲಿ ಬರುತ್ತಿದ್ದಾಗ ಕೆಂಪು ದೀಪವಿದ್ದರೂ ಸ್ಕೂಟರನ್ನು ಓಡಿಸಿದೆ ಎಂದು ಸ್ಥಳದಲ್ಲೇ ಇದ್ದ ಟ್ರಾಫಿಕ್ ಇನ್ಸ್‌ಪೆಕ್ಟರ್ ನನ್ನ ಲೈಸೆನ್ಸ್ ಹಾಗೂ ಆರ್‌ಸಿ ಪುಸ್ತಕ ಜಪ್ತಿ ಮಾಡಿದ್ದಾರೆ. ನನ್ನ ಸ್ಕೂಟರನ್ನು ಪೊಲೀಸ್ ಠಾಣೆಗೆ ಕೊಂಡೊಯ್ದಿದ್ದಾರೆ. ನೀವು ಹಿರಿಯ ಪೊಲೀಸ್ ಅಧಿಕಾರಿ, ಸಂಬಂಧಪಟ್ಟವರಿಗೆ ಹೇಳಿ ನನ್ನ ವಾಹನ ಬಿಡಿಸಿಕೊಡಿ ಎಂದರು. ಸಾಮಾನ್ಯವಾಗಿ ಬೆಂಗಳೂರಿನಲ್ಲಿ ಇಂತಹ ಅಪರಾಧಗಳಾದರೆ ನೂರು ರೂ. ಫೈನ್ ಹಾಕುತ್ತಾರೆ. ಫೈನ್ ತುಂಬಿಬಿಡಿ ಎಂದೆ. ಅವರು ಸರಿ ಎಂದು ಫೋನ್ ಕೆಳಗಿಟ್ಟರು. ಮತ್ತೆ ಎರಡು ಗಂಟೆಯ ನಂತರ ಫೋನಾಯಿಸಿ, ಇವರು ಫೈನ್ ಏನೂ ಬೇಡಾ ನನಗೆ ಐದುನೂರು ರೂ. ಲಂಚ ಕೊಡಿ ಎಂದು ದುಂಬಾಲು ಬಿದ್ದಿದ್ದಾರೆ. ಇನ್ಸ್‌ಪೆಕ್ಟರ್‌ಗೆ ದಯವಿಟ್ಟು ಹೇಳಿ ಎಂದರು.

ನಾನು ಸಂಬಂಧಿಸಿದ ಪೊಲೀಸ್ ಇನ್ಸ್‌ಪೆಕ್ಟರ್‌ಗೆ ಫೋನಾಯಿಸಿ ನನ್ನ ಪರಿಚಯ ಮಾಡಿಕೊಂಡೆ, ಆತ ಗೌರವಯುತವಾಗಿಯೇ ನಮಸ್ತೆ ಎಂದ. ನಡೆದ ಘಟನೆ ವಿವರಿಸಿ ನನ್ನ ಸಂಬಂಧಿಕರ ಸ್ಕೂಟರ್ ಹಾಗೂ ಲೈಸೆನ್ಸ್‌ಗಳನ್ನು ಮರಳಿಸಲು ಹೇಳಿದೆ. ಏನೋ ಈ ಒಂದು ಬಾರಿ ತಪ್ಪು ಮಾಡಿದ್ದಾರೆ. ಈ ಬಾರಿ ವಾರ್ನಿಂಗ್ ಮಾಡಿ ಬಿಟ್ಟುಬಿಡಿ. ನಾವು ಬೆಂಗಳೂರಿನಲ್ಲಿ ಮೊದಲ ಬಾರಿಗೆ ಈ ರೀತಿ ತಪ್ಪು ಮಾಡುವವನಿಗೆ ಬುದ್ಧಿಹೇಳಿ ಬಿಟ್ಟುಬಿಡುತ್ತೇವೆ ನಿಮ್ಮಲ್ಲಿ ಈ ರೀತಿ ವ್ಯವಸ್ಥೆ ಇಲ್ಲದಿದ್ದರೆ ಸ್ಪಾಟ್ ಫೈನ್ ತುಂಬಿಸಿಕೊಂಡು ಅವರನ್ನು ಬಿಡಿ ಎಂದೆ. ಆತ

ಖಡಾಖಂಡಿತವಾಗಿ ನೀವು ಹೇಳುವಂತೆ ಮಾಡಲಾಗುವುದಿಲ್ಲ, ಇದು ದೆಹಲಿ ನಗರ, ಕರ್ನಾಟಕ ಅಲ್ಲ ಎಂದು ಬಿಟ್ಟ. ನಾನು ಗಾಭರಿಗೊಂಡೆ. ಎಸ್‌ಪಿ ಹುದ್ದೆಯಲ್ಲಿ ಇದ್ದ ನನ್ನ ಜೊತೆ ಒಬ್ಬ ಪೊಲೀಸ್ ಇನ್ಸ್‌ಪೆಕ್ಟರ್ ಈ ರೀತಿ ಮಾತನಾಡುತ್ತಿರುವನಲ್ಲ ಎಂದು ನನಗೆ ಸ್ವಲ್ಪ ಕೋಪವೂ ಬಂದಿತು. ಆದರೂ ಕೂಡ ತಾಳ್ಮೆ ಕಳೆದುಕೊಳ್ಳದೆ ಸರಿ ಏನು ಮಾಡಬೇಕು ಎಂದು ಕೇಳಿದೆ. ನಿಮ್ಮ ಸಂಬಂಧಿಕರು ಲಂಚ ಕೊಟ್ಟರೆ ಬಿಡುತ್ತೇವೆ ಎಂದ. ನಾನು ದಂಗಾಗಿ ಹೋದೆ. ಇದೇನು ಮಾತನಾಡುತ್ತಿದ್ದೀರಿ. ನಾನು ಐಪಿಎಸ್ ಅಧಿಕಾರಿ ಎಂದು ಹೇಳಲಿಲ್ಲವೇ ಎಂದೆ. ಸರ್ ನೋಡಿ 500 ರೂಪಾಯಿ ನನಗೆ ಕೊಡಿಸಿ ನಾನು ಯಾವ ಕೇಸೂ ಮಾಡದೆಯೇ ನಿಮ್ಮ ಸಂಬಂಧಿಕರ ಸ್ಕೂಟರನ್ನು ಬಿಡುತ್ತೇನೆ ಎಂದ. ಏನಪ್ಪ ನಾನು ಐಪಿಎಸ್ ಅಧಿಕಾರಿ ಎಂದು ಹೇಳಿದರೂ ನನ್ನ ಜೊತೆ ನೀನು ಈ ರೀತಿ ಮಾತನಾಡುತ್ತಿದ್ದೀಯಲ್ಲಾ ಎಂದೆ. ಸರ್ ನೀವು ಐಪಿಎಸ್ ಆಫೀಸರ್ ಎಂದು ಗೊತ್ತಾಗಿಯೇ ಹೀಗೆ ಹೇಳುತ್ತಿದ್ದೀನಿ. ನೀವು ಐಪಿಎಸ್ ಆದ್ದರಿಂದ ನಿಮಗೆ ಶೇಕಡ 50 ರಷ್ಟು ಡಿಸ್ಕೌಂಟ್ ಇದೆ. ಐನೂರು ರೂಪಾಯಿ ಕಟ್ಟಿಸಿಬಿಡಿ, ಉಳಿದವರಿಂದಲಾದರೆ ಸಾವಿರ ರೂಪಾಯಿ ಲಂಚ ಪಡೆಯುತ್ತೇನೆ ಎಂದ. ಐದು ಪೈಸೆ ಕೂಡ ಕೊಡುವುದಿಲ್ಲ, ನೀನು ಬೇಕಾದ್ದು ಮಾಡಿಕೋ ಎಂದು ಫೋನ್ ಕುಕ್ಕಿ ನಮ್ಮ ಸಂಬಂಧಿಕರಿಗೆ ಕೋರ್ಟಿಗೆ ಹೋಗಿ ದಂಡ ಕೊಟ್ಟು ಕೇಸನ್ನು ಸರಿಪಡಿಸಿಕೊಳ್ಳಿ ಎಂದು ಉಪದೇಶಿಸಿದೆ. ಉದ್ಧಟತನ ತೋರಿಸಿದ ಪೊಲೀಸ್ ಇನ್ಸ್‌ಪೆಕಟ್ಟರ್ ಬಗ್ಗೆ ದೆಹಲಿಯಲ್ಲಿಯ ಟ್ರಾಫಿಕ್ ಡಿಸಿಪಿ ರವರಿಗೆ ದೂರನ್ನು ಕೊಟ್ಟೆ. ದೂರು ಸ್ವೀಕರಿಸಿದ ಅವರು ಯೇ ತೋ ದಿಲ್ಲಿ ಹೈ, ಯೇ ಸಬ್ ಚಲ್ತಾ ರೆಹತಾ ಹೈ ಸಾಬ್ ಎಂದು ಮಾತೇ ತೇಲಿಸಿಬಿಟ್ಟರು. ಕಡೆಗೂ ನನ್ನ ಸಂಬಂಧಿಕರು ಲಂಚ ಕೊಟ್ಟೇ ಸ್ಕೂಟರ್ ವಾಪಸ್ ಪಡೆದರಂತೆ!

ದೆಹಲಿಯಲ್ಲೇ ಇದ್ದಾಗ ಇದೇ ರೀತಿಯ ಇನ್ನೊಂದು ಘಟನೆ ನಡೆಯಿತು. ನನ್ನ ಹೆಂಡತಿ ಹಾಗೂ ನಾನು ಪಾಸ್‌ಪೋರ್ಟ್‌ಗೆಂದು ಅರ್ಜಿ ಹಾಕಿಕೊಂಡಿದ್ದೆವು. ಸಾಮಾನ್ಯವಾಗಿ ಪಾಸ್‌ಪೋರ್ಟ್‌ಗೆ ಅರ್ಜಿ ಹಾಕಿದರೆ ಸಂಬಂಧಪಟ್ಟ ಪೊಲೀಸ್ ಠಾಣೆಯ ಅಧಿಕಾರಿಗಳು ನಾವು ವಾಸವಿರುವ ಜಾಗಕ್ಕೆ ಬಂದು ನಾವು ಅರ್ಜಿಯಲ್ಲಿ ತಿಳಿಸಿರುವ ಮನೆಯಲ್ಲಿಯೇ ವಾಸವಿದ್ದೇವೆಯೇ ಇಲ್ಲವೇ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಇದಕ್ಕೆ ಪೊಲೀಸ್ ವೆರಿಫಿಕೇಷನ್ ಎನ್ನುತ್ತಾರೆ. ನಾವು ಅರ್ಜಿ ಹಾಕಿದ 15 ದಿನಗಳ ನಂತರ ಆರು ಅಡಿ ಎತ್ತರದ ಅಜಾನುಬಾಹು ವ್ಯಕ್ತಿಯೊಬ್ಬ ಬಂದು ಬಾಗಿಲು ತಟ್ಟಿದ. ನೀನು ಯಾರು? ಎಂದೆ. ನಾನು ಲೋದಿರೋಡ್ ಪೊಲೀಸ್ ಠಾಣೆಯ ಸ್ಪೆಷಲ್ ಬ್ರಾಂಚ್ ಹೆಚ್‌ಸಿ ಎಂದ ಏನು ವಿಷಯ? ಎಂದು ಕೇಳಿದೆ. ನೀವು ಪಾಸ್‌ಪೋರ್ಟ್‌ಗೆಂದು ಅರ್ಜಿ ಹಾಕಿದ್ದೀರಾ? ಎಂದು ಕೇಳಿದ. ಹೌದು ಎಂದೆ. ಆತ ತನ್ನ ಫೈಲ್‌ನಿಂದ ನಮ್ಮ ಅರ್ಜಿ ಫಾರಂನ ಪ್ರತಿಗಳನ್ನು ತೆಗೆದು ಪ್ರಶ್ನೆಗಳನ್ನು ಕೇಳತೊಡಗಿದ. ನನ್ನ ಹೆಂಡತಿ ಅವನನ್ನು ಸೋಫಾದ ಮೇಲೆ ಕುಳ್ಳಿರಿಸಿದಳು. ನಮ್ಮ ಉತ್ತರಗಳನ್ನು ಎಲ್ಲಾ ಬರೆದುಕೊಂಡ ಆತ ಎದ್ದು ನಿಂತು ನನ್ನ ಮುಖ ನೋಡಿ ಕುಚ್ ಚಾಯ್ ಪಾನಿ ನಹೀ ಕ್ಯಾ ಎಂದ. ಓ! ಸಾರಿ ಎಂದು ನನ್ನ ಹೆಂಡತಿ ಅಡಿಗೆ ಮನೆಗೆ ಓಡಿ ಹೋಗಿ ಅವನಿಗೆ ಒಂದು ಲೋಟ ನೀರು ತಂದು ಕೊಟ್ಟಳು. ಆನಂತರ ಚಹಾ ಮಾಡಿ ಅವನಿಗೂ ನನಗೂ ಒಟ್ಟಿಗೆ ಚಹಾ ಮತ್ತು ಬಿಸ್ಕತ್ತು ಕೊಟ್ಟಳು. ಶುಕ್ರಿಯಾ ಎಂದು ಹೇಳಿ ಚಹಾ ಸೇವಿಸಿದ

ಆತ ಮತ್ತೊಮ್ಮೆ ಚಾಯ್ ಪಾನಿ ನಹಿ ದೇತೇ ಕ್ಯಾ? ಎಂದ. ಹರಕು ಮುರುಕು ಹಿಂದಿ ಅರಿತಿದ್ದ ನನ್ನ ಹೆಂಡತಿ ಅಲ್ಲಪ್ಪಾ ಈಗ ತಾನೇ ನಿನಗೆ ನೀರನ್ನು ಕೊಟ್ಟು, ಬಿಸ್ಕತ್ತು ಮತ್ತು ಚಹಾ ಕೊಟ್ಟೆ ಇನ್ನೂ ಎಷ್ಟು ಕಪ್ ಚಹಾ ಕುಡಿಯುತ್ತೀಯಾ? ಎಂದು ಕೇಳಿದಳು. ಅಷ್ಟರಲ್ಲಿ ನನ್ನ ಸ್ನೇಹಿತನೊಬ್ಬ ನನ್ನನ್ನು ಹುಡುಕಿಕೊಂಡು ನಮ್ಮ ಮನೆಗೆ ಬಂದ. ನನ್ನ ಹೆಂಡತಿ ಅವನನ್ನು ಕುರಿತು ಈತ ನೋಡಿ ಒಂದು ಬಾರಿ ಚಹಾ ಕುಡಿದ ನಂತರವೂ ಚಾಯ್‌ಪಾನಿ ಎಂದು ಕೇಳುತ್ತಿದ್ದಾನೆ ಎಂದಳು. ಆ ನನ್ನ ಸ್ನೇಹಿತ ಗಹಗಹಿಸಿ ನಗತೊಡಗಿದ. ಪಾಪ ನಿಮಗೆ ಗೊತ್ತಿಲ್ಲ. ಇಲ್ಲಿಯ ಭಾಷೆಯಲ್ಲಿ ಚಾಯ್‌ಪಾನಿ ಎಂದರೆ ಲಂಚ ಎಂದು ಅರ್ಥ. ಆತ ನಿಮ್ಮಿಂದ ನೂರೋ ಇನ್ನೂರೋ ಕೇಳುತ್ತಿದ್ದಾನೆ ಎಂದು ವಿವರಿಸಿದ.

ಇದನ್ನು ಕೇಳಿಸಿಕೊಂಡ ನನಗೆ ತಡೆಯಲಾರದ ಸಿಟ್ಟು ಬಂತು. ಆ ಹೆಚ್‌ಸಿಯನ್ನು ಉದ್ದೇಶಿಸಿ, ನಾನು ಯಾರು ಎಂದು ನಿನಗೆ ತಿಳಿದಿದೆಯಾ? ಎಂದು ಕೇಳಿದೆ. ಆತ ಸ್ವಲ್ಪವೂ ವಿಚಲಿತನಾಗದೆ ನಿಮ್ಮ ಪಾಸ್‌ಪೋರ್ಟ್ ಅರ್ಜಿಯಲ್ಲಿ ನೀವು ಐಪಿಎಸ್ ಆಫೀಸರ್ ಎಂದು ಬರೆದುಕೊಂಡಿದ್ದೀರಲ್ಲಾ? ಎಂದ ಅಲ್ಲಪ್ಪಾ ನೀನು ಒಬ್ಬ ಹೆಚ್‌ಸಿ, ನಾನು ನಿಮ್ಮ ಡಿಸಿಪಿ ಹುದ್ದೆಯ ಅಧಿಕಾರಿ, ನನ್ನ ಹತ್ತಿರವೇ ಸರ್ಕಾರಿ ಕೆಲಸ ಮಾಡಲು ಲಂಚ ಕೇಳಲು ನಿಮಗೆ ನಾಚಿಕೆಯಾಗುವುದಿಲ್ಲವೇ? ಎಂದು ಕೇಳಿದಾಗ ಅವನು ನನ್ನನ್ನು ದುರುದುರು ನೋಡಿ ಈ ಮದ್ರಾಸಿಗಳೇ ಇಂತಹವರು. ಒಂದು ಪೈಸೆಯನ್ನೂ ಬಿಚ್ಚದ ಜುಗ್ಗರು. ಇಲ್ಲಿಗೆ ಬಂದು ನನ್ನ ಟೈಮ್ ವೇಸ್ಟ್ ಆಯಿತು ಎಂದು ಗೊಣಗಿಕೊಂಡು ಹೊರಟು ಹೋದ.

ಇತ್ತೀಚೆಗೆ ನನ್ನ ಮಗ ಇಲ್ಲೇ ಬೆಂಗಳೂರಿನಲ್ಲಿ ಮೋಟಾರ್ ಸೈಕಲ್‌ನಲ್ಲಿ ಹೋಗುತ್ತಿದ್ದಾಗ ಟ್ರಾಫಿಕ್ ಪೊಲೀಸನೊಬ್ಬ ಅವನನ್ನು ತಡೆದು ಆರ್‌ಸಿ ಪುಸ್ತಕ ಕೇಳಿದನಂತೆ. ನನ್ನ ಮಗನ ಬಳಿಯಲ್ಲಿ ಆರ್‌ಸಿ ಬುಕ್ ಇರಲಿಲ್ಲ. ಇನ್ನೂರು ರೂ. ಫೈನ್ ಆಗುತ್ತದೆ, ಆದರೆ ನೂರು ರೂ ಕೊಡಿ ಬಿಟ್ಟುಬಿಡುತ್ತೇನೆ ಎಂದನಂತೆ ಆ ಪೊಲೀಸಪ್ಪ. ನನ್ನ ಮಗ ನಮ್ಮ ಅಪ್ಪ ಯಾರು ಗೊತ್ತಾ ಎಂದು ನನ್ನ ಹೆಸರು ಹೇಳಿದನಂತೆ. ಅದನ್ನು ಕೇಳಿದ ಆತ ಏನ್ಸಾರ್ ಏನೇನೋ ಸುಳ್ಳು ಹೇಳ್ತೀರಿ, ಪರವಾಗಿಲ್ಲ ಐಪಿಎಸ್ ಆಫೀಸರ್ ಕಡೆಯವರು ಎಂದು ಹೇಳಿದ್ದೀರಿ. ಐವತ್ತು ಕೊಟ್ಟು ಹೊರಟುಹೋಗಿ ಎಂದನಂತೆ. ನನ್ನ ಚಿರಂಜೀವಿ ಐವತ್ತು ರೂ. ನೋಟನ್ನು ಆತನ ಕಿಸೆಗೆ ತುರುಕಿ ಮನೆಗೆ ಬಂದ ಎಂದು ನನ್ನ ಶ್ರೀಮತಿ ತಿಳಿಸಿದಳು.

ನನ್ನ ಪತ್ನಿ ಈ ವಿಷಯ ಹೇಳಿದಾಗ ನಾನು ಸಿಟ್ಟು ಮಾಡಿಕೊಂಡು ನನ್ನ ಮಗನನ್ನು ಕರೆದು ಆ ಪೊಲೀಸಪ್ಪನ ಹೆಸರು, ಆತ ಡ್ಯೂಟಿ ಮಾಡುತ್ತಿದ್ದ ಜಾಗ ಕೇಳಿದೆ. ನನ್ನ ಸುಪುತ್ರ ಅದೆಲ್ಲಾ ಯಾಕೆ ಬಿಡಿ ಅಪ್ಪಾ, ನಿಮ್ಮ ಹೆಸರು ಹೇಳಿದ್ದಕ್ಕೆ ಎಪ್ಪತ್ತೈದು ಪರ್ಸೆಂಟ್ ಡಿಸ್ಕೌಂಟ್ ಸಿಕ್ಕಿತಲ್ಲಾ, ಅಷ್ಟೇ ಸಾಕು ಎಂದು ಒಳಕ್ಕೆ ಹೋದ.

ದೆಹಲಿಗೂ ಬೆಂಗಳೂರಿಗೂ ವ್ಯತ್ಯಾಸ ಇಲ್ಲವೇ ಇಲ್ಲದಂತಾಗಿದೆ ಎನಿಸಿತು. ಈಗ ನನ್ನ ವೃತ್ತಿ ಬಾಂಧವರೇ ಸಂಪ್ರದಾಯ ಮುರಿದಿದ್ದಾರೆ. ಮುಂದೆ ನಾನು ರಿಟೈರಾಗಿ ವೃತ್ತಿ ಬಾಂಧವ್ಯ ಕಡಿದ ನಂತರ ಏನೇನಾಗುತ್ತದೋ ಎಂದು ನೆನಸಿಕೊಂಡರೆ ಮೈ ಜುಂ ಎನ್ನುತ್ತದೆ.

"ಗಾಯ್ ಕೋ ಚಾರಾ ದೋ"

- ನಂದಿನಿ ಕಾಪಡಿ

ಮುಂಬೈ ಮಹಾನಗರದ ಯಾವುದೇ ಹಿಂದೂ ಅಥವಾ ಜೈನ್ ಮಂದಿರದ ಹೊರಗಿನ ದೃಶ್ಯವೆಂದರೆ, ಮಹಿಳೆಯೊಬ್ಬಳು ಹಸುವೊಂದನ್ನು ಪಕ್ಕದಲ್ಲೇ ಕಟ್ಟಿಹಾಕಿ, ದೊಡ್ಡ ಹಸಿರು ಹುಲ್ಲಿನ ರಾಶಿಯೊಂದಿಗೆ ಕುಳಿತಿರುತ್ತಾಳೆ. ದೇವಸ್ಥಾನದೊಳಗಿನಿಂದ ಬಂದ ಭಕ್ತರು, ಮಹಿಳೆಯ ಹತ್ತಿರದಿಂದ ಎರಡು ರೂಪಾಯಿಗಳಿಗೆ ಹುಲ್ಲಿನ ಗೊಂಚಲನ್ನು ಖರೀದಿಸುತ್ತಾರೆ. ಆ ನಂತರ ಹಸುವಿಗೆ ಹುಲ್ಲನ್ನು ತಿನ್ನಿಸಿ ಅದರ ಹಣೆ ಮುಟ್ಟಿ ಕಣ್ಣಿಗೊತ್ತಿಕೊಂಡು ಹೋಗುತ್ತಾರೆ.

ಸ್ವಲ್ಪ ಸಮಯದ ನಂತರ ಭಕ್ತರ ಗದ್ದಲ ಕಡಿಮೆಯಾಗುತ್ತದೆ. ಆಗ ನಮ್ಮ ಮಹಿಳೆ ಫುಟ್‌ಪಾತಿನ ಮೇಲೆ ಹಾಗೂ ರಸ್ತೆಯ ಮೇಲೆ ನಡೆದುಕೊಂಡು ಹೋಗುವ ಜನರನ್ನು ಕರೆಯುತ್ತಾಳೆ. "ಭಯ್ಯಾ, ದೀದೀ, ಗಾಯ್‌ಕೋ ಚಾರಾ ದೋ" ಎಂದು ಮೊದಲು ಗತ್ತಿನಿಂದಲೇ ಆಜ್ಞಾಪಿಸುತ್ತಾಳೆ. ನಮ್ಮ ಮುಂಬೈನ ಫುಟ್‌ಪಾತಿನಲ್ಲಿ ನಡೆಯುವ ಪಥಕರು ಇದೆಲ್ಲಕ್ಕೂ ಬಗ್ಗುವರಲ್ಲ. ರಸ್ತೆಯಲ್ಲೋ ಅಥವಾ ಫುಟ್‌ಪಾತಿನ ಮೇಲೋ ಹೆಣ ಬಿದ್ದಿದ್ದರೂ, ನೋಡದಿರುವ ಹಾಗೆ ಪಕ್ಕದಿಂದ ನಡೆದುಕೊಂಡು ಹೋಗುವ ಜನ ನಾವು, ಇನ್ನು ಮಹಿಳೆಯ ಆಜ್ಞೆಗೆ ಬಗ್ಗುವವರೇ ನಾವು?

ಸ್ವಲ್ಪ ಸಮಯವಾಗುತ್ತದೆ. ನಮ್ಮ ಮಹಿಳೆ ಫುಟ್‌ಪಾತಿನ ಮೇಲೆಯೇ ದೊರಕುವ ಎರಡು ರೂಪಾಯಿಗಳ ಚಹಾ ಕುಡಿದು. ಎದುರಿನ ಫುಟ್‌ಪಾತಿನ ಅಂಗಡಿಯಲ್ಲಿ ದೊರಕುವ ಐದು ರೂಪಾಯಿಗಳ ವಡಾ-ಪಾವ್ ಕೂಡಾ ತಿನ್ನುತ್ತಾಳೆ. ಇನ್ನೂ ಯಾರ ಸುಳಿವೂ ಇಲ್ಲ.

ಈಗ ಅವಳ ಧ್ವನಿ ಸ್ವಲ್ಪ ಮೆದುವಾಗುತ್ತದೆ. "ತಾಯೀ, ಗಾಯ್ ಕೋ ಚಾರಾ ದೋ" ಎಂದು ನವಿರಾಗಿ ಕೂಗುತ್ತಾಳೆ. ಇನ್ನೂ ಸ್ವಲ್ಪ ಸಮಯದ ನಂತರ "ದೀದೀ ಗೋ ಮಾತಾ ಪ್ರಕಾಶ್ ರಹೀ ಹೈ" ಎಂದು ದೀನಳಾಗಿ ಹೇಳುತ್ತಾಳೆ.

ಪಾಪ ಆ ಗೋ ಮಾತೆ, ಇಷ್ಟರಲ್ಲಿ ಬೇಕಾದಷ್ಟು ಹುಲ್ಲು ತಿಂದುಕೊಂಡು, ತನ್ನ ಪಾಡಿಗೆ ತಾನು ಮೆಲುಕು ಹಾಕುತ್ತಾ ಕೂತಿರುತ್ತದೆ. "ಯಾರೇ ಹೋರಾಡಲಿ, ಊರೇ ಕೂಗಾಡಲಿ, ನಿನ್ನ ನೆಮ್ಮದಿಗೆ ಭಂಗವಿಲ್ಲ" ಎಂಬ ಡಾ॥ ರಾಜ್‌ಕುಮಾರರ ಎಮ್ಮೆಯ ಹಾಡಿನಂತೆ. ಅದಕ್ಕೆ ಯಾವ ಪರಿವೆಯೂ ಇಲ್ಲ.

ನಾನು ಪ್ರತಿದಿನ ಆಫೀಸಿಗೆ ಹೋಗುವಾಗ ಈ ದೃಶ್ಯ ನೋಡುತ್ತೇನೆ. ಒಂದೇ ಒಂದು ಸಲ ನಾನು ಕೂಡಾ ಹುಲ್ಲು ಕೊಂಡಿ ಹಾಕಿದ್ದುಂಟು. ಈಗ ನನಗೂ ಆಸ್ಥೆಯಿಲ್ಲದೇ ಇರಬಹುದು.

ಆದರೆ ಹೋದವಾರ ನನ್ನ ಮಗಳು ಮೀಡಿಯಾ ಕೋರ್ಸ್ ಮಾಡುತ್ತಿರುವವಳು, ಮನೆಗೆ ಬಂದವಳೇ "ಅಮ್ಮಾ, ನಮ್ಮ ಕಾಲೇಜಿನಲ್ಲಿ 'ಗಾಯ್ ಕೋ ಚಾರಾ ದೋ' ಮಹಿಳೆಯ ಫೋಟೋ ತೆಗೆದು, ಅವಳನ್ನು ಸಂದರ್ಶಿಸಿ ಬನ್ನಿ ಎಂದು ಅಸೈನ್‌ಮೆಂಟ್ ಕೊಟ್ಟಿದ್ದಾರೆ. ದಯವಿಟ್ಟು ನನ್ನ ಜೊತೆ ಬಾ. ಹಸು, ಎಮ್ಮೆ ಕಂಡರೆ ನನಗೆ ಎಷ್ಟು ಭಯ ಎಂದು ನಿನಗೇ ಗೊತ್ತಲ್ಲ" ಎಂದು ದುಂಬಾಲು ಬಿದ್ದಳು.

"ಸರಿ ಬಾ" ಎಂದವಳೇ ಮಾರನೆಯ ದಿನವೇ ಆಫೀಸಿಗೆ ಹೋಗುತ್ತಾ, ಅವಳನ್ನೂ ಕಾರಿನಲ್ಲಿ ಕೂರಿಸಿಕೊಂಡು, ಬ್ರೀಚ್ ಕ್ಯಾಂಡಿಯಲ್ಲಿರುವ ಶ್ರೀ ತ್ರ್ಯಂಬಕೇಶ್ವರ ದೇವಸ್ಥಾನದ ಹೊರಗೆ ಇಳಿದೆ.

ಮಗಳಿಗೇನು, ನನಗೂ ಪ್ರಾಣಿಗಳೆಂದರೆ ಭಯವೇ ಆದರೆ ಆ ಹಸುವನ್ನು ಕಂಡೊಡನೆಯೇ ನನ್ನ ಮಾತ್ರ ಹೃದಯವೂ ಉಕ್ಕಿ ಬಂದಿತು. ಐದು ರೂಪಾಯಿಗಳನ್ನು ಕೊಟ್ಟು ಹುಲ್ಲು ಖರೀದಿಸಿ, ಭಯಪಡುತ್ತಲೇ ಹಸುವಿಗೆ ತಿನ್ನಿಸುತ್ತಾ ಹೋದೆ. ಮಗಳು ತನ್ನ ಎಸ್ ಎಲ್ ಆರ್ ಕ್ಯಾಮರಾ ತೆಗೆದು ಭರಭರನೇ ಕ್ಲಿಕ್ಕಿಸಿದಳು. ಗೋವಿನ ಹಣೆಯನ್ನು ಮುಟ್ಟಿ ಕಣ್ಣಿಗೊತ್ತಿಕೊಂಡ ಚಿತ್ರವನ್ನು ಮಗಳು ಮತ್ತೆ ಮತ್ತೆ ಕ್ಲಿಕ್ಕಿಸಿದಳು. "ಪರ್‌ಫೆಕ್ಟ್" ಎಂದು ತನ್ನ ಸಂತೋಷ ವ್ಯಕ್ತಪಡಿಸಿ, ಕ್ಯಾಮರಾ ಒಳಗಿಟ್ಟು ತನ್ನ ನೋಟ್ ಪ್ಯಾಡು-ಪೆನ್ನು ತೆಗೆದು ಮಗಳು ಮಹಿಳೆಯನ್ನು ಸಂದರ್ಶಿಸಲು ತಯಾರಾದಳು.

ಫೋಟೋವಿಗೆ ಉತ್ಸಾಹದಿಂದ ಒಪ್ಪಿಕೊಂಡ ಮಹಿಳೆ ಸಂದರ್ಶನಕ್ಕೆ ಮುಂಚೆ ನನ್ನ ಮಗಳನ್ನು ಬೇರೆ ಬೇರೆ ಪ್ರಶ್ನೆಗಳನ್ನು ಕೇಳಿದಳು. "ನೀವು ಸಿನಿಮಾದವರೇ, ಟಿ.ವಿ.ಯವರೇ ಅಥವಾ ವರ್ತಮಾನ ಪತ್ರಿಕೆಯವರೇ?" "ಈ ಫೋಟೋವನ್ನು ಯಾವಾಗ ಛಾಪಿಸುತ್ತೀರಿ?" "ಇದರಿಂದ ನನಗೆ ಹೇಗೆ ಲಾಭವಾಗಬಹುದು?"

"ಒಂದು ವೇಳೆ ಅವಕಾಶ ಸಿಕ್ಕರೆ ನನ್ನ ಮಗನಿಗೆ ಟಿ.ವಿ. ಸೀರಿಯಲ್‌ನಲ್ಲಿ ಪಾತ್ರ ಕೊಡುತ್ತೀರಿ ತಾನೆ?" ವಗೈರೆ ವಗೈರೆ.

ಮಗಳು ಅವಳ ಪ್ರಶ್ನೆಗಳಿಗೆ ಉತ್ತರ ಕೊಟ್ಟು ಸುಸ್ತಾಗಿ ಬಿಟ್ಟಳು. ಮುಂದಿನದು ನನ್ನ ಮಗಳ ಪ್ರಶ್ನೆಗಳು ಮತ್ತು ಆ ಮಹಿಳೆಯ ಉತ್ತರಗಳು. ನನಗೆ ಅವುಗಳನ್ನು ಹಾಗೆಯೇ ಬರೆಯಲು ಸೋಮಾರಿತನ. ಆದರೆ ಅವೆಲ್ಲದರ ಟಿಪ್ಪಣಿ ನಿಮ್ಮ ಮುಂದೆ ಇಡುತ್ತಿದ್ದೇನೆ.....

ಆಕೆಯ ಹೆಸರು ಸಕ್ಕೂ ಬಾಯಿ. ಗಂಡ ಕುಡುಕ, ಪ್ರಯೋಜನಕ್ಕೆ ಬಾರದ, ಕೂಳಿಗೆ ಭಾರವಾದ ಮನುಷ್ಯ. ಅವಳಿಗೆ ಐದು ಜನ ಮಕ್ಕಳು. ದೊಡ್ಡ ಮಗಳ ಮದುವೆಯಾಗಿದೆ. ಅವಳು ವರಳಿಯ ಗುಡಿಸಲು ಸಮೂಹದಲ್ಲಿ ವಾಸಮಾಡುತ್ತಾಳೆ. ತುಂಬಾ ಬಡತನದಿಂದ ಈಗ ಗೋಮಾತೆಯ ಕೃಪೆಯಿಂದ ಮುಂದೆ ಬರುತ್ತಿದ್ದಾಳೆ.

ಮುಂಜಾನೆ ಚಹ ಕುಡಿದು, ಸ್ನಾನ ಮಾಡಿ ಬಸ್ಸಿನಲ್ಲಿ ಗಿರಿಗಾಂವ್ ಕ್ಷೇತ್ರಕ್ಕೆ ಬರುತ್ತಾಳೆ. ಅಲ್ಲಿರುವ ಪಿಂಜರಾಪೋಲಿಗೆ ಹೋಗಿ, ಹಸುವೊಂದನ್ನು ಆಯ್ಕೆ ಮಾಡಿ, ಪಿಂಜರಾಪೋಲಿಗೆ ಮುಂಗಡ ಹಣ ಎಂದು ಹತ್ತುರೂಪಾಯಿ ಕೊಟ್ಟು ಹಸುವನ್ನು ಹೊಡೆದುಕೊಂಡು ಬರುತ್ತಾಳೆ. ರಸ್ತೆಯಲ್ಲಿ ಹುಲ್ಲಿನ ವ್ಯಾಪಾರಿಸಿಗುತ್ತಾನೆ. ಅವನ ಹತ್ತಿರ ಮೂವತ್ತು ರೂಪಾಯಿಗಳಿಗೆ ಹುಲ್ಲಿನ ಬಂಡಲನ್ನು ಖರೀದಿಸುತ್ತಾಳೆ. ನಂತರ ಆ ಬಂಡಲನ್ನು ಹಸುವಿನ ಮೇಲೆ ಹೇರಿಸಿ, ಶ್ರೀತ್ರ್ಯಂಬಕೇಶ್ವರ ದೇವಾಲಯದವರೆಗೆ ನಡೆಸಿಕೊಂಡು ಬರುತ್ತಾಳೆ. ಅಲ್ಲಿ ಹಸುವನ್ನು ಕಟ್ಟಿಹಾಕಿ, ದೇವರಿಗೆ ಕೈಮುಗಿದು ತನ್ನ ಧಂಧೆ ಪ್ರಾರಂಭಿಸುತ್ತಾಳೆ. ಹುಲ್ಲಿನ ಬಂಡಲನ್ನು ಬಿಚ್ಚಿ ಬರುವ ಭಕ್ತರಿಗೆ ಮಾರುತ್ತಾಳೆ. ಬೆಳಿಗ್ಗೆ ಎಂಟರಿಂದ ಹತ್ತು ಗಂಟೆಯವರೆಗೆ ಸುಮಾರು ನೂರು ರೂಪಾಯಿಗಳ ವ್ಯಾಪಾರವಾಗಿರುತ್ತದೆ. ಈ ಧಂಧೆಯ ಎಲ್ಲ ಪಾತ್ರಧಾರಿಗಳಿಗೂ ಲಾಭವೋ ಲಾಭ! ಗೋಮಾತೆ ಹೊಟ್ಟೆತುಂಬಾ ಹುಲ್ಲು ಮೇಯುತ್ತದೆ.

ಹುಲ್ಲಿನ ವ್ಯಾಪಾರಿಗೆ ಇಪ್ಪತ್ತು ರೂಗಳ ಲಾಭ. ಪಿಂಜಾರಾತೋಟಿಗೆ ಹತ್ತುರೂಗಳ ಆದಾಯ ಹಾಗೂ ಹಸುವಿನ ಮೇವಿನ ಬಚಾವು. ಎರಡು ರೂಗಳ ಖರ್ಚು ಮಾಡಿರುವ ಭಕ್ತಾದಿಗಳಿಗೆ ಗೋಮಾತೆಗೆ ಉಣಿಸಿದ ಪುಣ್ಯ! ಎಂತಹ ಧಂಧೆ ನೋಡಿ!! ಹತ್ತು ಗಂಟೆಯ ನಂತರ ಬರುವ ಮಹಿಳೆಯರು ಶ್ರೀಮಂತ ಕುಟುಂಬದವರು. ಕಾರಿನಲ್ಲೇ ಬರುತ್ತಾರೆ. ಅವರು ಬೇರೆಯವರಂತೆ ಎರಡು ರೂಪಾಯಿಗಳಿಗೆ ಹುಲ್ಲು ಖರೀದಿಸದೆ, ಪೂರ್ತಿ ಹತ್ತು ರೂಪಾಯಿಗಳನ್ನು ಖರ್ಚು ಮಾಡಿರುತ್ತಾರೆ. ಏಕೆಂದರೆ, ಸಕ್ಕೂಬಾಯಿ ಅವರನ್ನು ನೋಡಿ ಜಾಸ್ತಿಬೆಲೆ ಹೇಳುತ್ತಾಳೆ. ಇಷ್ಟರ ಹೊತ್ತಿಗೆ ಹಸುವಿನ ಹೊಟ್ಟೆತುಂಬಿ, ಗೋಮಾತೆ ತೃಪ್ತಿಯಿಂದ ಮೆಲುಕುಹಾಕುತ್ತಾಳೆ. ನಮ್ಮ ನಾಯಕಿಯೂ ಚಹಾ ಕುಡಿದು, ವಡಾ-ಪಾವ್ ತಿಂದು ತೃಪ್ತಳಾಗಿರುತ್ತಾಳೆ. ಅಷ್ಟರಲ್ಲಿ ''ದಾದಾ'' ಬರುತ್ತಾನೆ. ಅವನ ಹತ್ತುರೂಗಳ ಚಂದಾ ಅವನಿಗೆ ಸೇರುತ್ತದೆ.

ಹನ್ನೆರಡು ಗಂಟೆಯ ಹೊತ್ತಿಗೆ ಧಂಧೆ ಮುಕ್ತಾಯವಾಗುತ್ತದೆ. ನಮ್ಮ ನಾಯಕಿ ಮತ್ತೆ ತ್ರ್ಯಂಬಕೇಶ್ವರ ದೇವಸ್ಥಾನಕ್ಕೆ ಹೋಗಿ ಅಲ್ಲಿ ದೇವರಿಗೆ ಒಂದು ರೂಪಾಯಿ ಕಾಣಿಕೆ ಹಾಕುತ್ತಾಳೆ. ಉಳಿದ ಎಲ್ಲಾ ಹುಲ್ಲನ್ನೂ ಗೋವಿಗೆ ತಿನ್ನಿಸಿ, ಅದನ್ನು ನಿಧಾನವಾಗಿ ನಡೆಸಿಕೊಂಡು ವಾಪಸ್ಸು ಪಿಂಜರಾ ಪೋಲಿಗೆ ಹೋಗಿ ಹಸುವನ್ನು ವಾಪಸ್ಸು ಬಿಡುತ್ತಾಳೆ. ಪಿಂಜರಾ ಪೋಲಿನ ಅಧಿಕಾರಿಗೆ ಚಹಾ ಕುಡಿಯಲೆಂದು ಐದು ರೂಪಾಯಿ ಕೊಡುತ್ತಾಳೆ.

ದಿನದ ಸಂಪಾದನೆ ಸುಮಾರು ಇನ್ನೂರು ರೂಪಾಯಿ. ಎಲ್ಲ ಖರ್ಚು ಸೇರಿ ಸುಮಾರು ಎಪ್ಪತ್ತುಮೂರುರೂಗಳು. (ಹಸು=ಹತ್ತು ರೂಪಾಯಿ, ಹುಲ್ಲು=ಮೂವತ್ತು ರೂಪಾಯಿ, ಪಿಂಜರಾ ಪೋಲಿನ ಅಧಿಕಾರಿಯ ಖರ್ಚು=ಐದು ರೂಪಾಯಿ, ''ದಾದಾ''ನ ಚಂದಾ=ಹತ್ತು ರೂಪಾಯಿ, ಬಸ್ಸಿನ ಖರ್ಚು=ಹತ್ತು ರೂಪಾಯಿ, ವಡಾ-ಪಾವ್=ಐದು ರೂಪಾಯಿ, ಚಹಾ=ಎರಡು ರೂಪಾಯಿ, ದೇವರ ಕಾಣಿಕೆ=ಒಂದು ರೂಪಾಯಿ: ಒಟ್ಟು ಎಪ್ಪತ್ತಮೂರುರೂಗಳು) ದಿನದ ಲಾಭ=ರೂ: ನೂರಾ ಇಪ್ಪತ್ತೇಳು. ಎಷ್ಟೇ ಕಡಿಮೆ ಎಂದುಕೊಂಡರೂ ಲಾಭ ನೂರಕ್ಕಿಂತ ಕಡಿಮೆಯಿಲ್ಲ, ಪ್ರತಿ ಏಳು ದಿನಗಳ ಲಾಭ ಏಳು ನೂರು, ತಿಂಗಳಿಗೆ ಎರಡು ಸಾವಿರದ ಎಂಟು ನೂರು. ಸಕ್ಕೂಬಾಯಿಯ ಆದಾಯ-ವಿದಾಯದ ಪಟ್ಟಿ ಎಷ್ಟುಸರಳ!

ಆಹಾ ಗೋವಿನ ಮಹಿಮೆಯೇ ಭೇಷ್! ಸಕ್ಕೂ ಬಾಯಿಯ ಸಂಸಾರ ನಿರ್ವಹಣೆಗೆ ಈ ಸಂಪಾದನೆಯ ಮೇಲೆ!!

ಸಂದರ್ಶನ ಕೊಟ್ಟದ್ದಕ್ಕೆ ಸಂಭಾವನೆ ಕೊಡಿ ಎಂದು ನಿಸ್ಸಂಕೋಚವಾಗಿ ಕೇಳಿದಳು ನಮ್ಮ ನಾಯಕಿ. ಮಗಳು ನನ್ನ ಮುಖ ನೋಡಿದಳು. ಫುಟ್ ಪಾತಿನ ಧಂಧೆಯ ಅರ್ಥಶಾಸ್ತ್ರದ ಹಾಗೂ ವ್ಯವಹಾರದ ಜ್ಞಾನ ನನಗೂ ಪ್ರಾಪ್ತವಾದ ಬಗ್ಗೆ ಗುರು ದಕ್ಷಿಣೆ ಎಂದುಕೊಂಡು ಐವತ್ತುರೂಪಾಯಿಗಳನ್ನು ತೆತ್ತೆ. ಸಂದರ್ಶನ ಮುಗಿಯಿತು. ಸಕ್ಕೂ ಬಾಯಿ ಸಂತೃಪ್ತಳಾದಂತೆ ತೋರಿದಳು. ಗೋಮಾತೆಯೂ ತಲೆ ತೂಗಿತು!

ಮೊನ್ನೆ ತೀರ್ಥರೂಪ ಮಾವನವರ ಶ್ರಾದ್ಧ ಮಾಡಿದೆವು. ಗೋವಿನ ಭೋಜನವೆಂದು ಎಲೆ ಬಡಿಸಲಾಯಿತು. ಆಕಳಿಗೆ ಕೊಡಬೇಕು ಎಂದು ಪುರೋಹಿತರು ಹೇಳಿದರು. ಯಜಮಾನರು

ಮತ್ತು ನಾನು ನಾಲ್ಕಾರು ಆಕಳ ಹತ್ತಿರಹೋದೆವು. ಆದರೆ ಅವುಗಳ ಮಹಿಳೆಯರು ಗೋವಿಗೆ ಶ್ರಾದ್ಧದೂಟ ಮಾಡಿಸಲು ಒಪ್ಪಿಕೊಳ್ಳಲಿಲ್ಲ. ಕಡೆಗೆ ನಾನೇ ನೆನಪಿಸಿಕೊಂಡು, ಸಕ್ಕೂಬಾಯಿಯ ಹತ್ತಿರ ಬಂದೆವು.

"ಅಕ್ಕ, ನಿಮಗೋಸ್ಕರವೆಂದು ನನ್ನ ನಿಯಮ ಮುರಿದಿದ್ದೇನೆ. ಆಕಳಿಗೆ ಭೋಜನ ಮಾಡಿಸಿ" ಎಂದಳು. ಯಜಮಾನರು ಆಕಳ ಮುಂದೆ ಎಲೆ ಇಟ್ಟು, ಪರ್ಸಿನಿಂದ ನೂರರ ನೋಟನ್ನು ತೆಗೆದು ಸಕ್ಕೂ ಬಾಯಿಗೆ ಗೌರವದಿಂದ ಕೊಟ್ಟರು. ಸಕ್ಕೂ ಬಾಯಿ ನಗುತ್ತಾ "ನಿಮಗೆ ಒಳ್ಳೆಯದಾಗಲಿ" ಎಂದು ಆಶೀರ್ವದಿಸಿದಳು. ನೂರರ ನೋಟು ಅವಳ ಸೊಂಟದಲ್ಲಿರುವ ಚೀಲ ಸೇರಿತು.

ಈ ನೂರುರೂಗಳು ಬೋನಸ್ ಇರಬಹುದೆ. ಎಂದು ತಲೆ ತರ್ಕ ಮಾಡಿತು. ಅಷ್ಟರಲ್ಲಿ ಯಜಮಾನರ ಆಜ್ಞೆಯಾಯಿತು. ನಿಧಾನವಾಗಿ ಕಾರಿನತ್ತ ನಡೆದೆ. ನೆಮ್ಮದಿಗೆ ಭಂಗವಿಲ್ಲದೆ ಗೋ ಮಾತೆ ತನ್ನ ಪಾಡಿಗೆ ತಾನೇ ರವೆ ಉಂಡೆ ತಿನ್ನುತ್ತಿತ್ತು!

ತೀ. ಮಾವನವರ ಆತ್ಮಕ್ಕೆ ಶಾಂತಿಯಾಗಿರಬಹುದೆಂದು ನಾನು ಕಾರುಹತ್ತಿದೆ.

(ಹಿಂದಿನ ಸಂಚಿಕೆಯಿಂದ)

ಮಿಡ್ಲ್ ಕ್ಲಾಸ್ ಮಂದಿ (2)

- ಕುಮುದಾ ಪುರುಷೋತ್ತಮ್

ಮಗನ ದುಂದು ಜೀವನ ಶೈಲಿಗೆ ಕಡಿವಾಣ ಹಾಕಲು ಮದುವೆಯೊಂದೇ ಏಕೈಕ ದಾರಿ ಎಂದು ನಿಶ್ಚಯಿಸಿದ ಪದ್ಮಾವತಿ, ಶ್ರೀನಿವಾಸಯ್ಯ ದಂಪತಿಗಳು ಕನ್ಯಾನ್ವೇಷಣೆಯಲ್ಲಿ ತೊಡಗಿಸಿಕೊಂಡರು. ಜಾತಕದ ಹಲವಾರು ಜೆರಾಕ್ಸ್ ಪ್ರತಿಗಳು ಬಂಧು ಬಾಂಧವರಿಗೆ ರವಾನೆಯಾದವು. ವಧು ವರಾನ್ವೇಷಣ ಕೇಂದ್ರಗಳಲ್ಲಿ ಶ್ರೀಕಂಠನ ಹೆಸರು ನೊಂದಾಯಿಸಿದರು. ಪತ್ರಿಕೆಗಳಲ್ಲಿ 'ವಧು ಬೇಕಾಗಿದ್ದಾಳೆ' ಸೂಚನೆ ಕಾಣಿಸಿಕೊಂಡಿತು. ಕನ್ಯೆಯರ ವಿವರ, ಜಾತಕ, ಭಾವಚಿತ್ರ, ಇತ್ಯಾದಿಗಳನ್ನು ಪರಿಶೀಲಿಸಿ ಪರಿಶೋಧಿಸಿ ನಿರ್ಧಾರ ಕೈಗೊಳ್ಳಲು ಶ್ರೀನಿವಾಸಯ್ಯ ಮನೆಯಲ್ಲಿ ಒಂದು ಕಛೇರಿಯನ್ನೇ ತೆರೆದರು!

ಭಾನುವಾರ ಬಂತೆಂದರೆ ಹೆಣ್ಣು ನೋಡುವ ಕಾರ್ಯಕ್ರಮ. "ಏನು? ಹೆಣ್ಣು ನೋಡೋದಾ? ಹೋಗಿ ನೋಡೋಕ್ಕೆ ಹೆಣ್ಣು ಅಂಗಡಿಯಲ್ಲಿ ಪ್ರದರ್ಶನಕ್ಕಿಟ್ಟ ವಸ್ತೂನಾ?" ಶ್ರೀಕಂಠ ರಾಂಗ್ ಮಾಡಿದ.

"ಬೇಡ. ನೋಡ್ದೆ ಹಾಗೇ ಮದ್ವೆಯಾಗೋದಾದ್ರೆ ನಮ್ಮದೇನೂ ಅಭ್ಯಂತರವಿಲ್ಲ"

"ಹಾಗಲ್ಲಮ್ಮ ನೋಡ್ದೆ ಮಾಡ್ದೆ ಹೇಗೆ ಒಪ್ಪೋದು? ಅವ್ರ ಮನೇಗೆ ಹೋಗಿ ಅವ್ರಿಗೆ ವೃಥಾ ತೊಂದರೆ ಕೊಟ್ಟೂ...." ರಾಗವೆಳೆದ.

"ಬೇಡಬಿಡು. ಅವ್ರನ್ನೇ ನಮ್ಮ ಮನೆಗೆ ಆಹ್ವಾನಿಸೋಣ."

"ಹುಡುಗೀನ ಹೀಗೆ ಮನೆ ಮನೆ ಅಲೆಸೋದು ಸರಿ ಅನ್ಸಲ್ಲ."

"ನಾವೂ ಹೋಗ್ಬಾರ್ದು, ಅವ್ರೂ ಬರ್ಬಾರ್ದು ಅಂದ್ರೆ ಎಲ್ಲಿ ಹುಡ್ಗೀನ ನೋಡ್ತಿ? ರಸ್ತೆ? ಪಾರ್ಕು? ಫುಟ್‌ಪಾತು? ಹೋಟ್ಲು?"

"ಇಲ್ನೋಡೋ ಶ್ರೀಕಂಠೂ, ಮೊದ್ಲು ಹೋಗಿ ಹುಡ್ಗೀನ ನೋಡೋಣ. ನಿನಗಿಷ್ಟವಾದರೆ ಆಮೇಲೆ ಪಾರ್ಕು, ಹೋಟಲು, ಸಿನಿಮಾ ಎಲ್ಲ ನಂತರದ ಆಗುಹೋಗುಗಳು. ಈಗ ವೃಥಾ ಹಟ ಮಾಡದೆ ಹೊರಡು. ಅವ್ರು ನಮ್ಮನ್ನು ಎದಿರ್ಗೊಳ್ಳಲು ಕಾಯುತ್ತಿದ್ದಾರೆ" ಶ್ರೀನಿವಾಸಯ್ಯ ಮಗನ ದ್ವಂದ್ವ ನೀಗಿಸಿ ಹೊರಡಿಸಿದರು.

ಕನ್ಯೆಯ ಮನೆಯಲ್ಲಿ ಇವರಿಗೆ ಹಾರ್ದಿಕ ಸ್ವಾಗತ, ಉಭಯ ಕುಶಲೋಪರಿ, ತಂಪು ಪಾನೀಯ. ಒಟ್ಟಿನಲ್ಲಿ ರಾಜೋಪಚಾರ ಆದರೆ ಕನ್ಯೆ ಎಲ್ಲಿ? ಕನ್ಯೆಯ ತಾಯಿ ವಿವರಣೆಕೊಟ್ಟರು. "ನನ್ನ ಮಗ್ಳಿಗೆ ಸಾಫ್ಟ್‌ವೇರ್ ಕಂಪನೀಲಿ ಕೆಲ್ಸಬೆಳಗ್ನಿಂದ ರಾತ್ರೀವರ್ಗೂ ಪುರಸೊತ್ತೇ ಇರೊಲ್ಲ. ಭಾನುವಾರಾಂತ ಮನೇಲೇ ಇದ್ಲು. ಅರ್ಜೆಂಟ್ ಅಂತ ಆಫೀಸಿನಿಂದ ಫೋನು ಬಂತು. ಇನ್ನೇನು ಬಂದು ಬಿಡ್ತಾಳೆ."

ಎರಡು ಗಂಟೆಗಳು ಕಾದ ಬಳಿಕ ಕಾರಿನ ಇಂಜಿನ್‌ಶಬ್ದ, ಬಾಗಿಲು ಹಾಕಿದ ಸಪ್ಪಳ, ಹೈ ಹೀಲ್ಸ್‌ನ ಟಪಟಪ ಸದ್ದು, ನಂತರ ಕನ್ಯೆಯ ರಂಗ ಪ್ರವೇಶವಾಯಿತು. ಪದ್ಮಾವತಿ ತಮ್ಮ ಭಾವಿ ಸೊಸೆಯತ್ತ ಆಸೆಯಿಂದ ನೋಡಿದರು. ನೋಡಿ ನೋಡುತ್ತಲೇ ಇದ್ದರು! ಮೈ ಕೊರೆಯುವಷ್ಟು ಬಿಗಿಯಾಗಿದ್ದ ಜೀನ್ಸ್ ಪ್ಯಾಂಟು, ಹೊಕ್ಕಳ ಮೇಲಿದ್ದ ಟೀಷರ್ಟು. ಪಾಪ, ಈ ಹುಡುಗೀಗೆ ಸರಿಯಾದ ಸೈಜಿನ ಉಡುಪು ಸಿಗಲಿಲ್ಲವೇ ಅಥವಾ ನೀರಿಗೆ ಹಾಕಿದೊಡನೆ ಸಿಕ್ಕಾಪಟ್ಟೆ ಷಿಂಕ್ ಆಗಿಹೋಯಿತೇ? ಹೋಗಲಿ, ಬಟ್ಟೆ ಬರೆಯ ಬಗ್ಗೆ ಏಕೆ ತಲೆ ಕೆಡಿಸಿಕೊಳ್ಳಬೇಕು? ಹುಡುಗಿ ಮುಖ್ಯ. ಮುಖಾರವಿಂದವನ್ನಾದರೂ ನೋಡೋಣವೆಂದುಕೊಂಡು ಕನ್ನಡಕ ವೇರಿಸಿದರು. ಉಹೂಂ, ಮುಖ ಕಾಣಿಸಲೇ ಇಲ್ಲ. ಕಾಣುವುದಾದರೂ ಹೇಗೆ? ಮುಖಪೂರ್ತಿ ಇಳಿಬಿಟ್ಟ ಬಣ್ಣ ಲೇಪಿತ ಜೊಂಡು ಕೂದಲು ಮುಖ ಮುಚ್ಚಿರುವಾಗ? ಚಂದ್ರಬಿಂಬಕ್ಕೆ ಕಾರ್ಮೋಡ ಅಡ್ಡ ಬಂದಿತೇ ಅಥವಾ ಕೆಳಗೆ ತೂಗುವ ಬಿಳಿಲುಗಳು ಆಲದ ಮರವನ್ನೇ ಸಂಪೂರ್ಣ ಮರೆಮಾಚಿತೇ? ಪದ್ಮಾವತಿಯನ್ನು ಏನೇನೋ ಉಪಮೆಗಳು ಕಾಡಿದುವು. ಒಂದಂತೂ ನಿಜ, ಆ ಕನ್ಯೆ ಭಾವಿ ಸೊಸೆಯಾಗಿರದೇ ಹೊಟ್ಟೆಯಲ್ಲಿ ಹುಟ್ಟಿದ್ದ ಮಗಳಾಗಿದ್ದರೆ ಹಿಡಿದುಜೊಂಡು ಕೂದಲಿಗೆ ಎಣ್ಣೆಹಚ್ಚಿ ಬಾಚಿ ಹೆರಳು ಹಣೆದು ಮಲ್ಲಿಗೆ ದಂಡೆ ಮುಡಿಸಿ ಬಿಡುತ್ತಿದ್ದರೇನೋ.

ಆಕೆ ಅದೇನೂ ಮಾಡದೆ ಕನ್ಯೆಯ ಬಳಿ ಬಂದು ಕುಳಿತು ಕಕ್ಕುಲತೆಯಿಂದ ಹೇಳಿದರು. "ಈಗ್ತಾನೇ ಆಫೀಸಿನಿಂದ ದಣಿದು ಬಂದಿದ್ದೀ. ಹೋಗಿ ಬಟ್ಟೆ ಬದಲಾಯಿಸಿ ಮುಖತೊಳೆದು ತಲೆ ಬಾಚಿ ಬಾಮ್ಮ. ನಮಗೇನೂ ಅವಸರವಿಲ್ಲ, ಕಾಯ್ತೀವಿ." ಪಾಪ, ಆಕೆಗೆ ಹೀಗಾದರೂ ಸೊಸೆಯ ಮುಖನೋಡುವ ಆಸೆ. ಆಸೆ ಕೈಗೂಡಲಿಲ್ಲ. "ಪರ್ವಾಗಿಲ್ಲ ಆಂಟಿ, ಆಫೀಸಿಗೆ ಹೋಗೋಕ್ಕೆ ಮುಂಚೆ ನಾನೆಲ್ಲ ಮುಗ್ಸಿ ಹೊರಟೆ."

ಓದಿದ ಹುಡುಗಿ ಉದ್ಯೋಗಸ್ತೆ, ಕೈ ತುಂಬಾ ಪಗಾರ ಬೇರೆ, ಏನು ಮಾತನಾಡಿಸುವುದು? ಒಂದು ಹೋಗಿ ಒಂದಾಗಿ ಅಪಾರ್ಥ ಮಾಡಿಕೊಂಡರೆ? ಅಳೆದೂ ಸುರಿದೂ ಕೇಳಿದರು.

"ಮನೆಕೆಲ್ಸ, ಅಡುಗೆ ಕೆಲ್ಸ ಕಲ್ತಿದ್ದೀಯಾ?" ಹುಡುಗಿ ದೊಡ್ಡ ಜೋಕೆಂಬಂತೆ ನಕ್ಕಳು. "ಅಡುಗೆ, ಮನೆಕೆಲ್ಸಾನಾ? ಬರೊಲ್ಲ, ಕಲಿಯೋ ಆಸಕ್ತಿನೂ ಇಲ್ಲ, ಇಷ್ಟಕ್ಕೂ ಇದೆಲ್ಲಾ ಹೆಣ್ಣೇ ಮಾಡ್ಬೇಕಂತ ಕಾನೂನಿದ್ಯಾ?" ಕೇಳಿದ ರಭಸಕ್ಕೆ ಬೆದರಿದ ಪದ್ಮಾವತಿ ಕಾನೂನು ಇಲ್ಲವೆಂದು ಒಪ್ಪಿಕೊಂಡು ಬಿಟ್ಟರು!

ಕನ್ಯೆಯೂ ಶ್ರೀಕಂಠನೂ ಬಹಳದಿನದ ಪರಿಚಿತರಂತೆ ಹರಟತೊಡಗಿದರು. "ನೀನೂ ಅಪ್ಪಾ ಆಟೋ ಹಿಡಿದು ಮನೆಗೆ ಹೋಗಿ. ನಾವಿಬ್ರೂ ಹೊರಗೆಲ್ಲಾದ್ರೂ ಸುತ್ತಾಡಿ ಬರ್ತೀವಿ" ಶ್ರೀಕಂಠ ತಂದೆಗೆ ಹೇಳಿ ಕನ್ಯೆಯೊಡನೆ ಕಾರನ್ನೇರಿದ.

ರಾತ್ರಿ ಹತ್ತಾದರೂ ಶ್ರೀಕಂಠೂ ಸುಳಿವಿರಲಿಲ್ಲ. ಪದ್ಮಾವತಿಗೆ ಇನ್ನಿಲ್ಲದ ಆತಂಕ. ಬೇರೆ ಮನೆ ಹೆಣ್ಣು ಮಗಳು. ಅವಳ ತಂದೆ ತಾಯಿ ಏನೆಂದು ಕೊಂಡಾರು? ಶ್ರೀಕಂಠೂದು ಇನ್ನೂ ಹುಡುಗು ಬುದ್ಧಿ, ತಿಳುವಳಿಕೆ ಸಾಲದು.

ಗಂಡ ಹೆಂಡತಿ ಇದೇ ವಿಷಯ ಮಾತನಾಡೀ ಆಡೀ ಆಡಲು ಇನ್ನೇನೂ ಸಿಗದೆ ಪಡಸಾಲೆಯಲ್ಲಿ ಜೋಡಿ ಕರಡಿಗಳಂತೆ ಠಕಾಯಿಸತೊಡಗಿದರು. ಕೊನೆಗೂ ಮಗ ಒಳಗಡಿ ಇಟ್ಟ.

"ನೀವಿಬ್ರೂ ಏನು ಕೇಳ್ತೀರೀಂತ ಗೊತ್ತು. ಅವ್ಳು ಅವ್ಳ ಅಪ್ಪ ಅಮ್ಮಂಗೆ ಬರೋದು ತಡವಾಗತ್ತೆ ಅಂತ ಫೋನ್ ಮಾಡಿದ್ದಳು. ಆದ್ದರಿಂದ ಆತಂಕಕ್ಕೆ ಕಾರಣವಿಲ್ಲ. ಇಷ್ಟು ಹೊತ್ತು ಕೆಫೆ ಕಾಫೀಡೇನಲ್ಲಿ ಮಾತಾಡ್ತಾಕೂತಿದ್ವಿ ಸಮಯ ಸರಿದದ್ದೇ ಗೊತ್ತಾಗ್ಲಿಲ್ಲ."

"ಮದ್ವೆಗೆ ಮುಂಚೇನೇ ಇಷ್ಟೊಂದು ಮಾತನಾಡೋಕ್ಕೆ ಏನಿರುತ್ತೆ?" ಪಾಪ, ಶ್ರೀನಿವಾಸಯ್ಯನಿಗೆ ಅರಸಿಕತೆ ತೋರಿಸಿಕೊಳ್ಳುತ್ತಿರುವ ಅರಿವಿದ್ದಂತಿರಲಿಲ್ಲ. "ಯಾಕಪ್ಪ? ಮದ್ವೇಗೆ ಮುಂಚೆ ನೀನು ಅಮ್ಮನ ಜೊತೆ ಮಾತಾಡ್ಲಿಲ್ವಾ?" ಪದ್ಮಾವತಿಗೆ ಎಷ್ಟೋ ವರ್ಷಗಳ ಹಿಂದಿನ ಅಸಮಾಧಾನ ಹೊರನುಗ್ಗಿ ವಿಜೃಂಭಿಸಿತು. "ಮಾತನಾಡ್ದೇ ಏನು? ಅವರ ಮನೆ ಬಿಸಿಲು ಮಾಡೀಗೆ ಕರೆದುಕೊಂಡು ಹೋಗಿ ಬೇಕಾದಷ್ಟು ಮಾತನಾಡಿದ್ರು. ನೀನು ನಮ್ಮ ಮನೇಗೆ ಹೊಂದ್ಕೋಬೇಕು. ನನ್ನ ತಂದೆ ತಾಯೀನ ಗೌರವಿಸಬೇಕು. ನನ್ನ ತಮ್ಮ ತಂಗಿಯರಿಗೆ ಹಿರಿಯಕ್ಕನಾಗ್ಬೇಕು. ನನಗೆ ಬಹಳ ಜವಾಬ್ದಾರಿಗಳಿವೆ. ನೀನದಕ್ಕೆ ಸಹಕರಿಸಬೇಕು ಹಾಗೆ ಹೀಗೇ ಅಂತ ಒಂದು ಗಂಟೆ ಪ್ರವಚನ ಕೊಟ್ಟು."

"ಪೂರ್ ಅಮ್ಮ. ಇದು ತುಂಬಾ ಅನ್ಯಾಯ" ಮಗ ತೀರ್ಪು ಕೊಟ್ಟ.

"ನೀನವಳ ಮಾತು ಕೇಳ್ತಾ ಕೂಡ್ಬೇಡ. ಈ ಹುಡ್ಗಿ ಬಗ್ಗೆ ನಿನ್ನ ತೀರ್ಮಾನವೇನು?" ತಂದೆ ಉಪಾಯವಾಗಿ ವಿಷಯಾಂತರ ಮಾಡಿದರು.

"ನಾನಿನ್ನೂ ತೀರ್ಮಾನ ಮಾಡಿಲ್ಲ. ಅವಳು ಮುಖ್ಯವಾಗಿ ಮೂರು ಕಂಡೀಷನ್ ಹಾಕಿದ್ದಾಳೆ."

ಪದ್ಮಾವತಿಗೆ ವಿಸ್ಮಯ. ಹುಡುಗೀರು ಕಂಡೀಷನ್ ಹಾಕ್ತಾರಾ? ಮದುವೆ ಅಂಬೋದು ಎರಡು ವ್ಯಕ್ತಿಗಳ ಭಾವನಾತ್ಮಕ ಬೆಸುಗೆಯೋ ಅಥವಾ ವ್ಯಾವಹಾರಿಕ ಒಪ್ಪಂದವೋ? "ಮೊದಲ್ನೇದಾಗಿ ನಮ್ಮ ಸಂಸಾರದ ಖರ್ಚು ನನ್ನೊಬ್ಬನ ಗಳಿಕೆಯಲ್ಲೇ ನಡೆಯಬೇಕಂತೆ. ಅವಳ ಸಂಬಳವೇನಿದ್ರೂ ಅವಳ ವೈಯಕ್ತಿಕ ಖರ್ಚಿಗಂತೆ."

"ವೈಯಕ್ತಿಕ ಖರ್ಚು ಅಂತಾನೂ ಇರತ್ತಾ ಸಂಸಾರದಲ್ಲಿ?"

"ಇರುತ್ತಂತಮ್ಮ ಅವಳ ಬಟ್ಟೆಬರೆ, ಒಡವೆ ವಸ್ತು, ಬ್ಯೂಟಿ ಸಲೂನು, ಪಾರ್ಟಿಗೀರ್ಟಿ ಇತ್ಯಾದಿಗಳು ಅಂತಂದ್ಲು."

"ಎರಡನೇ ಕಂಡೀಷನ್ನು ಅವ್ಳು ಅಡುಗೆ ಪಡುಗೆ ಮಾಡೋಲ್ವಂತೆ."

"ಹಾಗಾದ್ರೆ ಉಪ್ವಾಸ ಇರ್ತಾಳಂತಾ?" ಇದು ತಂದೆಗೆ ಬಂದ ಸಂದೇಹ.

"ಅಡುಗೇನವ್ರನ್ನ ಇಟ್ಕೋ ಇಲ್ದಿದ್ರೆ ದಿನಾ ಹೊರಗೇ ಊಟ ಮಾಡೋಣ ಅಂದ್ಲು."


ಪದ್ಮಾವತಿಗೇಕೋ ತಾನು ಓಬೀರಾಯನ ಕಾಲದವಳು ಎನಿಸಿತು. ಮತ್ತೆ ಮೂರನೇ ಹಾಗೂ ಕೊನೆಯ ಕಂಡೀಷನ್ನು?

"ಅವ್ಳು ನಿಮ್ಮಿಬ್ಬರ ಜೊತೆ ಇರೊಲ್ವಂತೆ. ದೂರ ಎಲ್ಲಾದ್ರೂ ಬೇರೆ ಮನೆ ಮಾಡ್ಬೇಕಂತೆ. ಹತ್ರ ಇದ್ರೆ ನೀವು ಪದೇ ಪದೇ ನಮ್ಮಲ್ಲಿಗೆ ಬರೋದು, ನಮ್ಮನ್ನು ಇಲ್ಲಿಗೆ ಬನ್ನೀಂತ ಕರೆಯೋದು ಅವಳಿಗೆ ಸರಿಹೋಗೋಲ್ವಂತೆ. ನಮ್ಮ ಜೀವನದಲ್ಲಿ ಮೂರನೆಯವ್ರ ಮೂಗು ತೂರ್ಸೋದು ನನಗೆ ಸರಿ ಬರೋಲ್ಲ ಅಂತಂದ್ಲು."

"ಇದಕ್ಕೆ ನೀನು ಒಪ್ಪಿಬಿಟ್ಯಾ?" ಹೃದಯವನ್ನೇ ಬಾಯಲ್ಲಿಟ್ಟುಕೊಂಡು ಪದ್ಮಾವತಿ ಕೇಳಿದರು.

"ನಾನೇನೂ ಹೇಳಲಿಲ್ಲ. ನನ್ನದು ಒಂದೇ ಕಂಡೀಷನ್ ಇತ್ತು. ಹೇಳ್ಬಿಟ್ಟೆ ನನ್ನಂತೆ ನೀನೂ ನಿನ್ನ ತಂದೆ ತಾಯಿಯ ಸಂಪರ್ಕ ಕಡಿದುಕೊಂಡು ಬಿಡು. ನನಗೂ ನನ್ನ ಜೀವನದಲ್ಲಿ ಮೂರನೇವ್ರ ಮೂಗು ತೂರ್ಸೋದು ಹಿಡಿಸೊಲ್ಲ ಎಂದೆ. ಅದಕ್ಕವಳು ನನ್ನಪ್ಪ ಅಮ್ಮ ನನ್ಮೇಲೆ ಜೀವ ಇಟ್ಕೊಂಡಿದ್ದಾರೆ ಅಂದ್ಲು. ನಾನು 'ಡಿಟ್ಟೋ' ಎಂದೆ. ಹೆಚ್ಚು ಮಾತನಾಡದೆ ಗುಡ್‌ಬೈ ಹೇಳಿ ಹೋಗಿ ಬಿಟ್ಟಳು."

ಪದ್ಮಾವತಿ, ಶ್ರೀನಿವಾಸಯ್ಯ ಮಗನಿಗೆ ಕನ್ಯಾನ್ವೇಷಣೆ ಮುಂದುವರೆಸಿದ್ದಾರೆ. ಸೂಕ್ತ ಕನ್ಯೆ ಇದ್ದರೆ ಅವರಿಗೆ ದಯವಿಟ್ಟು ತಿಳಿಸಿ.



ಈ ಗೋಳು ಸರ್ಕಾರ ಬಂತು ನೋಡಿ, ತಡೆಯುಕ್ಕಾಗುಲ್ಲ, ಅಷ್ಟು ಸೆಖೆ!!

ಕೊರವಂಜಿಯಿಂದ

ಕೊರವಂಜಿ ಅಪರಂಜಿ ಟ್ರಸ್ಟ್

ಆಯೋಜಿಸಿರುವ

ಪಡುಕೋಣೆ ರಮಾನಂದರಾವ್ ಸ್ಮಾರಕ


ನಗೆ ಲೇಖನ ಸ್ಪರ್ಧೆ 2008

ನಾಡಿನ ಪ್ರಖ್ಯಾತ ನಗೆಬರಹಗಾರ ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆಯನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜಿಸಿದೆ. ಸ್ಪರ್ಧೆಯ ನಿಯಮಗಳು ಹೀಗಿವೆ.

1. ಒಬ್ಬರು ಒಂದು ಲೇಖನವನ್ನು ಮಾತ್ರ ಕಳುಹಿಸಬೇಕು
2. ಲೇಖನ ಫುಲ್‌ಸ್ಕೇಪ್ ಹಾಳೆಯಲ್ಲಿ 4ರಿಂದ 6 ಪುಟಗಳಿರಬೇಕು.
3. ಉತ್ತಮವಾದ ನಗೆಲೇಖನಕ್ಕೆ ಪ್ರಥಮ (ರೂ.1000/-), ದ್ವಿತೀಯ(ರೂ. 750/-) ಹಾಗೂ ಮೂರನೇ (ರೂ. 500/-) ಬಹುಮಾನಗಳಿರುತ್ತವೆ.
4. ಬಹುಮಾನಿತ ಲೇಖನಗಳನ್ನು ಅಪರಂಜಿ ವಿಶೇಷಾಂಕದಲ್ಲಿ ಪ್ರಕಟಿಸಲಾಗುವುದು.
5. ತೀರ್ಪುಗಾರರ ಮೆಚ್ಚುಗೆ ಪಡೆದ ನಗೆ ಲೇಖನಗಳನ್ನು ಅಪರಂಜಿಯಲ್ಲಿ ಕ್ರಮೇಣ ಬಳಸಿಕೊಳ್ಳಲಾಗುವುದು.
6. ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ, ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ ಹಾಗೂ ಲೇಖನಗಳನ್ನು ವಾಪಸ್ ಕಳುಹಿಸಲಾಗುವುದಿಲ್ಲ.
7. ಲೇಖನಗಳನ್ನು : ಬೇಲೂರು ರಾಮಮೂರ್ತಿ, ಉಪಸಂಪಾದಕರು, ಅಪರಂಜಿ, 'ಸುಕೇಶವ' ನಂ. 96, 2ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಬಿ.ಟಿ.ಎಂ ಬಡಾವಣೆ 1ನೇ ಹಂತ, ಬೆಂಗಳೂರು - 560 068 ಈ ವಿಳಾಸಕ್ಕೆ ಕಳುಹಿಸಬೇಕು.
8. ಲೇಖನಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 31.10.2008.

ಬಾಳೇಹೊನ್ನೂರಿನ ಬ್ರಹ್ಮರಾಕ್ಷಸ

- ವತ್ಸನ



ಅಬ್ಬ, ಸಾಕಾಯ್ತು ಸ್ವಾಮಿ ಈ ಬೆಂಗಳೂರು ಟ್ರಾಫಿಕ್. ಅಲ್ಲ ಕನಕಪುರ ರಸ್ತೇನ ನಡೆದುಕೊಂಡು ಕ್ರಾಸ್ ಮಾಡೋದಕ್ಕೇ ಹತ್ತು ನಿಮಿಷ ಆದ್ರೆ ಹೇಗೆ? ನೀವೇ ಹೇಳಿ. ಅವತ್ತು ಸಂಜೆ ಶರಲೇಖನೊಂದಿಗೆ ವಾಕಿಂಗ್ ಮುಗಿಸಿ ಫ್ಲಾಟಿಗೆ ಬಂದು ಸೇರಿದಾಗ ಆರೂಮುಕ್ಕಾಲು. ಬಾಗಿಲು ತೆರೆದ ಸರೋಜಮ್ಮ, "ಯಾರೋ ಹೆಣ್ಣುಮಗಳು ನಿಮ್ಮನ್ನ ನೋಡುಕ್ಕೇ ಅಂತ ಬಂದಿದ್ಲು. ಇಷ್ಟು ಹೊತ್ತೂ ಕಾದು ಕೊನೇಗೆ ಬೇರೆ ಕೆಲ್ಸ ಮುಗಿಸ್ಕೊಂಡು ಅರ್ಧ ಗಂಟೇಲಿ ಬರ್ತೀನಿ ಅಂತ ಹೇಳಿ ಹೋದ್ಲು." ಅಂತ ಹೇಳಿ, ಒಳಕ್ಕೆ ಹೋದರು. ಶರಲೇಖ "ಆಕೆ ಬಂದೇ ಬರಬೇಕು" ಅಂದ. ನಾನು ಏಕೆ? ಅಂತ ಅರ್ಥ ಬರೋಹಾಗೆ ಹುಬ್ಬೇರಿಸಿದೆ. ಆತ ನೇರವಾಗಿ ಸೋಫಾ ಪಕ್ಕದಲ್ಲಿದ್ದ ಪುಟ್ಟ ಸ್ಟೂಲಿನ ಮೇಲಿದ್ದ ಪಿಂಕ್ ಬಣ್ಣದ ಮೊಬೈಲ್ ಫೋನನ್ನು ತೆಗೆದುಕೊಂಡು ತದೇಕ ಚಿತ್ತದಿಂದ ಪರೀಕ್ಷಿಸಿಸಲು ಪ್ರಾರಂಭಿಸಿದ.

"ಓಹೋ, ಆಕೆ ತನ್ನ ಮೊಬೈಲನ್ನು ಇಲ್ಲೇ ಮರೆತು ಬಿಟ್ಟಹಾಗೆ ಕಾಣುತ್ತೆ" ಎನ್ನುತ್ತಾ ನಾನು ಬಟ್ಟೆ ಬದಲಿಸಲು ಹೊರಟೆ. ಪುನಃ ನಾನು ವಿರಾಮದ ಕೋಣೆಗೆ ಬಂದಾಗ ಶರಲೇಖ ಕಿಟಕಿಯ ಬಳಿ ನಿಂತಿದ್ದ. ನಾನು ಬಂದದ್ದು ಕಂಡು, "ಆ ಮೊಬೈಲ್‌ನ ಪರೀಕ್ಷಿಸಿ ಅದರ ಓನರ್ ಬಗ್ಗೆ ಏನು ಹೇಳುಕ್ಕೆ ಆಗುತ್ತೆ? ಹೇಳು ನೋಡೋಣ" ಎಂದು ಛಾಲೆಂಜಿಸಿದ. ನಾನು ಅದನ್ನ ಕೈಗೆ ತೆಗೆದುಕೊಂಡೆ. ಮಹಿಳೆಯರಿಗೆ ಹೇಳಿಮಾಡಿಸಿದಂತಹ ಪುಟ್ಟ ಫೋನ್. ಫೋನನ್ನು ಆನ್ ಮಾಡಿ ಡಯಲ್‌ಡ್ ಕಾಲ್ ಪಟ್ಟಿ ನೋಡಿದೆ. ಸಾಲಾಗಿ ಯಾವುಯಾವುದೋ ನಂಬರುಗಳಿದ್ದವು ಆ ಪಟ್ಟಿಯಲ್ಲಿ. ರಿಸೀವ್ಡ್ ಕಾಲ್ ಪಟ್ಟಿಯೂ ಸಹಾ ಡಿಟ್ಟೋ. ಯಾವುದನ್ನೂ ಗುರುತಿಸಲು ಆಗಲಿಲ್ಲ.

"ನನಗೆ ಏನೂ ತೋಚ್ತಾ ಇಲ್ಲ, ನಿನಗೇನಾದ್ರೂ ಕಂಡು ಹಿಡಿಯುಕ್ಕೆ ಆಯ್ತೇನೂ"

"ಅಂಥಾದ್ದೇನೂ ಮಾಹಿತಿ ಸಿಕ್ಕಲಿಲ್ಲ. ಸಿಕ್ಕಿದ್ದು ಇಷ್ಟೇ. ಬಂದಿದ್ದಾಕೆಯ ಹೆಸರು ಹೇಮ. ಚಿಕ್ಕಮಗಳೂರಿನ ಹತ್ತಿರದ ಒಂದು ಊರಿನ ನಿವಾಸಿ. ಅಮೆರಿಕೆಯಲ್ಲಿದ್ದು ಈಗ ಸ್ವದೇಶಕ್ಕೆ ಬಂದಿದ್ದಾಳೆ.......... ಹ್ಞಾ ಆಕೆಗೆ ಗುಂಗುರು ಕೂದಲು, ಕೆನ್ನೆಯ ಮೇಲೆ-ಒಂದು ಸಣ್ಣ ಮಚ್ಚೆ, ಕಂದು ಬಣ್ಣದ ಸಲ್ವಾರ್ ಕಮೀಜ್ ಧರಿಸಿದ್ದಾಳೆ ಅಂತ ಹೇಳಬಲ್ಲೆ" ಅಂದ ಶರಲೇಖ.

ನಾನು ಆಶ್ಚರ್ಯದಿಂದ ತತ್ತರಿಸಿದೆ. ನನ್ನ ಗಾಬರಿ ಕಂಡು ಶರಲೇಖನೇ ಉತ್ತರಿಸಲು ಮುಂದಾದ.

"ರಿಸೀವ್ಡ್ ಕಾಲ್ ಪಟ್ಟಿಯಲ್ಲಿ ಇದ್ದ ಅನೇಕ ನಂಬರುಗಳು 918262 ಇಂದ ಶುರುವಾಗಿವೆ. 91 ಭಾರತದ ಕೋಡ್. 8262 ಚಿಕ್ಕಮಗಳೂರಿನ ಕೋಡ್. ಆಕೆ ಈಚೆಗೆ

ಕಳುಹಿಸಿದ ಮೆಸೇಜೊಂದರಲ್ಲಿ ತನ್ನ ಹೆಸರಿನ ಜೊತೆಗೆ ಚಿಕ್ಕಮಗಳೂರಿನಲ್ಲಿ ಭೇಟಿ ಮಾಡುವ ಪ್ರಸ್ತಾಪ ಮಾಡಿದ್ದಾಳೆ. ಅದೇ ಊರಿನಲ್ಲಿದ್ದರೆ ಊರಿನ ಹೆಸರು ಹಾಕುವ ಅಗತ್ಯವಿರುವುದಿಲ್ಲ ಅಲ್ಲವೇ. ಮೆಸೇಜಿನ ಭಾಷೆ ನೋಡಿದರೆ ಅಮೆರಿಕದ ವಾಸನೆ ಎದ್ದು ಹೊಡೆಯುತ್ತೆ.'' ಎಂದು ಹೇಳಿದ ಶರಲೇಖ.

''ಆದರೆ ಆಕೆಯ ಕೂದಲು, ಉಡುಪು, ಕೆನ್ನೆಯ ಮೇಲಿನ ಮಚ್ಚೆ ಅದನ್ನೆಲ್ಲಾ.........''

''ಈಗತಾನೆ ಆಕೆ ಗೇಟ್ ತೆಗೆದುಕೊಂಡು ಬಂದಿದ್ದನ್ನು ಕಿಟಕಿಯಿಂದ ನೋಡಿದೆ ಅಷ್ಟೇ. ಹ್ಞಾ ಬಾಗಿಲ ಕರೆಗಂಟೆ ಲೋಚಗುಟ್ಟುತ್ತಿದೆ. ಆಕೇನೇ ಇರಬೇಕು ಬಾಗಿಲು ತೆಗೀತೀಯಾ ಸ್ವಲ್ಪ.''

ಒಳಕ್ಕೆ ಬಂದ ಮಹಿಳೆಗೆ ಸುಮಾರು ಮೂವತ್ತರ ಪ್ರಾಯ. ತೆಳ್ಳನೆಯ ಮೈಮಾಟ. ಬುದ್ಧಿವಂತಿಕೆಯ ಕಳೆ. ಮುಖದಲ್ಲಿ ಆತಂಕ ಸ್ಪಷ್ಟವಾಗಿ ಕಾಣುತ್ತಿತ್ತು.

''ಬನ್ನಿ ಹೇಮ ಅವರೇ, ಈ ಸೋಫಾದಲ್ಲಿ ಕೂಡಿ. ನನ್ನಿಂದ ಏನಾಗಬೇಕು?'' ಎಂದ ಸೌಜನ್ಯಮೂರ್ತಿ ಶರಲೇಖ.

''ಸಾರಿ, ನನ್ನ ಮೊಬೈಲ್ ಮರೆತು ಇಲ್ಲೇ ಬಿಟ್ಟು ಹೋಗಿದ್ದಕ್ಕೆ. ನಾನಿರೋದು ಬಾಳೇಹೊನ್ನೂರಿನಲ್ಲಿ. ನಮ್ಮ ಮನೆಯಲ್ಲಿ ಒಂದು ವಿಚಿತ್ರ ಸಮಸ್ಯೆ ಉದ್ಭವ ಆಗಿದೆ. ನನ್ನ ಗೆಳತಿ ಸೌಮ್ಯಗೆ ಹಿಂದೊಮ್ಮೆ ನೀವು ಸಹಾಯ ಮಾಡಿದ್ರಂತೆ. ಅವಳೇ ನಿಮ್ಮನ್ನ ನೋಡು ಅಂತ ಸಲಹೆ ಮಾಡಿದ್ಲು, ಅದಕ್ಕೆ ಇಲ್ಲಿಗೆ ಬಂದೆ. ಫೋನ್ ಮಾಡಿ ಬರೋಣ ಅಂದ್ರೆ ನಿಮ್ಮ ಫೋನ್ ನಂಬರ್ ಇರಲಿಲ್ಲ, ಹಾಗೇ ಛಾನ್ಸ್ ತಗೊಂಡೆ'' ಅಂದಳು ಹೇಮಾ.

''ಏನು ನಿಮ್ಮ ಸಮಸ್ಯೆ'' ಎಂದು ಕೇಳಿದ ನನ್ನ ಮಿತಭಾಷಿ ಗೆಳೆಯ

''ಅದನ್ನ ಹೇಳುಕ್ಕೆ ಮುಂಚೆ ನಿಮಗೆ ನನ್ನ ಫ್ಯಾಮಿಲಿ ಹಿನ್ನೆಲೆ ಬಗ್ಗೆ ತಿಳಿಸ್ಬೇಕು. ನನ್ನ ಗಂಡ ಸತೀಶ ಮತ್ತು ನಾನು ಅಮೆರಿಕಾದಲ್ಲಿ ಕಳೆದ ಐದು ವರ್ಷಗಳಿಂದ ಕೆಲಸ ಮಾಡ್ತಾ ಇದ್ದೆವು. ಹೋದ ವರ್ಷ ನಮ್ಮ ಅತ್ತೆ ತೀರಿಕೊಂಡ ಮೇಲೆ ನಮ್ಮ ಮಾವ ಒಬ್ಬರೇ ಬಾಳೇಹೊನ್ನೂರಿನ ದೊಡ್ಡ ಎಸ್ಟೇಟ್ ಮನೆಯಲ್ಲಿ ಇರಬೇಕಾಗಿ ಬಂತು. ಸತೀಶನಿಗೆ ಅಪ್ಪ ಒಬ್ಬರೇ ಇರ್ತಾರಲ್ಲಾ ಅಂತ ಆತಂಕ. ಊರಿಗೆ ಹಿಂತಿರುಗಿ ಅಪ್ಪನ ಜೊತೇನೇ ಇದ್ದು ಬಿಡೋಣ ಸಾಫ್ಟ್‌ವೇರ್ ಕೆಲಸ ಅಲ್ಲಿಂದ್ಲೂ ಮಾಡಬಹುದು ಅಂದ. ನಾನೂ ಒಪ್ಪಿ, ಆರು ತಿಂಗಳ ಹಿಂದೆ ಊರಿಗೆ ಹಿಂತಿರುಗಿದೆವು. ನಮ್ಮ ತಾಯಿ ಮನೆ ಚಿಕ್ಕಮಗಳೂರಿನ ಹತ್ತಿರದ ಗಿರಿಯಲ್ಲಿ ಇದೆ. ನಮ್ಮಪ್ಪ ತೀರಿಕೊಂಡು ಶಾನೆ ವರ್ಷಗಳಾಗಿವೆ. ನಾನೊಬ್ಬಳೇ ಮಗಳು. ನಿಮ್ಮಮ್ಮ ಒಬ್ಬರೇ ಇರ್ತಾರಲ್ಲಾ, ಇಲ್ಲೇ ಬಂದು ನಮ್ಮ ಜೊತೇಲೇ ಇದ್ದು ಬಿಡ್ಲಿ, ದೊಡ್ಡ ಮನೆ ತುಂಬಿದ ಹಾಗೆ ಇರುತ್ತೆ ಅಂತ ಸತೀಶ ಹೇಳಿದಮೇಲೆ ನಾನು ನಮ್ಮಮ್ಮನ್ನ ನಮ್ಮ ಜೊತೆ ಬಂದು ಇರೋಕ್ಕೆ ಒಪ್ಪಿಸ್ದೆ. ಎರಡು ವಾರದಿಂದ ಅಮ್ಮ ನಮ್ಮ ಮನೆಯಲ್ಲೇ ಇದ್ದಾರೆ. ಬಂದ ಹೊಸದರಲ್ಲಿ ಎಲ್ಲಾ ಚೆನ್ನಾಗೇ ಇತ್ತು. ಮೂರುದಿನ ಆದಮೇಲೆ ಅಮ್ಮನ ಮುಖದಲ್ಲಿ ಏನೋ ಭಯ ಕಳವಳ ಕಂಡು ಬಂತು. ನಾನು ತುಂಬಾ ಬಲವಂತ ಮಾಡಿದ್ಮೇಲೆ ಅಮ್ಮ ಬಾಯಿಬಿಟ್ಟಳು. ರಾತ್ರಿ ಒಂದು ಹೊತ್ತಿನಲ್ಲಿ ತೋಟದ ಹುಣಸೇ ಮರದ ಬಡದಲ್ಲಿ ಬ್ರಹ್ಮ ರಾಕ್ಷಸ ಕೂತಿರೋದು

ಅವಳ ರೂಮಿನ ಕಿಟಕಿಯಿಂದ ಕಾಣಿಸುತ್ತಂತೆ. ಇದರಿಂದ ಮನೇಗೇನಾದ್ರೂ ಅನಿಷ್ಟ ಸಂಭವಿಸುತ್ತೇನೋ ಅಂತ ಅವಳಿಗೆ ಆತಂಕ ಶುರುವಾಗಿದೆ. ''ಸತೀಶನಿಗಾಗಲೀ, ನಿಮ್ಮ ಮಾವನವರಿಗಾಗಲೀ ಇದರಲ್ಲೆಲ್ಲಾ ನಂಬಿಕೆ ಇಲ್ಲ. ನನ್ನ ಮನಸ್ಸಿನ ಆರೋಗ್ಯದ ಬಗ್ಗೇನೇ ಸಂಶಯಪಟ್ಟಾರು. ಖಂಡಿತ ಅವರ್‍ಯಾರಿಗೂ ಈ ವಿಷಯ ತಿಳಿಸುಲ್ಲ ಅಂತ ಭಾಷೆಕೊಡು'' ಅಂತ ನಮ್ಮಮ್ಮ ನನ್ನಿಂದ ಭಾಷೆ ಬೇರೆ ತಗೊಂಡಿದಾಳೆ. ನನಗೆ ಏನು ಮಾಡಲೂ ತೋಚದೆ ನಿಮ್ಮಲ್ಲಿಗೆ ಬಂದಿದೀನಿ'' ಅಂದಳು ಹೇಮಾ.

''ಏನೂ ಯೋಚನೆ ಮಾಡಬೇಡಿ, ನನ್ನ ಗೆಳೆಯ ಮತ್ತು ನಾನು ನಾಳೇನೇ ಚಿಕ್ಕಮಗಳೂರಿಗೆ ಬರುತ್ತೇವೆ. ನಿಮ್ಮ ಮಾವ ಮತ್ತು ಗಂಡ ಇವರಿಂದ ಈ ವಿಷಯಾನ ಈ ಹಂತದಲ್ಲಿ ಗೋಪ್ಯವಾಗಿಡುಕ್ಕೆ ನನ್ನದೇನೂ ಅಭ್ಯಂತರ ಇಲ್ಲ. ಆದರೆ ಸನ್ನಿವೇಶ ಬದಲಾದರೆ ಅವರಿಗೂ ಇದನ್ನೆಲ್ಲಾ ತಿಳಿಸಬೇಕಾಗುತ್ತೆ. ಅದಕ್ಕೆ ನಿಮ್ಮ ಒಪ್ಪಿಗೆ ಇದೆ ತಾನೆ?''

''ಅಂತಹ ಪರಿಸ್ಥಿತಿ ಬಂದಾಗ ಖಂಡಿತ ನಿಮಗೆ ಯಾವುದು ಸರಿ ಅನ್ನಿಸುತ್ತೋ ಹಾಗೆ ಮಾಡಿ. ಅಂದಹಾಗೇ ನೀವು ಚಿಕ್ಕಮಗಳೂರಿಗೆ ಬಂದಾಗ ಅಲ್ಲಿರೋ ಕಡೂರು ಕ್ಲಬ್ಬಿನಲ್ಲಿ ಇಳಿದುಕೊಳ್ಳಿ, ನಮ್ಮ ಮಾವ ಅಲ್ಲಿನ ಮಾಜಿ ಅಧ್ಯಕ್ಷರು. ನಾನು ರೂಮ್ ರಿಸರ್ವೇಷನ್ ಮಾಡಿರ್ತೀನಿ. ಬಂದಮೇಲೆ ನನ್ನ ಮೊಬೈಲ್‌ಗೆ ಫೋನ್ ಮಾಡಿದ್ರೆ ಸಾಕು ನಾನು ಬಂದು ನಿಮ್ಮನ್ನ ಭೇಟಿ ಮಾಡ್ತೀನಿ. ನಾನಿನ್ನು ಬರಲೇ'' ಎನ್ನುತ್ತಾ ಹೇಮಾ ಹೊರಡಲು ಉದ್ಯುಕ್ತಳಾದಳು. ''ಆಗಾಗ್ಗೆ ನಿಮ್ಮ ಸೆಲ್‌ಫೋನಿನ ಮೆಸೇಜುಗಳನ್ನ ಡಿಲೀಟ್ ಮಾಡ್ತಾ ಇರೀಮ್ಮ, ಬೇಡದೋರ ಕೈಗೆ ಅದು ಸಿಗಬಾರದು ನೋಡಿ. ಹೋಗಿಬನ್ನಿ'' ಎಂದ ಶರಲೇಖ.

''ಅರೆ, ಇದೊಳ್ಳೆ ವಿಚಿತ್ರ ಸಮಸ್ಯೆ. ಕಳ್ಳರನ್ನಾದ್ರೆ ಹಿಡೀಬಹುದು. ದೆವ್ವ ಭೂತಗಳನ್ನ ಹಿಡಿಯೋಕ್ಕೆ ನಾವೇನು ಮಾಂತ್ರಿಕರೇ? ಯಾಕೆ ಸಹಾಯ ಮಾಡುಕ್ಕೆ ಒಪ್ಪಿಕೊಂಡೆ?'' ಅಂತ ನಾನು ಕೇಳಿದೆ.

''ನಿನಗೇ ತಿಳಿದಿರೋ ಹಾಗೆ ನಾನೊಬ್ಬ ರ್‍ಯಾಷನಲಿಸ್ಟ್. ಇದರಲ್ಲೇನೋ ಕೃತ್ರಿಮ ಇರಬೇಕು ಅಂತ ಅನ್ನಿಸುತ್ತೆ ನನಗೆ. ಒಂದು ವೇಳೆ ಬ್ರಹ್ಮ ರಾಕ್ಷಸ ಇರೋದೇ ಸಾಬೀತಾದ್ರೆ ನಮ್ಮಿಂದ ವಿಜ್ಞಾನ ಜಗತ್ತಿಗೆ ಒಂದು ಅಪೂರ್ವ ಕೊಡುಗೆ ಆಗುತ್ತೇನೋ ಯಾರಿಗ್ಗೊತ್ತು. ರೆಡಿ ಆಗು ನಾಳೆ ಚಿಕ್ಕಮಗಳೂರಿಗೆ ಹೋಗುಕ್ಕೆ.'' ಅಂದ ಅವ.

ಕಡೂರು ಸ್ಟೇಷನ್ ತಲುಪಿ ಬಸ್ಸು ಹಿಡಿದು ಚಿಕ್ಕಮಗಳೂರಿನಲ್ಲಿನ ಕಡೂರು ಕ್ಲಬ್ ಸೇರಿದಾಗ ಸಂಜೆ ಆರಾಗಿತ್ತು. ಬ್ರಿಟಿಷರ ಕಾಲದ ಕ್ಲಬ್ಬು, ಅಂದಿನ ದಿನಗಳ ಪರಂಪರೆಯನ್ನ ಹಾಗೇ ಉಳಿಸಿಕೊಂಡು ಬಂದ ಹಾಗೆ ಕಾಣಿಸಿತು. ಹಳೆಯ ಕಾಲದ ಹೆಂಚಿನ ಕಟ್ಟಡ. ಒಳಗೆ ಊಟದ ಹಜಾರದಲ್ಲಿ ಹದಿನೆಂಟು ಕುರ್ಚಿಗಳನ್ನು ಸುತ್ತ ಅಳವಡಿಸಿದ ಉದ್ದನೆಯ ತೇಗದ ಮರದ ಮೇಜು. ಗೋಡೆಯ ಮೇಲಿನಿಂದ ನಮ್ಮನ್ನು ತುಚ್ಛೀಕಾರ ಭಾವದಿಂದ ನೋಡುತ್ತಿದ್ದ ಕಾಡುಕೋಣನ ತಲೆ. ಟಿಪ್‌ಟಾಪ್ ಆಗಿದ್ದ ಸಹಾಯಕರ ಜರ್ಬಾದ ಡವಾಲಿ ಉಡುಪನ್ನು ನಮ್ಮ ಪ್ಯಾಂಟು ಷರಟಿಗೆ ಹೋಲಿಸಿಕೊಂಡಾಗ ಸ್ವಲ್ಪ ನಾಚಿಕೆಯೇ ಆಯಿತು. ಕಾದಿರಿಸಿದ್ದ ನಮ್ಮ ಕೋಣೆಗೆ ಹೋದನಂತರ ಶರಲೇಖ ಹೇಮಳಿಗೆ ಫೋನ್ ಮಾಡಿ ನಮ್ಮ ಆಗಮನವನ್ನು ತಿಳಿಸಿದ.

ಸುಮಾರು ಏಳೂವರೆಯ ಹೊತ್ತಿಗೆ ಹೇಮಾ ಅವರಮ್ಮನೊಂದಿಗೆ ಕ್ಲಬ್ಬಿಗೆ ಬಂದಳು.

''ಇದು ನಮ್ಮ ತಾಯಿ, ವಸುಂಧರಾ. ನಿಮ್ಮ ಹತ್ತಿರ ಬರೋದಕ್ಕೆ ತುಂಬಾ ಹಿಂದೇಟು ಹಾಕಿದರು. ನಾನೇ ಬಲವಂತ ಮಾಡಿ ಕರೆತಂದಿದೀನಿ.'' ಎಂದು ಹೇಮಾ ತನ್ನ ತಾಯಿಯನ್ನು ಪರಿಚಯಿಸಿದಳು. ನಾವೆಲ್ಲರೂ ಲೌಂಜಿನಲ್ಲಿ ಕುಳಿತೆವು.

''ಎಲ್ಲ ವಿಷಯಗಳನ್ನೂ ವಿವರವಾಗಿ ಹೇಳಿ. ಯಾವ ಸಂಕೋಚಾನೂ ಬೇಡ'' ಎಂದು ಶರಲೇಖ ಉತ್ತೇಜಿಸಿದ ನಂತರ ವಸುಂಧರಾ ತನ್ನ ವೃತ್ತಾಂತವನ್ನು ಹೇಳತೊಡಗಿದರು.

''ನನ್ನ ಕೊಠಡಿ ಮನೆಯ ಹಿಂಭಾಗದಲ್ಲಿ ಮಹಡಿಯ ಮೇಲೆ ಇದೆ. ಗಾಳಿ ಆಡಲಿ ಅಂತ ರಾತ್ರಿ ಮಲಗುಕ್ಕೆ ಮುಂಚೆ ನಾನು ಕಿಟಕಿ ತೆರೆದು ಮಲಗೋದು ಅಭ್ಯಾಸ. ಹಲವು ದಿನಗಳ ಹಿಂದೆ ಕಿಟಕಿ ತೆಗೆದಾಗ ತೋಟದ ಹುಣಸೇ ಮರದ ಕೆಳಗೆ ಯಾರೋ ಕೂತಿದ್ದ ಹಾಗೆ ಕಾಣಿಸಿತು ಸರಿಯಾಗಿ ನೋಡಿದರೆ ಜಟೆ ಗಡ್ಡ ಇದ್ದ ಒಂದು ವ್ಯಕ್ತಿ ಹಣೆಯ ಮೇಲೆ ಕುಂಕುಮ ರಾಚಿಕೊಂಡು ಕುಳಿತದ್ದನ್ನು ಕಂಡೆ. ನನಗೆ ಝುಂಗಾಬಲವೇ ಉಡುಗಿಹೋಯಿತು. ಬೇಗ ಕಿಟಕಿ ಹಾಕಿಬಿಟ್ಟೆ ಮಾರನೆಯ ದಿನ ಕಿಟಕಿ ತೆಗೆಯಲೇ ಬಾರದು ಅಂತ ಮನಸ್ಸು ಮಾಡಿದ್ದೆ. ಆದರೆ ಹಿಂದಿನ ರಾತ್ರಿ ನೋಡಿದ್ದು ನಿಜವೇ ಅಂತ ಖಾತರಿ ಪಡಿಸಿಕೊಳ್ಳುವ ಮನಸ್ಸಾಯಿತು. ಕಿಟಕಿ ತೆರೆದರೆ ಪುನಃ ಅದೇ ದೃಶ್ಯ. ಸಂಸಾರವಂದಿಗರ ಮನೆ. ಇಂಥಾದ್ದೆಲ್ಲಾ ಕಾಣಿಸಿಕೊಳ್ಳೋದು ಶುಭ ಅಲ್ಲ ಅಂತ ಅನ್ನಿಸಿದರೂ ಹೇಳಿಕೊಳ್ಳೋದಾದರೂ ಯಾರಿಗೆ ಅಂದುಕೊಂಡು ಕಳವಳ ಪಡುತ್ತಾ ಇದ್ದೆ. ನಮ್ಮ ಹೇಮಾ ಬಹಳ ಚುರುಕು. ನನ್ನಿಂದ ಬಾಯಿಬಿಡಿಸಿದಳು. ಈಗೇನು ಮಾಡಲಿ ಹೇಳಿ?''

''ತೋಟಕ್ಕೆ ಕಾವಲು ಇಲ್ಲವೇ ಹೇಮಾ ಅವರೇ?''

''ಅಷ್ಟು ದೊಡ್ಡ ತೋಟಕ್ಕೆ ಎಷ್ಟೂ ಅಂತ ಕಾವಲು ಇಡ್ತೀರ. ನಮ್ಮ ಮಾವನವರ ತಂದೆ ಕಾಲದಿಂದ ತೋಟ ಕಾಯುಕ್ಕೆ ಒಂದು ಚೌಡಿ ಇದೆ ಅಷ್ಟೇ.''

''ಸರಿ, ನಾಳೆ ರಾತ್ರಿ ನಾವು ಅಲ್ಲಿಗೆ ಬಂದು ಹೊಂಚು ಹಾಕಿ ಅದೇನಾಗ್ತಾ ಇದೆ ಅಂತ ಪತ್ತೆ ಮಾಡ್ತೇವೆ. ಯೋಚನೆ ಬೇಡ. ಒಂದೆರಡು ದಿನ ಕಿಟಕಿ ತೆಗೀಬೇಡಿ. ಈಗ ಹೋಗಿಬನ್ನಿ. ಏನಾದ್ರೂ ಬೇಕಾದ್ರೆ ಹೇಗಿದ್ರೂ ಹೇಮಾ ಹತ್ರ ನಂಬರ್ ಇದೆಯಲ್ಲಾ.'' ಅಂದು ಶರಲೇಖ ಆ ಮಹಿಳೆಯರನ್ನ ಬೀಳ್ಕೊಟ್ಟ.

ಮಾರನೆಯ ದಿನ ಬೆಳಗ್ಗೇನೇ ಶರಲೇಖ ತನ್ನ ಗುಪ್ತಚರ್ಯೆಗೆ ಹೊರಟ. ನಾನು ಕ್ಲಬ್ಬಿನ ಬಿಲಿಯರ್ಡ್ಸ್ ರೂಮಿನಲ್ಲಿ ಮಾರ್ಕರ್ ಜೊತೆ ನನ್ನ ಆಟವನ್ನು ಉತ್ತಮಗೊಳಿಕೊಳ್ಳಲು ಹವಣಿಸಿದೆ.

ಸಂಜೆ ಲೌಂಜಿನಲ್ಲಿ ಕುಳಿತು ಟೀ ಕುಡಿಯುತ್ತಿದ್ದಾಗ, ವೆರಾಂಡಾದಲ್ಲಿ ಯಾರೋ ಮನ್ನಾಡೇ ಹಾಡೊಂದನ್ನು ಸಿಳ್ಳೆಹಾಕುತ್ತಾ ಬಂದದ್ದು ಕೇಳಿಸಿತು.

ಓಹೋ, ಶರಲೇಖನಿಗೆ ಏನೋ ಒಳ್ಳೇ ಕ್ಲೂ ಸಿಕ್ಕಿರಬೇಕು ಅಂದುಕೊಳ್ಳುತ್ತಿದ್ದಂತೆಯೇ ಆಸಾಮೀನೇ ಪ್ರತ್ಯಕ್ಷನಾದ.

''ಏನಾಯ್ತು ಶರಲೇಖ? ಯಾವಾಗ ನಾವು ಬಾಳೇಹೊನ್ನೂರಿಗೆ ಹೋಗೋದು?'' ಅಂತ ವಿಚಾರಿಸಿದೆ.

''ಇನ್ನು ಅರ್ಧ ಗಂಟೇಲಿ ಹೊರಡಬೇಕು. ಡೀಲಕ್ಸ್ ಬಸ್ಸಿದೆ ಅಲ್ಲೀಗೆ. ಒಂದು ಗಂಟೆ ಪಯಣ'' ಅಂದ

ಬಸ್ಸು ಡೀಲಕ್ಸಾದರೇನು, ರಸ್ತೆ ಡೀಲಕ್ಸಾಗಿರಬೇಕಲ್ಲಾ. ಧಭಧಭ ಜಾತಕದಂತೆ ನಮ್ಮ ವಾಹನ ಮುಗ್ಗರಿಸುತ್ತಾ ಬಾಳೇಹೊನ್ನೂರಿನ ಕಡೆ ಸಾಗಿತು. ಬಸ್ಸಿಂದ ಇಳಿದಾಗ ಸಂಜೆ ಏಳೂವರೆ. ದೊಡ್ಡಮನೆ ಎಸ್ಟೇಟನ್ನು ಹುಡುಕುವುದೇನೂ ಕಷ್ಟವಾಗಲಿಲ್ಲ. ರಸ್ತೆಯ ಮಂಕು ದೀಪದ ಬೆಳಕಿನಲ್ಲಿ ತೋಟದ ಗೇಟು ಕಾಣಿಸಿತು. ಗೇಟನ್ನು ದಾಟಿ ಒಳಗೆ ಹೋದರೆ ಕಣ್ಣು ಕತ್ತಲಿಡುವಷ್ಟು ಕತ್ತಲು. ''ತೋಟ ಕಾಯಲು ಚೌಡಿ ಬಿಟ್ಟಿದೀವಿ ಅಂದಳಲ್ಲಾ ಆಕೆ, ಅದು ನಮಗೇನೂ ಮಾಡಲ್ವೇ?'' ಅಂತ ಪಿಸುಮಾತಿನಲ್ಲಿ ಕೇಳಿದೆ.

''ಅವೇನಾದ್ರೂ ಕಂಡ್ರೆ ಅದೂ ಒಂದು ಕೊಡುಗೆ ವಿಜ್ಞಾನಕ್ಕೆ'' ಅಂತ ಹೇಳಿ ನನ್ನ ಬಾಯಿ ಮುಚ್ಚಿಸಿದ. ಸ್ವಲ್ಪ ದೂರ ನಡೆದ ಮೇಲೆ ಮಬ್ಬುಗತ್ತಲಿನಲ್ಲಿ ಮನೆ ಕಣ್ಣಿಗೆ ಬಿತ್ತು. ಮನೆಯ ಬಲಕ್ಕೆ ಒಂದು ಕಾಲುಹಾದಿ. ಅದನ್ನ ಹಿಡಿದು ಮನೆಯ ಹಿಂಭಾಗಕ್ಕೆ ಹೋದೆವು. ಮಹಡಿಯ ಮೇಲಿನ ಕಿಟಕಿ ಹಾಕಿದ ಕೋಣೆಯೊಂದರಲ್ಲಿ ದೀಪ ಹಚ್ಚಿತ್ತು. ಹತ್ತಿರದಲ್ಲೇ ಒಂದು ಮಹಾ ಗಾತ್ರದ ಹುಣಸೇ ಮರ. ''ಯಾರೂ ಕೂತಿಲ್ವಲ್ಲಾ'' ಅಂತ ಮತ್ತೆ ಪಿಸುಗುಟ್ಟಿದೆ. ''ಒಳ್ಳೇದೇ ಆಯ್ತು. ಅದು ಬರುಕ್ಕೆ ಮುಂಚೆ ನಾವು ಅವಿತು ಕೂರಬಹುದು.'' ಎನ್ನುತ್ತಾ ಶರಲೇಖ ಹತ್ತಿರದಲ್ಲಿದ್ದ ಪೊದೆಯೊಂದರಲ್ಲಿ ಜಾಗಮಾಡಿಕೊಂಡು ಅವಿತು ಕುಳಿತು ನನ್ನನ್ನೂ ಬರಹೇಳಿದ. ನಾನು ಅವನೊಂದಿಗೆ ಕುಳಿತೆ. ಶರಲೇಖ ''ಅವನು ಬರುಕ್ಕೆ'' ಅನ್ನೋದರ ಬದಲು ''ಅದು ಬರುಕ್ಕೆ'' ಅಂತ ಯಾಕಂದ, ಅನ್ನೋ ಸಂದೇಹ ಬಹಳ ಕಾಡಿತು. ವಿಜ್ಞಾನ ಪ್ರಪಂಚಕ್ಕೆ ಕೊಡುಗೆ ನೀಡಲು ಹುಣಸೇ ಮರದ ಬಡವನ್ನೇ ನೋಡುತ್ತಾ ಕಾದು ಕುಳಿತೆವು.

ಹತ್ತು ಗಂಟೆಯ ಸುಮಾರಿನಲ್ಲಿ ನಮಗೇ ಅರಿವಿಲ್ಲದಂತೆ ಮರದ ಬುಡದಲ್ಲಿ ವ್ಯಕ್ತಿಯೊಂದು ಬಂದು ಕುಳಿತಿತ್ತು. ಅರ್ಧ ಚಂದ್ರನ ಮಂದ ಪ್ರಕಾಶದಲ್ಲಿ ನಾವು ಕಂಡ ದೃಶ್ಯ ತಕ್ಕಮಟ್ಟಿಗೆ ಘೋರವಾಗೇ ಇತ್ತು. ಎಣ್ಣೆಕಾಣದ ಜಟೆಗಟ್ಟಿದ ಕೂದಲಿನ ಮೇಲೊಂದು ಶಿಖೆ. ಆ ಶಿಖೆಯಲ್ಲಿ ಸಿಲುಕಿಸಿದ್ದ ಒಂದು ರತ್ನ ಖಚಿತ ಹಿಡಿ ಇರುವ ಚೂರಿ, ಹೊರವಾದ ಕಪ್ಪು ಗಡ್ಡ. ಹಣೆಯ ಮೇಲೆಲ್ಲಾ ಕುಂಕುಮದ ಲೇಪ. ಕೆಂಪು ಕಚ್ಚೆ ಪಂಚೆ. ಜನಿವಾರ. ತಪಸ್ಸು ಮಾಡುವ ಭಂಗಿಯಲ್ಲಿ ಕೂತಿದ್ದ ಆ ವ್ಯಕ್ತಿ ವಿಶೇಷಕ್ಕೆ ನಾವು ಕೂತಿದ್ದು ತಿಳಿದಂತೆ ಕಾಣಲಿಲ್ಲ. ''ಏನು ಮಾಡೋಣ ಈಗ?'' ಅಂತ ಪಿಸುಗುಟ್ಟಿದೆ. ನಿರುತ್ತರ. ಪಕ್ಕಕ್ಕೆ ತಿರುಗಿದೆ. ಶರಲೇಖ ಇರಲಿಲ್ಲ. ವಸುಂಧರಾಗೆ ಆದಂತೆ ನನಗೂ ಝುಂಗಾಬಲ ಉಡುಗಿಹೋಯಿತು. ಆದರೂ ಕಷ್ಟಪಟ್ಟು ಆ ಬ್ರಹ್ಮರಾಕ್ಷಸನ ಕಡೆ ದೃಷ್ಟಿ ಹಾಯಿಸಿದೆ. ನನ್ನ ಕಣ್ಣುಗಳನ್ನೇ ನಂಬಲಾಗದ ದೃಶ್ಯ ಕಂಡಿತು. ಶರಲೇಖ ಯಾವುದೋ ಮಾಯದಲ್ಲಿ ಆ ವ್ಯಕ್ತಿಯ ಹಿಂದೆ ಹೋಗಿ ಅವನನ್ನು ತಬ್ಬಿ ಹಿಡಿದು ಅವನ ಗಡ್ಡಕ್ಕೇ ಕೈ ಹಾಕಿದ್ದ. ಶರಲೇಖನ ಸಹಾಯಕ್ಕೆ ನಾನೂ ಅವನತ್ತ ಓಡಿದೆ. ಅಲ್ಲೊಂದು ಸರ್ರಿಯಲ್ ಸಂಭಾಷಣೆ ನಡೆಯುತ್ತಿತ್ತು.

''ಯಾರಯ್ಯಾ ನೀನು?'' ಈ ಜೋಗಿ ವೇಷ ಹಾಕ್ಕೊಂಡು ಇಲ್ಲಿ ಕೂತಿದ್ದೀಯಾ?''

''ನಾನು ಯಾರು ಅಂತೀಯಾ? ನಮ್ಮ ತೋಟಕ್ಕೆ ಬಂದು ನನ್ನೇ ಅಟಾಕ್ ಮಾಡ್ತೀಯಾ?''

''ನಿನ್ನ ತೋಟಾನಾ? ನೀನೇನು ಸತೀಶನ ಅಪ್ಪ ಅಂದ್ಕೊಂಡ್ ಬಿಟ್ಟಿದೀಯಾ''

''ಹೌದು ನಾನು ಸತೀಶನ ಅಪ್ಪ, ಸತೀಶ ಹೇಗೆ ಗೊತ್ತು ನಿನಗೆ? ಅಧಿಕಾರ ಇಲ್ದೆ ಟ್ರೆಸ್‌ಪಾಸ್ ಮಾಡಿದ್ದೀಯ ಅಂತ ಕೇಸ್ ಹಾಕ್ಬಿಡ್ತೀನಿ ಹುಷಾರ್''

''ತಪ್ಪಾಯ್ತು ನಿನ್ನ ತೋಟಾನ ಪ್ರವೇಶಿಸಿದ್ದಕ್ಕೆ. ನಿನ್ನ ಸೊಸೆ, ಬೀಗಿತ್ತಿ ಇಬ್ಬರೂ ನಮ್ಮ ಸಹಾಯ ಕೇಳಿದ್ದಕ್ಕೆ ಇಲ್ಲಿ ಬಂದ್ವಿ. ಇಲ್ಲಿ ಯಾವ ದೆವ್ವ ಭೂತಾನೂ ಇಲ್ಲ, ಎಲ್ಲ ನಿಮ್ಮ ಮಾವನೋರ್ದೇ ಆಟ ಅಂತ ಅವರಿಗೆ ಹೇಳಿ ಹೊರಡ್ತೀವಿ''

ಶರಲೇಖನ ಮಾತು ಕೇಳಿ ಆ ವ್ಯಕ್ತಿ ವಿಚಲಿತನಾದಂತೆ ಕಂಡಿತು.

''ದುಡುಕಬೇಡಿ. ಬನ್ನಿ ಇಲ್ಲೇ ಈ ಬಳ್ಳಿ ಮನೆಯಲ್ಲಿ ಕೂತು ಮಾತನಾಡೋಣ. ತಮ್ಮ ಪರಿಚಯ ಆಗಲಿಲ್ಲ''

''ನಾನು ಶರಲೇಖ. ಇವನು ನನ್ನ ಗೆಳೆಯ ವತ್ಸನ. ಮೊದಲು ನಿಮ್ಮ ನಾಟಕದ ವೇಷ ಬದಲಿಸಿ ಬನ್ನಿ. ಆ ಬಳ್ಳಿ ಮನೇಲೇ ಕಾಯ್ತಾ ಇರ್ತೀವಿ''

ಬಳ್ಳಿಮನೆಯಲ್ಲಿ ನಮ್ಮೊಂದಿಗೆ ಮಾತನಾಡಲು ಕುಳಿತ ಈ ಸಂಭಾವಿತ ವ್ಯಕ್ತಿಗೂ ಕೆಲವೇ ಕ್ಷಣಗಳ ಹಿಂದೆ ಕಂಡ ಆ ಬ್ರಹ್ಮರಾಕ್ಷಸನಿಗೂ ಯಾವ ಹೋಲಿಕೆಯೂ ಇರಲಿಲ್ಲ. ಜಟೆ, ಗಡ್ಡ ಕುಂಕುಮ, ಎಲ್ಲವನ್ನು ತ್ಯಜಿಸಿ, ಜುಬ್ಬಾ ಪಾಯಿಜಾಮ ಧರಿಸಿ ಬಂದ ಈತನ ದನಿಯಲ್ಲಿ ಗಾಂಭೀರ್ಯ ಇತ್ತು.

''ಎಲ್ಲಾ ಹೇಳಿಬಿಡ್ತೇನೆ ಶರಲೇಖ ಅವರೇ , ನಿಮ್ಮಲ್ಲೇನು ಮುಚ್ಚುಮರೆ. ಅಲ್ದೆ ನನ್ನ ಸೊಸೆ ಅಂದ್ರೆ ನನಗೆ ಪ್ರಾಣ. ಆಕೆ ನೆರವಿಗೆ ಬಂದಿದ್ದೀರ ನೀವು. ಕಳೆದ ವರ್ಷ ನನ್ನ ಪತ್ನಿ ತೀರಿಕೊಂಡ ಮೇಲೆ, ಒಬ್ಬೊಂಟಿಗನಾದ ನಾನು ಬಹಳ ಪರಿಶ್ರಮದಿದ ನನ್ನ ಜೀವನವನ್ನು ಪುನಃ ಒಂದು ಹದಕ್ಕೆ ತಂದೆ. ತೋಟದ ಕೆಲಸ, ಕ್ಲಬ್ಬಿನ ಜವಾಬ್ದಾರಿ, ಗೆಳೆಯರು, ಇವೆಲ್ಲದರ ಸಹಾಯದಿಂದ ಒಂದು ನೆಮ್ಮದಿಯ ಜೀವನ ಕಂಡುಕೊಂಡೆ. ಹಲವು ತಿಂಗಳ ಹಿಂದೆ ಮಗ ಸೊಸೆ ಬಂದು ಇಲ್ಲೇ ನೆಲಸಿದಾಗ ಈ ನೆಮ್ಮದಿಯ ಅಡಿಪಾಯಕ್ಕೆ ಕೊಡಲಿ ಪೆಟ್ಟು ಬಿತ್ತು. ಜವಾಬ್ದಾರಿ ಹೊತ್ತ ದಕ್ಷ ಸಂಭಾವಿತನ ಸ್ಥಾನದಿಂದ, ಸದಾ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕಾದ, ಸದಾ ವ್ಯಾಯಾಮ ಮಾಡಬೇಕಾದ, ಸದಾ ಮಕ್ಕಳ ಕಣ್ಣಿನಲ್ಲಿ ಕರುಣೆಗೆ ಪಾತ್ರನಾದ ಹೆಡ್ಡ ಹಿರಿಯ ಪ್ರಜೆಯಾಗಿ ಬದಲಾಗಬೇಕಾಯಿತು. ನಮ್ಮ ಬೀಗಿತ್ತಿ ಇಲ್ಲೇ ಬಂದು ನೆಲಸಿದ ಮೇಲಂತೂ, ಆಹಾರದಲ್ಲಿ ಉಪ್ಪು, ಎಣ್ಣೆ, ಸಕ್ಕರೆ, ಇವೆಲ್ಲಾ ವಿಷಸಮಾನ ಎಂಬ ಮಾತು ವೇದವಾಕ್ಯವಾಯಿತು. ಕ್ಲಬ್ಬಿಗೆ ಹೋಗಿ ಆಲ್ಕೋಹಾಲು ಕುಡಿಯುವ ಬದಲು ಮನೆಯಲ್ಲೇ ಹಾಲು ಕುಡಿಯಬಾರದೇ ಎಂಬ ಅಸಂಬದ್ಧ ಮಾತುಗಳನ್ನೂ ನಾನು ಕೇಳಬೇಕಾಯಿತು. ಆಕೆಯನ್ನ ಹೆದರಿಸಿ ಓಡಿಸುವುದೊಂದೇ ಮಾರ್ಗ ಅಂತ ಯೋಚಿಸಿ ಈ ಆಟ ಹೂಡಿದೆ. ನೀವು ತಿಳಿದವರಂತೆ ಕಾಣುತ್ತೀರಿ. ನಿಮ್ಮ ಕಣ್ಣುಗಳಲ್ಲಿ ಕರುಣೆ, ಸಹಾನುಭೂತಿಯ ಸೆಲೆ ಸ್ಪಷ್ಟವಾಗಿದೆ. ಏನು ಮಾಡಲಿ ಹೇಳಿ''

ಶರಲೇಖ ಆತನ ಭುಜದ ಮೇಲೆ ಕೈ ಇಟ್ಟ. ''ಸ್ವಾಮಿ , ಯೋಚನೆ ಬೇಡ. ನಿಮ್ಮ ಸ್ವತಂತ್ರ

ಜೀವನ ಶೈಲಿಗೆ ಧಕ್ಕೆ ಬರದಂತೆ ಒಂದು ಪರಿಹಾರವನ್ನು ಹೊಂದಿಸುವ ಭಾರವನ್ನು ನನಗೆ ಬಿಡಿ. ಈಗ ಆರಾಮ ಮಾಡಿ.'' ಎಂದು ಹೇಳಿದ ನಂತರ ನಾವಿಬ್ಬರೂ ಅಲ್ಲಿಂದ ಹೊರಟೆವು. ರಾತ್ರಿ ಹನ್ನೊಂದಕ್ಕೆ ಹಾಸನದ ಬಸ್ಸನ್ನು ಹಿಡಿದು ಚಿಕ್ಕಮಗಳೂರನ್ನು ಸೇರಿದಾಗ ಗಂಟೆ ಹನ್ನೆರಡಾಗಿತ್ತು.

''ನಿನ್ನೆ ಒಂದು ಅಪೂರ್ವ ಅನುಭವ ಆಯಿತು'' ಎಂದು ಪ್ರಾರಂಭಿಸಿದ ಶರಲೇಖ. ನಾವು ಪುನಃ ಕ್ಲಬ್ಬಿನ ಲೌಂಜಿನಲ್ಲಿ ಕುಳಿಕಿದ್ದೆವು. ಶರಲೇಖನ ಸಲಹೆಯ ಪ್ರಕಾರ ಹೇಮಾ ಒಬ್ಬಳೇ ನಮ್ಮನ್ನು ನೋಡಲು ಬಂದಿದ್ದಳು.

''ರಾತ್ರಿ ತೋಟದ ಹುಣಸೇ ಮರದ ಹತ್ತಿರ ಹೊಂಚು ಕಾದಿದ್ದೆವು. ಹತ್ತು ಗಂಟೆಯ ಹೊತ್ತಿಗೆ ಆ ಎಂಟಿಟಿ ಕಾಣಿಸಿಕೊಂಡಿತು. ನನಗೆ ಇದರಲ್ಲೆಲ್ಲಾ ನಂಬಿಕೆ ಇಲ್ಲ ಅಂದ ಮಾತ್ರಕ್ಕೆ, ಅದು ಕಣ್ಣ ಮುಂದೆ ನಿಂತಾಗ ಅದನ್ನು ಸುಳ್ಳು ಎನ್ನುವುದು ಖಂಡಿತ ವೈಜ್ಞಾನಿಕ ಮಾರ್ಗವಲ್ಲ. ನಾನು ಅದರ ಬಳಿ ತೆರಳಿ ''ಸಂಭಾವಿತರಿಗೆ ತೊಂದರೆ ಕೊಡುವುದು ನ್ಯಾಯವೇ?'' ಎಂದು ಕೇಳಿದೆ. ಅದಕ್ಕೆ ಆ ಪ್ರತಿರೂಪ ''ನಾನು ಈ ಮನೆಯ ಯಜಮಾನನ ಮಾವ. ನನ್ನ ಮಗಳು ಇದ್ದ ಮನೆಯಲ್ಲಿ ಅವಳ ಸರೀಕ ಮಹಿಳೆಯರು ಯಾರಿದ್ದರೂ ನನಗೆ ಸಹಿಸದು. ವಸುಂಧರಾ ತನ್ನ ಮನೆಗೆ ಹೋಗಲಿ. ನಾನು ಹಿಮಾಲಯಾಕ್ಕೆ ಹಿಂತಿರುಗುವೆ' ಅಂತ ಹೇಳಿತು. ಮುಂದಿನ ಕಾರ್ಯವಿಧಾನ ನಿನಗೇ ಬಿಟ್ಟದ್ದು ಎಂದ ಶರಲೇಖ.

ಒಂದು ಕ್ಷಣ ಹೇಮಾ ಮೌನಿಯಾಗಿದ್ದಳು. ಅನಂತರ ಸಂತಸದಿಂದ ಎದ್ದು ನಿಂತು ''ಓಹ್ ನಿಜಕ್ಕೂ ಒಂದು ದೊಡ್ಡ ಭಾರ ಕಳೆದಂತಾಯಿತು. ಸಧ್ಯ ಮನೆಗೆ ಏನೂ ಅಶುಭ ಆಗುಲ್ಲವಲ್ಲಾ, ಅಮ್ಮ ತನ್ನ ಮನೆಗೇ ಹೋಗುಕ್ಕೆ ಯಾವಾಗಲೂ ಸಿದ್ಧ. ನನ್ನ ಬಲವಂತಕ್ಕೆ ಇಲ್ಲಿಗೆ ಬಂದಿದ್ದಳು ಅಷ್ಟೇ. ಬಹಳ ಥ್ಯಾಂಕ್ಸ್ ಶರಲೇಖ ಅಂಕಲ್ ನಾಳೇನೇ ಅಮ್ಮನ್ನ ಮನೆಗೆ ಕರೆದುಕೊಂಡು ಹೋಗುವ ವ್ಯವಸ್ಥೆ ಮಾಡ್ತೇನೆ' ಎನ್ನುತ್ತಾ ನಮಗೆ ವಿದಾಯ ಹೇಳಿದಳು.

ಹೇಗಿದ್ದರೂ ಇಷ್ಟು ದೂರ ಬಂದಿದ್ದಾಯಿತು. ಕೆಮ್ಮಣ್ಣುಗುಂಡಿ ನೋಡಿ ಬರೋಣ ಅಂತ ನಾವಿಬ್ಬರೂ ಟ್ಯಾಕ್ಸಿ ಮಾಡಿಕೊಂಡು ನಿಸರ್ಗ ಸೌಂದರ್ಯವನ್ನ ಸವಿದು ಎರಡು ದಿನಗಳ ನಂತರ ಕ್ಲಬ್ಬಿಗೆ ಹಿಂತಿರುಗಿ ಬೆಂಗಳೂರಿಗೆ ಹೊರಡುವುದಕ್ಕೆ ಪೂರ್ವಭಾವಿಯಾಗಿ ರೂಮಿನ ಬಿಲ್ಲು ಕೇಳಿದೆವು. ಕ್ಲಬ್ಬಿನ ಮ್ಯಾನೇಜರ್ ನಮ್ಮ ಬಳಿಗೆ ಬಂದು ''ನಮ್ಮ ಮಾಜಿ ಅಧ್ಯಕ್ಷರು ನಿಮ್ಮ ಬಿಲ್ಲನ್ನು ಈಗಾಗಲೇ ಪಾವತಿ ಮಾಡಿದ್ದಾರೆ. ಈ ಪಾರ್ಸಲ್ಲನ್ನು ನಿಮಗೆ ಕೊಡಲು ಹೇಳಿದರು'' ಅಂತ ಒಂದು ಪಾರ್ಸೆಲ್ಲನ್ನು ಅವನಿಗೆ ಕೊಟ್ಟ. ಶರಲೇಖ ಪಾರ್ಸೆಲ್ ಬಿಚ್ಚಿ ನೋಡಿದ.ಅದರಲ್ಲಿ ಒಂದು ಕಾರ್ಡ್. ''ನಿಮ್ಮ ಎಲ್ಲ ಸಹಾಯಕ್ಕಾಗಿ ಇದೊಂದು ಪುಟ್ಟ ಉಡುಗೊರೆ''. ಎಂಬ ಟೆಕ್ಸ್ಟ್ ಇತ್ತು. ಪತ್ರದ ಜೊತೆ ಹಿಡಿಯಲ್ಲಿ ಮುತ್ತು ರತ್ನಗಳನ್ನು ಕೂರಿಸಿದ್ದ ಆರಿಂಚು ಉದ್ದದ ಭರ್ಜಿ ಹೊಳೆಯುತ್ತಿತ್ತು. ಶರಲೇಖ ಮುಗುಳ್ನಕ್ಕ. ಬಹಳ ಅಪೂರ್ವ ಅವನ ಮುಖದಲ್ಲಿ ಮುಗುಳ್ನಗೆ!

Mailing Date
5th of every month
Mailed at: Rajajinagar - PO

CPMG/KA/BGW-544/2006-2008
RNI-KAR-KAN / 2005 / 15457

Printed by: V.R. NATH for the Publisher KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.
Printed at: Ravi Graphics, 53/8, 2nd Main Road, Industrial Town, Rajajinagar, Bangalore - 560 010. Ph : 2330 5999.
Editor : M. SHIVAKUMAR